20 ವರ್ಷಗಳಿಂದ ಪ್ರಕಟವಾಗುತ್ತಿರುವ ಪ್ರಪ್ರಥಮ ರಾಷ್ಟ್ರೀಯ ಕನ್ನಡ ದಿನಪತ್ರಿಕೆ

# ದೆಹಲಿ ವಾರ್ತೆ

ನವದೆಹಲಿ 26° 37°

www.dehalivaarthe.com

EDITION: NEW DELHI - CIRCULATION IN UP & HARYANA | EDITOR : K.R. RENU | RNI No. DELKAN/2003/10363 | ಪುಟ 8 | ಸಂಪುಟ 20 | ಸಂಚಿಕೆ 72 | ನವದೆಹಲಿ | ಬೆಲೆ ₹ 8 | ಭಾನುವಾರ, ಸೆಪ್ಟೆಂಬರ್ 11, 2022

## ಒಳಪುಟಗಳಲ್ಲಿ

ವಂದೇಭಾರತ್ 2: ಅತೀ ವೇಗದ ರೈಲಿನ ಹೊಸ ವಿನ್ಯಾಸಕ್ಕೆ ಇಲಾಖೆ ಸಜ್ಜು - ಪು.4

## ಭಾರತವನ್ನು ವಿಜ್ಞಾನ-ತಂತ್ರಜ್ಞಾನದ ಜಾಗತಿಕ ಕೇಂದ್ರವಾಗಿಸಲು ರಾಜ್ಯಗಳು ಒಂದಾಗಬೇಕು: ಪಿಎಂ

**ನವದೆಹಲಿ, ಸೆ.10:** ಅಮೃತ ಕಾಲದಲ್ಲಿ ಭಾರತವನ್ನು ವಿಜ್ಞಾನ ಮತ್ತು ತಂತ್ರಜ್ಞಾನದ ಜಾಗತಿಕ ಕೇಂದ್ರವಾಗಿ ನಿರ್ಮಿಸಲು ಎಲ್ಲಾ ರಾಜ್ಯಗಳು ಒಟ್ಟಾಗಿ ಕೆಲಸ ಮಾಡಬೇಕೆಂದು ಪ್ರಧಾನಿ ನರೇಂದ್ರ ಮೋದಿ ಒತ್ತಾಯಿಸಿದರು. ಶನಿವಾರ ಅಹಮದಾಬಾದ್‌ನ ಸೈನ್ಸ್ ಸಿಟಿಯಲ್ಲಿ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಎರಡು ದಿನಗಳ ಕೇಂದ್ರ-ರಾಜ್ಯ ವಿಜ್ಞಾನ ಸಮಾವೇಶ ವನ್ನು ಉದ್ಘಾಟಿಸಿದ ನಂತರ ಪ್ರಧಾನ ಮಂತ್ರಿಯವರು ಸಭೆಯನ್ನುದ್ದೇಶಿಸಿ ಮಾತನಾಡುತ್ತಿದ್ದರು.

ವಿಜ್ಞಾನಿಗಳಿಗೆ ಅಗತ್ಯವಿರುವ ಎಲ್ಲ ಬೆಂಬಲವನ್ನು ನೀಡುವಂತೆ ಮತ್ತು ರಾಜ್ಯದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಂಸ್ಥೆಗಳನ್ನು ನಿರ್ಮಿಸಲು ಒತ್ತು ನೀಡುವಂತೆ ಮೋದಿ ರಾಜ್ಯಗಳನ್ನು ಕೇಳಿದರು. ರಾಜ್ಯಗಳ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿಯೂ ಇನ್ನೋವೇಶನ್ ಲ್ಯಾಬ್‌ಗಳ ಸಂಖ್ಯೆಯನ್ನು ಹೆಚ್ಚಿಸಬೇಕು ಎಂದರು. ವೈಜ್ಞಾನಿಕ ಸಂಶೋಧನೆಯನ್ನು ತಳ ಮಟ್ಟಕ್ಕೆ ಕೊಂಡೊಯ್ಯುವ ಮತ್ತು ಸ್ಥಳೀಯ ಸಮಸ್ಯೆಗಳಿಗೆ ವಿಜ್ಞಾನ ಆಧಾರಿತ ಪರಿಹಾರಗಳನ್ನು ಕಂಡುಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ತಮ್ಮ ಸರ್ಕಾರವು ವಿಜ್ಞಾನ ಆಧಾರಿತ ಅಭಿವೃದ್ಧಿಯ ದೃಷ್ಟಿಯಲ್ಲಿ ಕೆಲಸ ಮಾಡುತ್ತಿದೆ




ನವದೆಹಲಿಯಿಂದ ವಿಡಿಯೋ ಕಾನ್ಫರೆನ್ಸಿಂಗ್ ಮೂಲಕ ಗುಜರಾತ್‌ನ ಅಹಮದಾಬಾದ್‌ನಲ್ಲಿ ಸೆಂಟರ್-ಸ್ಟೇಟ್ ಸೈನ್ಸ್ ಕಾನ್ಕ್ಲೇವ್ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನಮಂತ್ರಿ ಭಾಷಣ ಮಾಡಿದರು.

ಮತ್ತು 2014 ರಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಹೂಡಿಕೆಯಲ್ಲಿ ಗಣನೀಯ ಏರಿಕೆಯಾಗಿದೆ ಎಂದು ಪ್ರಧಾನಮಂತ್ರಿ ಹೇಳಿದರು. ಈ ಅಮೃತ ಕಾಲದಲ್ಲಿ ಭಾರತವನ್ನು ಸಂಶೋಧನೆ ಮತ್ತು ನಾವೀನ್ಯತೆಗಳ ಜಾಗತಿಕ ಕೇಂದ್ರವನ್ನಾಗಿ ಮಾಡಲು ಎಲ್ಲರೂ ಏಕಕಾಲದಲ್ಲಿ ಅನೇಕ ರಂಗಗಳಲ್ಲಿ ಕೆಲಸ ಮಾಡಬೇಕಾಗಿದೆ ಎಂದು ಪ್ರಧಾನಿ ಹೇಳಿದರು. ಜನರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಲು ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ಸಂಶೋಧನೆಗಳನ್ನು ಸ್ಥಳೀಯ ಮಟ್ಟಕ್ಕೆ ಕೊಂಡೊಯ್ಯುವ ಅಗತ್ಯವಿದೆ ಎಂದು ಪ್ರಧಾನಿ ಹೇಳಿದರು. ದೇಶವು ತನ್ನ ವಿಜ್ಞಾನಿಗಳ ಸಾಧನೆಯನ್ನು ಕೊಂಡಾಡಿದಾಗ ವಿಜ್ಞಾನವು ಸಮಾಜ ಮತ್ತು ಸಂಸ್ಕೃತಿಯ ಭಾಗವಾಗುತ್ತದೆ ಎಂದರು. ಜೈ ಜವಾನ್, ಜೈ ಕಿಶನ್, ಜೈ ವಿಜ್ಞಾನ, ಜೈ ಅನುಸಂಧಾನ ಎಂಬ ಮಂತ್ರದೊಂದಿಗೆ ನವ ಭಾರತ ಮುನ್ನಡೆಯುತ್ತಿದೆ ಎಂದರು. ಕೇಂದ್ರ ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವ ಜಿತೇಂದ್ರ ಸಿಂಗ್ ಮಾತನಾಡಿ, ನರೇಂದ್ರ ಮೋದಿಯವರ ನೇತೃತ್ವದಲ್ಲಿ ಸರ್ಕಾರವು ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಖಾಸಗಿ ವಲಯದ ಸಹಭಾಗಿತ್ವವನ್ನು ಹೆಚ್ಚಿಸಲು ವಿವಿಧ ಉಪಕ್ರಮಗಳನ್ನು ಕೈಗೊಂಡಿದೆ. ಈ ಸಂದರ್ಭದಲ್ಲಿ ಗುಜರಾತ್ ಮುಖ್ಯಮಂತ್ರಿ ಭೂಪೇಂದ್ರ ಪಟೇಲ್, ಗುಜರಾತ್ನ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವ ಜಿತುಭಾಯಿ ವಘಾನಿ ಮತ್ತು ಗುಜರಾತ್ ಸರ್ಕಾರದ ಪ್ರಧಾನ ಕಾರ್ಯದರ್ಶಿ ಪಂಕಜ್ ಕುಮಾರ್ ಉಪಸ್ಥಿತರಿದ್ದರು.

ನಾವೀನ್ಯತೆ ಮತ್ತು ಉದ್ಯಮಶೀಲತೆಯನ್ನು ಉತ್ತೇಜಿಸುವಲ್ಲಿ ಕೇಂದ್ರ ರಾಜ್ಯ ಸಮನ್ವಯ ಮತ್ತು ಸಹಯೋಗದ ಕಾರ್ಯವಿಧಾನವನ್ನು ಬಲಪಡಿಸಲು ಸಮಾವೇಶವನ್ನು ಆಯೋಜಿಸಲಾಗಿದೆ. ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಸಚಿವರು, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯದ ಹಿರಿಯ ಅಧಿಕಾರಿಗಳು, ಉದ್ಯಮದ ಪ್ರತಿನಿಧಿಗಳು, ಎನ್ಜಿಒಗಳು, ಯುವ ವಿಜ್ಞಾನಿಗಳು ಮತ್ತು ವಿದ್ಯಾರ್ಥಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು.

## ರಾಷ್ಟ್ರಪತಿಯಿಂದ ನಾಡಹಬ್ಬ ದಸರಾ ಉದ್ಘಾಟನೆ



**ಬೆಂಗಳೂರು, ಸೆ.10:** ವಿಶ್ವವಿಖ್ಯಾತ ನಾಡಹಬ್ಬ ದಸರಾವನ್ನು ಈ ಬಾರಿ ರಾಷ್ಟ್ರಪತಿ ದ್ರೌಪತಿ ಮುರ್ಮು ಉದ್ಘಾಟಿಸಲಿದ್ದಾರೆ. ಸೆಪ್ಟೆಂಬರ್ 26 ರಿಂದ ಪ್ರಾರಂಭವಾಗಲಿರುವ ನಾಡಹಬ್ಬ ಮೈಸೂರು ದಸರಾವನ್ನು ಉದ್ಘಾಟಿಸಲು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಸಮ್ಮತಿಸಿದ್ದಾರೆ.

ದಸರಾ ಉದ್ಘಾಟನೆಗೆ ರಾಷ್ಟ್ರಪತಿಯವರನ್ನು ಆಹ್ವಾನಿಸಿ ಸೆಪ್ಟೆಂಬರ್ 6 ರಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಪತ್ರ ಬರೆದಿದ್ದರು. ಇದಕ್ಕೆ ರಾಷ್ಟ್ರಪತಿಯವರು ಸಮ್ಮತಿ ಸೂಚಿಸಿರುವುದಾಗಿ ರಾಷ್ಟ್ರಪತಿ ಭವನದ ಅಧಿಕಾರಿಗಳು ಮುಖ್ಯಮಂತ್ರಿ ಕಚೇರಿಗೆ ಪತ್ರದ ಮೂಲಕ ಮಾಹಿತಿ ನೀಡಿದ್ದಾರೆ.

ಮೈಸೂರು ದರಸಾ ಸೆಪ್ಟೆಂಬರ್ 26 ರಿಂದ ಆರಂಭಗೊಳ್ಳಲಿದ್ದು, ಅಕ್ಟೋಬರ್ 5 ವರೆಗೆ ನಡೆಯಲಿದೆ.

## ಲಿಜ್ ಟ್ರಸ್‌ಗೆ ಪ್ರಧಾನಿ ಮೋದಿ ಅಭಿನಂದನೆ



**ನವದೆಹಲಿ: ಸೆ. 10:** ಪ್ರಧಾನಿ ನರೇಂದ್ರ ಮೋದಿ ಅವರು ಶನಿವಾರ ಬ್ರಿಟನ್‌ನ ನೂತನ ಪ್ರಧಾನಿ ಲಿಜ್ ಟ್ರಸ್ ಅವರೊಂದಿಗೆ ದೂರವಾಣಿಯಲ್ಲಿ ಮಾತನಾಡಿದ್ದಾರೆ. ಅವರ ಹೊಸ ಪಾತ್ರವನ್ನು ಅಭಿನಂದಿಸಿದ್ದಾರೆ. ಬ್ರಿಟನ್‌ನಲ್ಲಿ ಸುದೀರ್ಘ ಸೇವೆ ಸಲ್ಲಿಸಿದ ರಾಣಿ ಎಲಿಜಬೆತ್ ಅವರ ನಿಧನಕ್ಕೆ ಸಂತಾಪ ಸೂಚಿಸಿದ್ದಾರೆ ಮತ್ತು ಎರಡು ರಾಷ್ಟ್ರಗಳ ನಡುವೆ ಮುಕ್ತ-ವ್ಯಾಪಾರ ಒಪ್ಪಂದದ ಮಾತುಕತೆಗಳನ್ನು ತಿಳಿಸಿದ್ದಾರೆ.


ಯುಕೆ ಪ್ರಧಾನ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡಿದ್ದಕ್ಕಾಗಿ ಪಿಎಂ ಟ್ರಸ್ ಅವರನ್ನು ಪ್ರಧಾನಿ ಮೋದಿ ಅಭಿನಂದಿಸಿದರು. ಅವರು ವ್ಯಾಪಾರ ಕಾರ್ಯದರ್ಶಿ ಮತ್ತು ವಿದೇಶಾಂಗ ಕಾರ್ಯದರ್ಶಿಯಾಗಿ ಅವರ ಹಿಂದಿನ ಪಾತ್ರಗಳಲ್ಲಿ ಭಾರತ-ಯುಕೆ ದ್ವಿಪಕ್ಷೀಯ ಸಂಬಂಧಕ್ಕೆ ಅವರು ನೀಡಿದ ಕೊಡುಗೆಗಳನ್ನು ಶ್ಲಾಘಿಸಿದರು ಎಂದು ಸರ್ಕಾರದ ಪತ್ರಿಕಾ ಪ್ರಕಟಣೆ ತಿಳಿಸಿದೆ.

ಉಭಯ ನಾಯಕರು 2030 ರ ಮಾರ್ಗಸೂಚಿಯ ಅನುಷ್ಠಾನ, ವ್ಯಾಪಾರ ಮಾತುಕತೆಗಳಲ್ಲಿ ಸಹಕಾರ, ರಕ್ಷಣೆ ಮತ್ತು ಭದ್ರತಾ ಸಹಕಾರ ಮತ್ತು ಉಭಯ ದೇಶಗಳ ನಡುವಿನ ಜನರ-ಜನರ ಬಾಂಧವ್ಯ ಸೇರಿದಂತೆ ದ್ವಿಪಕ್ಷೀಯ ಸಂಬಂಧಗಳ ಬಗ್ಗೆಯೂ ಚರ್ಚಿಸಿದರು ಎಂದು ಹೇಳಿಕೆ ತಿಳಿಸಿದೆ.

ಭಾರತ ಮತ್ತು ಯುಕೆ ನಡುವಿನ ಸಮಗ್ರ ಕಾರ್ಯತಂತ್ರದ ಪಾಲುದಾರಿಕೆಯನ್ನು ಮತ್ತಷ್ಟು ಬಲಪಡಿಸಲು ಇಬ್ಬರೂ ನಾಯಕರು ಬದ್ಧರಾಗಿದ್ದಾರೆ ಎಂದು ಹೇಳಿಕೆ ತಿಳಿಸಿದೆ. ಭಾರತದ ಜನರ ಪರವಾಗಿ, ಪ್ರಧಾನ ಮಂತ್ರಿ ಮೋದಿ ಅವರು ರಾಜಮನೆತನದ ಕುಟುಂಬ ಮತ್ತು ಯುಕೆ ಜನರಿಗೆ ರಾಣಿ ಎಲಿಜಬೆತ್ IIರ ದುಃಖದ ನಿಧನದ ಬಗ್ಗೆ ಆಳವಾದ ಸಂತಾಪವನ್ನು ತಿಳಿಸಿದ್ದಾರೆ ಎಂದು ಪ್ರಕಟಣೆ ಸೇರಿಸಿದೆ.

## ನವಭಾರತ ನಿರ್ಮಾಣಕ್ಕಾಗಿ ನವಕರ್ನಾಟಕ ಮಾಡುವುದು ನಮ್ಮ ಗುರಿ

**ದೊಡ್ಡಬಳ್ಳಾಪುರ, ಸೆ. 10 –** ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ದಿಟ್ಟ ನಿಲುವಿನಿಂದ 130 ಕೋಟಿ ಜನರಿಗೆ ಲಸಿಕೆ ನೀಡಲಾಗಿದೆ. ಕಾಂಗ್ರೆಸ್ ಅಧಿಕಾರದಲ್ಲಿದ್ದಿದ್ದರೆ ನರಕಕ್ಕೆ ತಳ್ಳುತ್ತಿತ್ತು. ಮೊದಲು 30 ಕೆಜಿ ಅಕ್ಕಿ ಸಿಗುತ್ತಿತ್ತು. ಅದನ್ನು 4 ಕೆಜಿಗೆ ಇಳಿಸಿದಿರಿ ಇದರಲ್ಲಿ ಭ್ರಷ್ಟಾಚಾರ ನಡೆಯಿತು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಆರೋಪಿಸಿದರು. ದೊಡ್ಡಬಳ್ಳಾಪುರ.. ಬಿಜೆಪಿ ಜನ ಸ್ಪಂದನ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ದುರಾಡಳಿತದ ಬಗ್ಗೆ ರಾಜ್ಯದ ಜನರು ಬೇಸತ್ತಿದ್ದಾರೆ. ಕಾಂಗ್ರೆಸ್ ನಾಟಕ ರಾಜ್ಯದಲ್ಲಿ ನಡೆಯುವುದಿಲ್ಲ. ಯಡಿಯೂರಪ್ಪ ಅವರ ನೇತೃತ್ವದ ಯೊಜನೆಗಳನ್ನು ಮುಂದುವರೆಸಿಕೊಂಡು ಹೋಗುತ್ತಿದ್ದೇನೆ ಎಂದು ಹೇಳಿದ ಅವರು ಹಲವು ಯೋಜನೆಗಳನ್ನು ಘೋಷಿಸಿದರು.



20 ಲಕ್ಷ ಮಕ್ಕಳಿಗೆ ವಿದ್ಯಾನಿಧಿ ಯೋಜನೆ. ರೈತರಿಗೆ ರೈತ ಶಕ್ತಿ ಯೋಜನೆ, ಯಶಸ್ವಿನಿ ಯೋಜನೆ, ಹಾಲು ಉತ್ಪಾದಕರಿಗೆ ಬ್ಯಾಂಕ್ ಸ್ಥಾಪನೆ. ಅದು ದೊಡ್ಸಬಳ್ಳಾಪುರ, ಚಿಕ್ಕಬಳ್ಳಾಪುರ ಭಾಗದ ಜನರಿಗೆ ಹೆಚ್ಚಿನ ಅನುಕೂಲ ಆಗಲಿದೆ, ಎಸ್ಸಿ ಎಸ್ಟಿ ವಿದ್ಯಾರ್ಥಿಗಳ ಸ್ಕಾಲರ್ ಶಿಪ್ ಹೆಚ್ಚಳ, ಬಿಪಿಎಲ್ ಕಾರ್ಡ್ ಹೊಂದಿರುವ ಎಸ್ಸಿ ಎಸ್ಟಿ ಕುಟುಂಬಗಳಿಗೆ 75 ಯುನಿಟ್ ವಿದ್ಯುತ್ ಉಚಿತವಾಗಿ ನೀಡಲಾಗುತ್ತಿದೆ. ಎಸ್ಸಿ ಎಸ್ಟಿ ಯುವಕರಿಗೆ ಸ್ವಯಂ ಉದ್ಯೋಗಕ್ಕೆ ತರಬೇತಿ ನೀಡುತ್ತಿದ್ದೇವೆ ಎಂದು ಹೇಳಿದರು. ಈಗಾಗಲೆ ಕೋಲಾರ, ಚಿಕ್ಕಬಳ್ಳಾಪುರ ಕೈಗಾರಿಕಾ ಟೌನ್ ಶಿಪ್ ಮಾಡಲು ತೀರ್ಮಾನ ಮಾಡಲಾಗಿದೆ. ದೊಡ್ಡಬಳ್ಳಾಪುರ, ನೆಲಮಂಗಲ, ದೇವನಹಳ್ಳಿ 3 ನಗರಗಳನ್ನು ಸೆಟಲೈಟ್ ಟೌನ್ ಗಳಾಗಿ ಅಭಿವೃದ್ಧಿಪಡಿಸಲಾಗುವುದು. ನವ ಭಾರತ ನಿರ್ಮಾಣಕ್ಕಾಗಿ ನವ ಕರ್ನಾಟಕ ಮಾಡುವುದು ನಮ್ಮ ಗುರಿಯಾಗಿದೆ.

ನಾವು ದೊಡ್ಡಬಳ್ಳಾಪುರದಿಂದ ಜನಸ್ಪಂದನ ಯಾತ್ರೆಯನ್ನು ರಾಜ್ಯಾದ್ಯಂತ ನಡೆಸುತ್ತೇವೆ ತಾಕತ್ ಇದ್ದರೆ ನಮ್ಮ ಯಾತ್ರೆಯನ್ನು ನಿಲ್ಲಿಸಿ ನಿಮ್ಮ ಮಾತಿನಿಂದಲ್ಲ. ಇದು ಪ್ರಜಾಪ್ರಭುತ್ವ, ಜನರು ನಿರ್ಧಾರ ಮಾಡುತ್ತಾರೆ. ರಾಜ್ಯದಲ್ಲಿ ಪ್ರತಿ ಗ್ರಾಮಗಳಿಗೆ ಜನಸ್ಪಂದನ ಯಾತ್ರೆ ನಡೆಸುತ್ತೇವೆ. ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುತ್ತದೆ. ನಮ್ಮ ಸಾಧನೆಗಳ ರಿಪೋರ್ಟ್ ಕಾರ್ಡ್ ತೋರಿಸಿ ನಿಮ್ಮ ಮುಂದೆ ಬಂದು ನಿಲ್ಲುತ್ತೇವೆ ಆಶೀರ್ವಾದ ಮಾಡಿ. ಈ ಜನಸ್ಪಂದನ ವಿಜಯೋತ್ಸವವನ್ನಾಗಿ ಮಾಡುತ್ತೇವೆ. ನನ್ನ ಅದಮ್ಯ ಶಕ್ತಿಯನ್ನು ಇಮ್ಮಡಿಗೊಳಿಸಿ ಪಕ್ಷ ಅಧಿಕಾರಕ್ಕೆ ತರಲು ಹೊರಡುತ್ತಿದ್ದೇನೆ ಎಂದು ಹೇಳಿದರು.

## ಇದು ಸಂಗ್ರಾಮದ ವೇದಿಕೆ: ಸ್ಮೃತಿ ಇರಾನಿ




**ಬೆಂಗಳೂರು ಸೆ.10:** ಕರ್ನಾಟಕಕ್ಕೆ ಭಾರತ್ ಮಾಲಾ ಯೋಜನೆ ಮೂಲಕ 55 ಸಾವಿರ ಕೋಟಿ ಅನುದಾನ ಕೊಡುವ ಉದ್ದೇಶವಿದೆ ಎಂದು ಕೇಂದ್ರ ಸಚಿವೆ ಸ್ಮೃತಿ ಇರಾನಿ ಹೇಳಿದ್ದಾರೆ.

ರಾಜ್ಯ ಬಿಜೆಪಿ ಘಟಕದಿಂದ ದೊಡ್ಡಬಳ್ಳಾಪುರದಲ್ಲಿ ನಡೆದ ಜನಸ್ಪಂದನಾ ಕಾರ್ಯಕ್ರಮ ವನ್ನುದ್ದೇಶಿಸಿ ಮಾತನಾಡಿದ ಅವರು, ಶಿವಕುಮಾರ ಸ್ವಾಮೀಜಿ, ಭೋಗನಂದೀಶ್ವರ, ಮಾಸ್ತಿ ವೆಂಕಟೇಶ ಅಯ್ಯಂಗಾರ್, ವಿಶ್ವೇಶ್ವರಯ್ಯ, ಪ್ರವೀಣ್ ನೆಟ್ಟಾರು ಮುಂತಾದವರನ್ನು ಸ್ಮರಿಸಿದರು.

ಈ ಸಮಾವೇಶ ಈ ಪುಣ್ಯ ಭೂಮಿಯಲ್ಲಿ ನಡೆಯುತ್ತಿದ್ದು, ಮತ್ತೆ ಬಿಜೆಪಿ ಅಧಿಕಾರಕ್ಕೆ ಬಂದೇ ಬರುತ್ತದೆ. ಏಕೆಂದರೆ ಇದು ಸಂಗ್ರಾಮದ ವೇದಿಕೆ ಎಂದು ನುಡಿದಿದ್ದಾರೆ.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದ ಸಚಿವೆ, ಕಾಂಗ್ರೆಸ್ ಪಕ್ಷಪಾತದ ಸರ್ಕಾರ ಆಗಿತ್ತು. ಹಾಗಾಗಿ ಕಾಂಗ್ರೆಸ್ ಇದ್ದಾಗ ಜನರಿಗೆ ತಾರತಮ್ಯ ಮಾಡಿದೆ. ಕೇಂದ್ರದಲ್ಲಿ ಕಾಂಗ್ರೆಸ್ ಇದ್ದಾಗ ಕರ್ನಾಟಕಕ್ಕೆ ಹಣಕಾಸು ಆಯೋಗದ ಮೂಲಕ ಕೊಟ್ಟಿದ್ದು ಕೇವಲ 2 ಸಾವಿರ ಕೋಟಿ. ಆದರೆ ಬಿಜೆಪಿ ಡಬಲ್ ಇಂಜಿನ್ ಸರ್ಕಾರ. ನಮ್ಮ ಕೇಂದ್ರ ಸರ್ಕಾರ ಈಗ ರಾಜ್ಯಕ್ಕೆ ಹಣಕಾಸು ಆಯೋಗದಿಂದ 5 ಸಾವಿರ ಕೋಟಿ ಅನುದಾನ ಕೊಟ್ಟಿದೆ. ಕರ್ನಾಟಕದಲ್ಲಿ ರಸ್ತೆ ಅಭಿವೃದ್ಧಿಗೆ 9,700 ಕೋಟಿ ರೂ. ಅನುದಾನ ಕೊಟ್ಟಿದೆ. ಪ್ರಧಾನಿ ಮೋದಿ ಸಬರ್ಬನ್ ರೈಲು ಯೋಜನೆಗೆ 15 ಸಾವಿರ ಕೋಟಿ ಅನುದಾನ ಕೊಟ್ಟಿದ್ದಾರೆ. ಕಳೆದ ಏಳು ವರ್ಷಗಳಲ್ಲಿ ಹೆದ್ದಾರಿಗಳ ಅಭಿವೃದ್ಧಿಗಾಗಿಯೇ 37 ಸಾವಿರ ಕೋಟಿ ರೂ. ಕೊಡಲಾಗಿದೆ. ಮುಂದೆಯೂ ಭಾರತ್ ಮಾಲಾ ಯೋಜನೆ ಮೂಲಕ 55 ಸಾವಿರ ಕೋಟಿ ಕೊಡುವ ಉದ್ದೇಶ ಇದೆ ಎಂದು ಹೇಳಿದ್ದಾರೆ.

## ಭಾರತದ ಪರಂಪರೆ ಗೌರವಿಸುವ ಪ್ರಧಾನಿ ರಾಷ್ಟ್ರವನ್ನಾಳುತ್ತಿರುವುದು ಸೌಭಾಗ್ಯ: ಸಿಎಂ ಯೋಗಿ



ಅಹಮ್ಮದಾಬಾದ್, ಸೆ.10: ರಾಷ್ಟ್ರದ ಪರಂಪರೆ ಬಗ್ಗೆ ಅತ್ಯಂತ ಹೆಮ್ಮೆಯ ಭಾವ ಮಾತ್ರವಲ್ಲ, ಭಾರತವನ್ನು 'ಏಕ್ ಭಾರತ್ ಶ್ರೇಷ್ಠ ಭಾರತ'ವಾಗಿ ಪರಿವರ್ತಿಸುವ ದೃಢ ಸಂಕಲ್ಪಧಾರಿ ಪ್ರಧಾನಿಯನ್ನು ರಾಷ್ಟ್ರವಿಂದು ಹೊಂದಿರುವುದು ರಾಷ್ಟ್ರದ ಮತ್ತು ರಾಷ್ಟ್ರವಾಸಿಗಳಾದ ನಮ್ಮೆಲ್ಲರ ಸೌಭಾಗ್ಯವೆಂದು ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಶ್ಲಾಘಿಸಿದ್ದಾರೆ.

ಮಾಜಿ ಪ್ರಧಾನಿ ದಿ.ಜವಾಹರಲಾಲ್ ನೆಹರೂ ಮತ್ತು ಪ್ರಧಾನಿ ನರೇಂದ್ರ ಮೋದಿಜಿ ವ್ಯಕ್ತಿತ್ವವನ್ನು ಪರಸ್ಪರ ತುಲನೆ ಮಾಡಿದ ಯೋಗಿ ಆದಿತ್ಯನಾಥ್, ನೆಹರೂ ಅವರಿಗೆ ರಾಷ್ಟ್ರದ ಪರಂಪರೆ ಬಗ್ಗೆ ಇನಿತೂ ಹೆಮ್ಮೆ ಇರಲಿಲ್ಲ . ಆದರೆ ಮೋದಿಜಿ ದೇಶದ ಭವ್ಯ ಪರಂಪರೆ ಬಗ್ಗೆ ತುಂಬು ಅಭಿಮಾನ ಉಳ್ಳವರು ಎಂದು ಪುನರುಚ್ಚರಿಸಿದರು. ಶುಕ್ರವಾರ ರುದ್ರಾಕ್ಷ ಸಮಾವೇಶ ಕೇಂದ್ರದಲ್ಲಿ ನಡೆದ ಮೋದಿ :20 ಕೃತಿ ಬಿಡುಗಡೆ ಸಮಾರಂಭದಲ್ಲಿ ಅವರು ಮುಖ್ಯ ಅತಿಥಿಯಾಗಿದ್ದರು.

ಜಗತ್ತಿಗೇ ಮಾದರಿ:

ಭಯೋತ್ಪಾದನೆಯನ್ನು ಹೇಗೆ ಮೂಲೋತ್ಪಾಟನೆ ಮಾಡಬೇಕೆಂಬ ವಿಚಾರದಲ್ಲಿ ಭಾರತ ಇಡೀ ಜಗತ್ತಿಗೆ ಮಾದರಿಯಾಗಿದೆ. ಕಾಶ್ಮೀರದಲ್ಲಿ ಭಯೋತ್ಪಾದನೆ ಪಿಡುಗನ್ನು ಬೇರು ಸಮೇತ ನಾಶ ಮಾಡುವ ಮೂಲಕ ತಮ್ಮ ನಾಯಕತ್ವದ ಸಾಮರ್ಥ್ಯ ಏನೆಂಬುದನ್ನು ಮೋದಿಜಿ ಇಡೀ ಜಗತ್ತಿಗೇ ಸಾರಿ ತೋರಿದ್ದಾರೆ.

ಶ್ರೀರಾಮ ಮಂದಿರಕ್ಕೆ ಚಾಲನೆ ನೀಡಿದ್ದು ಮೋದಿ:

ದೇಶದ ನ್ಯಾಯಾಲಯಗಳು ನೀಡಿದ ಕೆಲವೇ ಕೆಲವು ಮಹತ್ತ್ವದ ತೀರ್ಪುಗಳು ಸಾಮಾಜಿಕ ಪರಿವರ್ತನೆ ತರಲು ವಿಫಲವಾಗಿವೆ. ಇನ್ನು, ಸೋಮನಾಥ ದೇವಾಲಯದ ಪುನರ್ ನಿರ್ಮಾಣಕ್ಕೆ ಮುಂದಾಗದಂತೆ ದೇಶದ ಪ್ರಧಾನಿಗಳೇ ರಾಷ್ಟ್ರಪತಿಗಳನ್ನು ತಡೆದು ನಿಲ್ಲಿಸಿದ ನಿದರ್ಶನಗಳಿವೆ. ಆದರೆ ನರೇಂದ್ರ ಮೋದಿಜಿ ವ್ಯಕ್ತಿತ್ವ ಅದಲ್ಲ , ಅಯೋಧ್ಯೆಯಲ್ಲಿ ಭವ್ಯ ಶ್ರೀರಾಮ ಮಂದಿರ ನಿರ್ಮಾಣ ಕಾಮಗಾರಿಗೆ ಚಾಲನೆ ನೀಡಿದ್ದೇ ಪ್ರಧಾನಿ ಮೋದಿಜಿ. ಇದು ಮೋದಿಜಿ ಅವರ ವಿಶಿಷ್ಟ ಮತ್ತು ಅಪೂರ್ವ ಸಾಮರ್ಥ್ಯ ಎಂದು ಯೋಗಿ ಆದಿತ್ಯನಾಥ್ ಬಣ್ಣಿಸಿದರು.

ಜಗತ್ತಿನ ನಂ.1 ಜನಪ್ರಿಯ ನಾಯಕ:

ಜಗತ್ತಿನ ಜನಪ್ರಿಯ ನಾಯಕರ ಪೈಕಿ ನರೇಂದ್ರ ಮೋದಿಜಿ ಒಬ್ಬರು. ಒಂದಲ್ಲ , ಎರಡಲ್ಲ , ಸತತ ತೃತೀಯ ಬಾರಿ ಮೋದಿಯವರು ವಿಶ್ವದ ನಂ.1 ಜನಮೆಚ್ಚುಗೆಯ ನಾಯಕರಾಗಿ ಜನಮಾನಸಕ್ಕೆ ಹತ್ತಿರವಾಗಿದ್ದಾರೆ. ಇದಕ್ಕೆ ಮೂಲ ಕಾರಣ ಅವರ ಅಪೂರ್ವ ವ್ಯಕ್ತಿತ್ವ . ಪ್ರಸ್ತುತ ಬಿಡುಗಡೆ ಮಾಡಲಾದ ಕೃತಿಯು ಕಳೆದ 20ವರ್ಷಗಳಲ್ಲಿ ನರೇಂದ್ರ ಮೋದಿಜಿ ನಿರ್ವಹಿಸಿರುವ ಆಡಳಿತಾತ್ಮಕ ಚಟುವಟಿಕೆಗಳ ಪೂರ್ಣ ಮಾಹಿತಿಯನ್ನು ಒಳಗೊಂಡಿದೆ. ಸಮಾಜದ ವಿವಿಧ ಸ್ತರಗಳ ಜನರೇ ಮುಂದೆ ಬಂದು ಈ ಮಾಹಿತಿ ನೀಡಿದ್ದಾರೆ. ಕೃತಿಯ ಹಿಂದಿ ಆವೃತ್ತಿ ಕಾಶಿಯಲ್ಲಿ ಬಿಡುಗಡೆಯಾಗುತ್ತಿರುವುದಕ್ಕಾಗಿ ಕಾಶಿಯ ಜನರನ್ನು ತಾನು ಅಭಿನಂದಿಸುತ್ತೇನೆ ಎಂದರು ಯೋಗಿ ಆದಿತ್ಯನಾಥ್.


ಜಗತ್ತಿನ 5ನೇ ಬೃಹತ್ ಆರ್ಥಿಕತೆ:

ಭಾರತವನ್ನು ಬರೋಬ್ಬರಿ ಎರಡು ನೂರು ವರ್ಷಗಳ ಕಾಲ ಆಳಿದ್ದ ಬ್ರಿಟನ್‌ನ್ನು ಹಿಂದಿಕ್ಕಿ ಭಾರತ ವಿಶ್ವದ ಐದನೇ ಬೃಹತ್ ಆರ್ಥಿಕತೆಯಾಗಿ ಹೊರಹೊಮ್ಮಿದೆ. ಇದಕ್ಕೂ ಕಾರಣ ಮೋದಿಜಿ ಅವರ ದೂರದೃಷ್ಟಿ ಮತ್ತು ಅಹರ್ನಿಶಿ ಪರಿಶ್ರಮ ಎಂದವರು ಮೆಚ್ಚುಗೆ ವ್ಯಕ್ತಪಡಿಸಿದರು.

ಕಾರ್ಯಕ್ರಮಕ್ಕೆ ಮುನ್ನ ಘಾಜಿಪುರ ಜಿಲ್ಲೆಯ ಸ್ನಾತಕೋತ್ತರ ಕಾಲೇಜಿನಲ್ಲಿ ರಾಜೇಶ್ವರ ಪ್ರಸಾದ್ ಸಿಂಗ್ ಅವರ ಪುತ್ಥಳಿಯನ್ನು ಆದಿತ್ಯನಾಥ್ ಅನಾವರಣಗೊಳಿಸಿದರು.




## ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಕಾರ್ಯಕ್ರಮಗಳು



**11ನೇ ಸೆಪ್ಟೆಂಬರ್ 2022 ಭಾನುವಾರ**

| | |
|---|---|
| | ಕಾಯ್ದಿರಿಸಲಾಗಿದೆ |

## ನಿತ್ಯ ಪಂಚಾಂಗ 11.09.2022 ಭಾನುವಾರ



ಶ್ರೀ ಶುಭಕೃತ್ ನಾಮ ಸಂವತ್ಸರ, ಉತ್ತರಾಯಣ–ದಕ್ಷಿಣಾಯನ ಗ್ರೀಷ್ಮ–ವರ್ಷ ಋತು

ಪಾಡ್ಯ, ಪೂಭಾ ನಕ್ಷತ್ರ, ಪ್ರವಚನ ಪಿತಾಮಹ ಲಿಂಗಾನಂದ ಮಹಾಸ್ವಾಮಿ ಜಯಂತಿ

| ದಿನ | ರಾಹುಕಾಲ | ಯಮಗಂಡ | ಗುಳಿಕಕಾಲ |
|---|---|---|---|
| ಭಾನು | 4.30 – 6.00 | 12.00 – 1.30 | 3.00 – 4.30 |
| ಸೋಮ | 7.30 – 9.00 | 10.30 –12.00 | 1.30 – 3.00 |
| ಮಂಗಳ | 3.00 – 4.30 | 9.00 –10.30 | 12.00 – 1.30 |
| ಬುಧ | 12.00 – 1.30 | 7.30 – 9.00 | 10.30 –12.00 |
| ಗುರು | 1.30 – 3.00 | 6.00 – 7.30 | 9.00 –10.30 |
| ಶುಕ್ರ | 10.30 –12.00 | 3.00 – 4.30 | 7.30 – 9.00 |
| ಶನಿ | 9.00 –10.30 | 1.30 – 3.00 | 6.00 – 7.30 |

## ಮೊಬೈಲ್ ಗೇಮಿಂಗ್ ವಂಚನೆ; ಉದ್ಯಮಿ ಮನೆಯಲ್ಲಿ 17 ಕೋಟಿ ಪತ್ತೆ

**ಕೊಲ್ಕತ್ತ, ಸೆ. 10:** ಜಾರಿ ನಿರ್ದೇಶನಾಲಯ (ಇಡಿ) ನಡೆಸಿದ ಶೋಧ ಕಾರ್ಯಾಚರಣೆಯಲ್ಲಿ ಕೊಲ್ಕತ್ತದ ಉದ್ಯಮಿಯೊಬ್ಬರ ಮನೆಯಲ್ಲಿ ಕನಿಷ್ಠ 17 ಕೋಟಿ ರೂ. ವಶಪಡಿಸಿಕೊಳ್ಳಲಾಗಿದೆ. ಇಡಿ ಕೋಲ್ಕತ್ತಾದ ಗಾರ್ಡನ್ ರೀಚ್ ಪ್ರದೇಶ ಸೇರಿದಂತೆ ಆರು ಸ್ಥಳಗಳ ಮೇಲೆ ದಾಳಿ ನಡೆಸಿದೆ. ದಾಳಿಯಲ್ಲಿ ವಶಪಡಿಸಿಕೊಂಡ ಮೊತ್ತವನ್ನು ಎಣಿಸಲು ಇಡಿ ನಗದು ಎಣಿಕೆ ಯಂತ್ರಗಳನ್ನು ತಂದಿದೆ.

ಇಂದು ಬೆಳಗ್ಗೆ ಪರಿಶೀಲನೆ ಆರಂಭವಾಗಿದ್ದು ಉದ್ಯಮಿ ಅಮೀರ್ ಖಾನ್ ಅವರ ಮನೆ ಆವರಣದಲ್ಲಿ ಇನ್ನೂ ನಗದು ಎಣಿಕೆ ನಡೆಯುತ್ತಿದೆ. ಅವರು ಏಜೆನ್ಸಿಯೊಂದಿಗೆ ಸಹಕರಿಸುತ್ತಿಲ್ಲ ಎಂದು ಇಡಿ ಅಧಿಕಾರಿಗಳು ಹೇಳುತ್ತಿದ್ದಾರೆ. ಕೊಲ್ಕತ್ತ ಪೊಲೀಸರು ದಾಖಲಿಸಿದ ಪ್ರಕರಣದ ಆಧಾರದ ಮೇಲೆ ಮೊಬೈಲ್ ಗೇಮಿಂಗ್ ಆಪ್ ವಂಚನೆಯ ತನಿಖೆಯನ್ನು ಇಡಿ ಕೈಗೆತ್ತಿಕೊಂಡಿತ್ತು.

ಈ ದಾಳಿಗಳು ಮೊಬೈಲ್ ಗೇಮಿಂಗ್ ಅಪ್ಲಿಕೇಶನ್‌ಗೆ ಸಂಪರ್ಕ ಹೊಂದಿವೆ ಎಂದು ತನಿಖಾ ಸಂಸ್ಥೆ ಹೇಳಿದೆ. ಇದು ಜನರನ್ನು ವಂಚಿಸುವ ದಂಧೆಯಾಗಿದ್ದು ಆರೋಪಿಗಳು ಸಾರ್ವಜನಿಕರನ್ನು ವಂಚಿಸಿ ಹಣವನ್ನು ವಶಪಡಿಸಿಕೊಂಡಿದ್ದಾರೆ ಎನ್ನಲಾಗಿದೆ. ?ಇ–ನಗ್ಗೆಟ್ಸ್? ಎಂಬ ಗೇಮಿಂಗ್ ಅಪ್ಲಿಕೇಶನ್ ಅನ್ನು ಆರೋಪಿ ಅಮೀರ್ ಖಾನ್ ಪ್ರಚಾರ ಮಾಡಿದ್ದಾರೆ ಎಂದು ತನಿಖಾ ಸಂಸ್ಥೆ ಹೇಳಿಕೆಯಲ್ಲಿ ತಿಳಿಸಿದೆ.

ಈ ಪ್ರಕರಣವು ಫೆಬ್ರವರಿ 2021 ರಲ್ಲಿ ಕಂಪನಿ ಮತ್ತು ಅದರ ಪ್ರವರ್ತಕರ ವಿರುದ್ಧ ಕೋಲ್ಕತ್ತಾ ಪೊಲೀಸರ ಪ್ರಥಮ ಮಾಹಿತಿ ವರದಿ ಅಥವಾ ಎಫ್‌ಐಆರ್‌ನಿಂದ ಬಂದಿದೆ. ದಾಳಿಯ ಸಮಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಖಚಿತಪಡಿಸಿಕೊಳ್ಳಲು ಏಜೆನ್ಸಿಯ ಅಧಿಕಾರಿಗಳು ಕೇಂದ್ರ ಪಡೆಗಳ ಸಿಬ್ಬಂದಿಗಳೊಂದಿಗೆ ಇದ್ದರು. ಬ್ಯಾಂಕ್ ಅಧಿಕಾರಿಗಳೂ ಇಡಿ ಅಧಿಕಾರಿಗಳ ಜೊತೆಗಿದ್ದರು.

ಈ ಅಪ್ಲಿಕೇಶನ್ ಮತ್ತು ಅದರ ಆಪರೇಟರ್‌ಗಳು ಇತರ ಚೀನೀ ನಿಯಂತ್ರಿತ ಅಪ್ಲಿಕೇಶನ್‌ಗಳೊಂದಿಗೆ ಲಿಂಕ್‌ಗಳನ್ನು ಹೊಂದಿದ್ದು ಅದು ಅತಿಯಾದ ದರದಲ್ಲಿ ಸಾಲಗಳನ್ನು ನೀಡಿ ಜನರನ್ನು ಸಾಲದ ಬಲೆಯಲ್ಲಿ ಸಿಲುಕಿಸಿದೆಯೇ ಎಂದು ಸಂಸ್ಥೆ ತನಿಖೆ ನಡೆಸುತ್ತಿದೆ.

# ಪ್ರಧಾನಿ ಕೃಷಿ ಸಿಂಚಾಯಿ ಯೋಜನೆಯಡಿ ವಿವಿಧ ಕಾಮಗಾರಿಗಳ ಮಂಜೂರಾತಿಗೆ ಕೇಂದ್ರ ಸರ್ಕಾರ ಒಪ್ಪಿಗೆ: ಖೂಬಾ

**ಬೀದರ್, ಸೆ.10:** ಬೀದರ ಜಿಲ್ಲೆಯಲ್ಲಿ ಜನತೆಯ ಮುಖ್ಯ ಕಸುಬು ಕೃಷಿಯಾಗಿದ್ದು, ರೈತರಿಗೆ ನೀರಾವರಿ ಸೌಲಭ್ಯ ಒದಗಿಸುವುದು ಅತಿ ಅವಶ್ಯಕವಾಗಿರುವುದನ್ನು ಮನಗಂಡು ಕೇಂದ್ರ ನೂತನ ಹಾಗೂ ನವೀಕರಿಸಬಹುದಾದ ಇಂಧನ ಮೂಲ ಮತ್ತು ರಸಾಯನಿಕ ಹಾಗೂ ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ ಖೂಬಾರವರು, ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ ಶೇಖಾವತರವರಿಗೆ ಸಂಪರ್ಕಿಸಿ, ಪ್ರಸಕ್ತ ಸಾಲಿನಲ್ಲಿ ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯಡಿ ಜಿಲ್ಲೆಯಲ್ಲಿ ಹರಿಯುವ ಹಳ್ಳಗಳಿಗೆ ಅಡ್ಡಲಾಗಿ ಬ್ಯಾರೇಜ್, ಬಂಧಾರಾ, ಬ್ರೀಡ್ಜ್ ಕಮ್ ಬ್ಯಾರೇಜ್ ನಿರ್ಮಿಸಿಕೊಟ್ಟು ರೈತರಿಗೆ ಅನುಕೂಲ ಮಾಡಿಕೊಡಬೇಕೆಂದು ಕೋರಿದ್ದರು. ಇದಕ್ಕೆ ಪ್ರತಿಯಾಗಿ ಸಚಿವರ ಪ್ರಸ್ಥಾವನೆ ಸಲ್ಲಿಸುವುದಕ್ಕೆ ತಿಳಿಸಿದ್ದರು.

ಈ ಹಿನ್ನಲೆಯಲ್ಲಿ ಸಚಿವ ಭಗವಂತ ಖೂಬಾರವರು, ಸಣ್ಣ ನೀರಾವರಿ ಇಲಾಖೆ ಅಧಿಕಾರಿಗಳಿಂದ ಪ್ರಸ್ತಾವನೆಯನ್ನು ಸಿದ್ಧಗೊಳಿಸಿ, ರಾಜ್ಯ ಸರ್ಕಾರದ ಎಲ್ಲಾ ಪ್ರಕ್ರೀಯೆಗಳು ಪೂರ್ಣಗೊಳಿಸಿ, ಕೇಂದ್ರ ಸರ್ಕಾರಕ್ಕೆ ಒಟ್ಟು ರೂ. 128.25 ಕೋಟಿಯ 57 ಕಾಮಗಾರಿಗಳ ಪ್ರಸ್ತಾವನೆಯನ್ನು ಸಲ್ಲಿಸಲಾಗಿರುತ್ತದೆ.

ಕೇಂದ್ರ ಜಲಶಕ್ತಿ ಸಚಿವಾಲಯವು, ನಮ್ಮ ಮನವಿಗೆ ಸಕಾರಾತ್ಮಕವಾಗಿ ಸ್ಪಂದಿಸಿ, ಸಲ್ಲಿಸಲಾಗಿರುವ ಪ್ರಸ್ಥಾವನೆಗಳನ್ನು ಮಂಜೂರಾತಿ ನೀಡುವುದಾಗಿ ತಿಳಿಸಿದೆ ಎಂದು ಸಚಿವರು ಮಾಹಿತಿ ನೀಡಿದ್ದಾರೆ. ಈ ಕಾಮಗಾರಿಗಳಿಂದ ಜಿಲ್ಲೆಯ ರೈತರಿಗೆ ಹೆಚ್ಚಿನ ಅನುಕೂಲವಾಗಲಿದೆ, ಇವೆಲ್ಲವೂ ಕೃಷಿಗೆ ಪೂರಕವಾದ ಕಾಮಗಾರಿಗಳಾಗಿವೆ ಎಂದು ಕೇಂದ್ರ ಸಚಿವರು ತಿಳಿಸಿದ್ದಾರೆ.



ಜಿಲ್ಲೆಯ ಔರಾದ ತಾಲೂಕಿನಲ್ಲಿ ಅಲ್ಲಾಪುರ ಗ್ರಾಮದ ಹತ್ತಿರ ಬಂದಾರಾ ನಿರ್ಮಾಣಕ್ಕೆ ರೂ. 1.50 ಕೋಟಿ, ಕೊಳ್ಳುರ ಗ್ರಾಮದ ಹತ್ತಿರ ಬಂದಾರಾ ನಿರ್ಮಾಣಕ್ಕೆ ರೂ. 1.55 ಕೋಟಿ, ಬೆಡಕುಂದಾ ಗ್ರಾಮದ ಹತ್ತಿರ ಬಂದಾರಾ ನಿರ್ಮಾಣಕ್ಕೆ ರೂ. 1.50 ಕೋಟಿ, ಔರಾದ ನಗರದ ಹತ್ತಿರವಿರುವ ಹಳ್ಳಕ್ಕೆ ಅಡ್ಡಲಾಗಿ ಬ್ಯಾರೇಜ್ ನಿರ್ಮಾಣಕ್ಕೆ 2.5 ಕೋಟಿ, ಭಂಡಾರಕುಮಟಾ ಗ್ರಾಮದ ಹತ್ತಿರ ಬಂದಾರಾ ನಿರ್ಮಾಣಕ್ಕೆ (ಸೈಟ್–2) 2.10 ಕೋಟಿ, ಲಿಂಗಿ ಗ್ರಾಮದ ಹತ್ತಿರ ಬಂದಾರಾ ನಿರ್ಮಾಣಕ್ಕೆ (ಸೈಟ್–3) 1.65 ಕೋಟಿ, ಔರಾದ ನಗರದ ಹತ್ತಿರ ಇರುವ ಅರಶಿಣಹಳ್ಳಕ್ಕೆ ಅಡ್ಡಲಾಗಿ ಬಂದಾರಾ ನಿರ್ಮಾಣಕ್ಕೆ 1.60 ಕೋಟಿ, ಬಾವನಮಟ್ಟಿ ತಾಂಡಾ ಗ್ರಾಮದ ಹತ್ತಿರ ಬ್ಯಾರೆಜ್ ನಿರ್ಮಾಣಕ್ಕೆ 2.60 ಕೋಟಿ, ಭವಾನಿ–ಬಿಜಲಗಾಂವ–ಮುಧೋಳ(ಕೆ) ಗ್ರಾಮದ ಹತ್ತಿರ ಬಿ.ಸಿ.ಬಿ. ನಿರ್ಮಾಣಕ್ಕೆ 2.50 ಕೋಟಿ, ಚಾಂದೋರಿ ಗ್ರಾಮದ ಹತ್ತಿರ ಬಿ.ಸಿ.ಬಿ. ನಿರ್ಮಾಣಕ್ಕೆ 5 ಕೋಟಿ, ಬಿಜಲಗಾಂವ್‌ಗ್ರಾಮದ ಹತ್ತಿರ ಬಂದಾರಾ ನಿರ್ಮಾಣಕ್ಕೆ 1.50 ಕೋಟಿ, ಭವಾನಿ–ಬಿಜಲಗಾಂವ ಗ್ರಾಮದ ಹತ್ತಿರ ಸರಣಿ ಚೆಕ್‌ಡ್ಯಾಮ್ ನಿರ್ಮಾಣಕ್ಕೆ 1.80 ಕೋಟಿ, ಹೆಡಗಾಪುರ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣಕ್ಕೆ 2.50 ಕೋಟಿ, ಮುಧೋಳ್(ಕೆ) ಗ್ರಾಮದ ಹತ್ತಿರ ಬಂದಾರಾ ನಿರ್ಮಾಣಕ್ಕೆ 2.20 ಕೋಟಿ, ಕೋರಿಯಾಳ ಗ್ರಾಮದ ಹತ್ತಿರ ಬಂದಾರಾ ನಿರ್ಮಾಣಕ್ಕೆ 1.60 ಕೋಟಿ, ಖೇರ್ಡಾ(ಕೆ) ಗ್ರಾಮದ ಹತ್ತಿರ ಸರಣಿ ಚೆಕ್‌ಡ್ಯಾಮ್ ನಿರ್ಮಾಣಕ್ಕೆ 1.80 ಕೋಟಿ, ಆಲೂರ್(ಕೆ) ಗ್ರಾಮದ ಹತ್ತಿರ ಬಂದಾರಾ ನಿರ್ಮಾಣಕ್ಕೆ 1.60 ಕೋಟಿ, ಚಿಕ್ಲಿ(ಜೆ) ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣಕ್ಕೆ 2.50 ಕೋಟಿ, ನಾಗನಪಲ್ಲಿ ಗ್ರಾಮದ ಹತ್ತಿರ ಬಂದಾರಾ ನಿರ್ಮಾಣ (ಸೈಟ್–2)ಕ್ಕೆ 1.55 ಕೋಟಿ, ಸುಂದಾಳ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣಕ್ಕೆ 2.20 ಕೋಟಿ, ಕರಂಜಿ(ಕೆ) ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ (ಸೈಟ್–2) 3.00 ಕೋಟಿ, ಖಾನಾಪುರ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣಕ್ಕೆ 2.45 ಕೋಟಿ, ಜಿರ್ಗಾ(ಕೆ) ಗ್ರಾಮದ ಹತ್ತಿರ ಬ್ಯಾರೇಜ್ ಕಂ ಬ್ರಿಡ್ಜ ನಿರ್ಮಾಣಕ್ಕೆ 3.50 ಕೋಟಿ, ಯೆನಗುಂದಾ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ. (ಸೈಟ್–1) ಕ್ಕೆ 2.50 ಕೋಟಿ, ತುಳಜಾಪುರ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣಕ್ಕೆ 2.50 ಕೋಟಿ, ತಪಸ್ಯಾಳ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣಕ್ಕೆ 2.80 ಕೋಟಿ, ಕೊಟಗ್ಯಾಳ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣಕ್ಕೆ 2.65 ಕೋಟಿ, ಸುಂಕನಾಳ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣಕ್ಕೆ 2.65 ಕೋಟಿ, ಮಾಣೂರ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ. (ಸೈಟ್–1)ಕ್ಕೆ 2.40 ಕೋಟಿ, ಖಾಸಿಂಪುರ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ.(ಸೈಟ್–1) ಕ್ಕೆ 2.20 ಕೋಟಿ, ಖಾಸಿಂಪುರ ಗ್ರಾಮದ ಹತ್ತಿರ ಬ್ಯಾರೇಜ್ ನಿರ್ಮಾಣ. (ಸೈಟ್–2)ಕ್ಕೆ 2.20 ಕೋಟಿ, ಎಕಲಾರ ಗ್ರಾಮದ ಬಂದಾರಾ ನಿರ್ಮಾಣಕ್ಕೆ 1.60 ಕೋಟಿ, ಒಟ್ಟು 32 ಕಾಮಗಾರಿಗಳಿಗಾಗಿ ರೂ. 72.20 ಕೋಟಿ ಅನುದಾನ ಒದಗಲಿದೆ.

ಕಮಲನಗರ ತಾಲೂಕಿನ ಕಾಳಗಾಪೂರ ಮತ್ತು ತಳವಾಡ ಗ್ರಾಮಗಳ ನಡುವೆ ಬ್ಯಾರೇಜ ಕಂ ಬ್ರೀಡ್ಜ ನಿರ್ಮಾಣಕ್ಕೆ ರೂ. 10 ಕೋಟಿ, ಖೇಡ ಮತ್ತು ಡೋಣಗಾಪೂರ ಗ್ರಾಮಗಳ ನಡುವೆ ಬ್ಯಾರೇಜ ಕಂ ಬ್ರೀಡ್ಜ ನಿರ್ಮಾಣಕ್ಕೆ ರೂ. 10.00 ಕೋಟಿ ಒಟ್ಟು 20 ಕೋಟಿ ಅನುದಾನ, ಹುಮನಾಬಾದ ತಾಲೂಕಿನ ವಳಖಿಂಡಿ ಗ್ರಾಮದ ಹತ್ತಿರ ಬಂದಾರಾ ನಿರ್ಮಾಣಕ್ಕೆ 1.60 ಕೋಟಿ, ಉಡಮನಳ್ಳಿ ಗ್ರಾಮದ ಹತ್ತಿರ ಬಂದಾರಾ ನಿರ್ಮಾಣಕ್ಕೆ 1.80 ಕೋಟಿ, ಬೊರಂಪಳ್ಳಿ ಗ್ರಾಮದ ಹತ್ತಿರ ಸರಣಿ ಚೆಕ್‌ಡ್ಯಾಮ್ ನಿರ್ಮಾಣಕ್ಕೆ 1.80 ಕೋಟಿ, ಧುಮನ್‌ಸೂರ್ ಗ್ರಾಮದ ಹತ್ತಿರ ಬಂದಾರಾ ನಿರ್ಮಾಣಕ್ಕೆ 1.50 ಕೋಟಿ ಅನುದಾನ ಬರಲಿದೆ, ಹುಮನಾಬಾದ ತಾಲೂಕಿಗೆ 6.70 ಕೋಟಿ ಅನುದಾನ ಒದಗಲಿದೆ.

ಬಸವಕಲ್ಯಾಣ ತಾಲೂಕಿನ ಅಲಗೂಡ–ವಡ್ಡರಗಾ ಸ್ಥಳಿಯ ನಾಲಾಕ್ಕೆ ಚೆಕ್ ಡ್ಯಾಮ ನಿರ್ಮಾಣಕ್ಕೆ 50 ಲಕ್ಷ, ಕೋಹಿನೂರ ಸ್ಥಳಿಯ ನಾಲಾಕ್ಕೆ ಚೆಕ್ ಡ್ಯಾಮ ನಿರ್ಮಾಣಕ್ಕೆ 60 ಲಕ್ಷ, ಸರಜವಳಗಾ ಸ್ಥಳಿಯ ನಾಲಾಕ್ಕೆ ಚೆಕ್ ಡ್ಯಾಮ ನಿರ್ಮಾಣಕ್ಕೆ 60 ಲಕ್ಷ, ಯರಂಡಿ ಸ್ಥಳಿಯ ನಾಲಾಕ್ಕೆ ಚೆಕ್ ಡ್ಯಾಮ ನಿರ್ಮಾಣಕ್ಕೆ 60 ಲಕ್ಷ, ಮೈಸಳಗಾ ಸ್ಥಳಿಯ ನಾಲಾಕ್ಕೆ ಚೆಕ್ ಡ್ಯಾಮ ನಿರ್ಮಾಣಕ್ಕೆ 70 ಲಕ್ಷ, ರಾಜೇಶ್ವರ ಸ್ಥಳಿಯ ನಾಲಾಕ್ಕೆ ಚೆಕ್ ಡ್ಯಾಮ ನಿರ್ಮಾಣಕ್ಕೆ 50 ಲಕ್ಷ, ಹಣಮಂತವಾಡಿ ಗ್ರಾಮದ ಸ್ಥಳಿಯ ನಾಲಾಕ್ಕೆ ಬಿ.ಸಿ.ಬಿ ನಿರ್ಮಾಣಕ್ಕೆ 2 ಕೋಟಿ, ಅತಲಾಪೂರ ಗ್ರಾಮದ ಹತ್ತಿರ ಬಂಧಾರ ನಿರ್ಮಾಣಕ್ಕೆ 1.25 ಕೋಟಿ, ಹಾಮುನಗರ ಗ್ರಾಮದ ಹತ್ತಿರ ಬಂಧಾರ ನಿರ್ಮಾಣಕ್ಕೆ 2.80 ಕೋಟಿ ಅನುದಾನ ಸಿಗಲಿದೆ ಮತ್ತು ಹುಲಸೂರ ತಾಲೂಕಿನ ಹುಲಸುರ ಗ್ರಾಮದ ಹತ್ತಿರ ಬಂಧಾರ ನಿರ್ಮಾಣಕ್ಕೆ 1.50 ಕೋಟಿ ಅನುದಾನ ಒದಗಲಿದೆ. ಒಟ್ಟು 11.05 ಕೋಟಿ ಅನುದಾನ ಒದಗಲಿದೆ.

ಭಾಲ್ಕಿ ತಾಲೂಕಿನ ಸಾಯಿಗಾಂವ ಗ್ರಾಮದ ಹತ್ತಿರ ಬಂಧಾರ ನಿರ್ಮಾಣಕ್ಕೆ 1.50 ಕೋಟಿ, ವಾಗಲಗಾಂವ ಗ್ರಾಮದ ಹತ್ತಿರ ಬಂಧಾರ ನಿರ್ಮಾಣಕ್ಕೆ 1.60 ಕೋಟಿ, ಕಣಜಿ ಮತ್ತು ತುಗಾಂವ(ಕೆ) ಮಧ್ಯೆ ಹರಿಯುವ ಕಾರಂಜ ನದಿಗೆ ಬಿ.ಸಿ.ಬಿ ನಿರ್ಮಾಣಕ್ಕೆ 2.80 ಕೋಟಿ, ಘೋರಚಿಂಚೋಳಿ ಗ್ರಾಮದ ಹತ್ತಿರ ಚುಲ್ಕಿ ನಾಲಾಕ್ಕೆ ಬ್ಯಾರೇಜ್ ನಿರ್ಮಾಣಕ್ಕೆ 2.50 ಕೋಟಿ, ಘೋರಚಿಂಚೋಳಿ ಗ್ರಾಮದ ಹತ್ತಿರ ಕಾರಂಜ ನದಿಗೆ ಬ್ಯಾರೇಜ್ ನಿರ್ಮಾಣಕ್ಕೆ 2.60 ಕೋಟಿ, ಎಣಕೂರ ಗ್ರಾಮದ ಹತ್ತಿರ ಬಂಧಾರ ನಿರ್ಮಾಣಕ್ಕೆ 1.30 ಕೋಟಿ, ವರವಟ್ಟಿ ಗ್ರಾಮದ ಸ್ಥಳಿಯ ನಾಲಾಕ್ಕೆ ಬ್ಯಾರೇಜ್ ನಿರ್ಮಾಣಕ್ಕೆ 2 ಕೋಟಿ, ಸೈದಾಪೂರವಾಡಿ ಗ್ರಾಮದ ಹತ್ತಿರ ಬಂಧಾರ ನಿರ್ಮಾಣಕ್ಕೆ 1 ಕೋಟಿ, ಕರಡ್ಯಾಳ ದಿಂದ ಅಹ್ಮದಾಬಾದ ಮಧ್ಯ ಬ್ಯಾರೇಜ ಕಂ ಬ್ರೀಡ್ಜ ನಿರ್ಮಾಣಕ್ಕೆ 3 ಕೋಟಿ ಅನುದಾನ ಒಟ್ಟು ಭಾಲ್ಕಿ ತಾಲೂಕಿಗೆ 18.30 ಕೋಟಿ ಅನುದಾನ ಒದಗಲಿದೆ. ಒಟ್ಟು 128.25 ಕೋಟಿಯಡಿ 57 ಕಾಮಗಾರಿಗಳು, ಅತಿ ಶಿಘ್ರದಲ್ಲಿ ಜಿಲ್ಲೆಯಲ್ಲಿ ಪ್ರಾರಂಭಗೊಳ್ಳಲಿದೆ ಎಂದು ಸಚಿವರು ಜಿಲ್ಲೆಯ ಜನತೆಗೆ ವಿಶ್ವಾಸ ನೀಡಿದ್ದಾರೆ.

# ಬೆಂಗಳೂರು ವಿವಿ ಎನ್‌ಎಸ್‌ಎಸ್ ಕೋಶಕ್ಕೆ ರಾಜ್ಯ ಪ್ರಶಸ್ತಿಯ ಗರಿಮೆ: ರಾಜ್ಯಪಾಲರಿಂದ ಪ್ರದಾನ

**ಬೆಂಗಳೂರು,, ಜ.10:** ರಾಷ್ಟ್ರೀಯ ಸೇವಾ ಯೋಜನೆಯ ಮುಖಾಂತರ ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಸಲ್ಲಿಸಿರುವ ಅನುಪಮ ಸೇವೆಯನ್ನು ಪರಿಗಣಿಸಿ ಕರ್ನಾಟಕ ಸರ್ಕಾರದ ಕ್ರೀಡಾ ಮತ್ತು ಯುವಸಬಲೀಕರಣ ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ 2020–21 ನೇ ಸಾಲಿನ ಅತ್ಯುತ್ತಮ ವಿಶ್ವವಿದ್ಯಾಲಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ.

ಕರ್ನಾಟಕ ಸರ್ಕಾರದ ಕ್ರೀಡಾ ಮತ್ತು ಯುವಸಬಲೀಕರಣ ಇಲಾಖೆ ರಾಜ್ಯ ಎನ್ ಎಸ್ ಎಸ್ ಕೋಶ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಎನ್ ಎಸ್ ಎಸ್ ಕೋಶದ ಸಹಯೋಗದಲ್ಲಿ ಬೆಂಗಳೂರಿನ ರಾಜಭವನದ ಗಾಜಿನಮನೆಯಲ್ಲಿ ಆಯೋಜಿಸಲಾಗಿದೆ ಕಾರ್ಯಕ್ರಮದಲ್ಲಿ ರಾಜ್ಯಪಾಲರಾದ ಘನತವೆತ್ತ ತಾವರ್ ಚಂದ್ ಗೆಹ್ಲೋಟ್ ಮತ್ತು ಕ್ರೀಡಾ ಮತ್ತು ಯುವಸಬಲೀಕರಣ ಇಲಾಖೆ ಸಚಿವರಾದ ಡಾ. ಕೆ.ಸಿ. ನಾರಾಯಣಗೌಡರವರು ಪ್ರಶಸ್ತಿಗಳನ್ನು ಪ್ರಧಾನ ಮಾಡಿದರು. 2018–19, 2019–20, 2020–21 ನೇ ಸಾಲಿನಲ್ಲಿ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರಗಳು, ಸಸಿ ನೆಡುವ ಕಾರ್ಯಕ್ರಮ, ಕೋವಿಂದ್ ಸಂದರ್ಭದಲ್ಲಿ ಸಲ್ಲಿಸಿದ ಅನುಪಮ ಸೇವೆ , ಕ್ಯಾನ್ಸರ್ ಕುರಿತು ಜಾಗೃತಿ ಅಭಿಯಾನ, ಮಹಿಳಾ ಮತ್ತು ಮಕ್ಕಳ ಹಕ್ಕುಗಳ ಕುರಿತು ಜಾಗೃತಿ




ಕಾರ್ಯಕ್ರಮಗಳು, ರಾಷ್ಟ್ರೀಯ ಭಾವೈಕ್ಯತಾ ಶಿಬಿರಗಳು, ವ್ಯಸನ ಮುಕ್ತ ಕರ್ನಾಟಕ ಕಾರ್ಯಕ್ರಮ, ವಿವಿಧ ಜಾಗೃತಿ ಕಾರ್ಯಕ್ರಮಗಳನ್ನು, ಸೈಕಲ್ ಜಾಥಾ ಕಾರ್ಯಕ್ರಮಗಳು, ಪ್ಲಾಸ್ಟಿಕ್ ಮುಕ್ತ ಬೆಂಗಳೂರು ಹೀಗೆ ಅನೇಕ ವಿಭಿನ್ನ ಕಾರ್ಯಕ್ರಮಗಳಿಂದ ರಾಷ್ಟ್ರೀಯ ಸೇವಾ ಯೋಜನೆ ಮೂಲಕ ಸಲ್ಲಿಸಿದ ಅನೇಕ ಕಾರ್ಯಕ್ರಮಗಳನ್ನ ಗುರುತಿಸಿ ರಾಜ್ಯ ಸರ್ಕಾರ ಅತ್ಯುತ್ತಮ ವಿಶ್ವವಿದ್ಯಾಲಯ ಪ್ರಶಸ್ತಿಯನ್ನು ನೀಡಿ ಗೌರವಿಸಿದೆ. ಪ್ರಶಸ್ತಿಯನ್ನ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ, ಕುಲಸಚಿವರಾದ ಸಿ ಎನ್ ಶ್ರೀಧರ್, ಕುಲಸಚಿವರು ಮೌಲ್ಯಮಾಪನ ಲೋಕೇಶ್.ವಿ ಮತ್ತು ಎನ್ನೆಸ್ಸೆಸ್ ಸಂಯೋಜನಾಧಿಕಾರಿ ಡಾ. ಎಚ್. ಜಿ. ಗೋವಿಂದೇಗೌಡ ರವರು ಸ್ವೀಕರಿಸಿದ್ರು. ಅತ್ಯುತ್ತಮ ಎನ್‌ಎಸ್‌ಎಸ್ ವಿಶ್ವವಿದ್ಯಾಲಯ ರಾಜ್ಯ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಕುಲಪತಿಗಳಾದ ಪ್ರೊ. ಲಿಂಗರಾಜ ಗಾಂಧಿ ರವರು 2018 ರಲ್ಲಿ ಕಾರ್ಯ ಆರಂಭ ಮಾಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಎನ್‌ಎಸ್‌ಎಸ್ ಕೋಶಕ್ಕೆ ರಾಜ್ಯ ಸರ್ಕಾರದ ವತಿಯಿಂದ ಅತ್ಯುತ್ತಮ ವಿಶ್ವವಿದ್ಯಾಲಯ ಪ್ರಶಸ್ತಿ ಲಭಿಸಿರುವುದು ಹೆಮ್ಮೆಯ ಸಂಗತಿಯಾಗಿದೆ, ಸದರಿ ಪ್ರಶಸ್ತಿ ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ದೊರೆಯಲು ಹಗಲು ಇರುಳು ಶ್ರಮಿಸಿ , ಕ್ರಿಯಾಶೀಲರಾಗಿ ಕಾರ್ಯ ನಿರ್ವಹಿಸಿದ ವಿಶ್ವವಿದ್ಯಾಲಯದ ಎನ್ ಎಸ್ ಎಸ್ ಸಂಯೋಜನಾಧಿಕಾರಿ ಡಾ. ಎಚ್. ಜಿ. ಗೋವಿಂದ ಗೌಡ ರವರಿಗೆ ಅಭಿನಂದನೆಗಳು ಈ ಸಂದರ್ಭದಲ್ಲಿ ಅರ್ಪಿಸುತ್ತಿದ್ದೇನೆ . ರಾಜ್ಯ ಎನ್‌ಎಸ್‌ಎಸ್ ಪ್ರಶಸ್ತಿ ಬೆಂಗಳೂರು ನಗರ ವಿಶ್ವವಿದ್ಯಾಲಯಕ್ಕೆ ದೊರೆಯಲು ಕಾರಣಿಭೂತರಾಗಿ, ಸಹಕರಿಸಿ ಪ್ರೋತ್ಸಾಹಿಸಿದ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರಿಗೆ, ಎನ್‌ಎಸ್‌ಎಸ್ ಅಧಿಕಾರಿಗಳಿಗೆ, ಎನ್‌ಎಸ್‌ಎಸ್ ಸ್ವಯಂ ಸೇವಕರಿಗೆ, ಬೆಂಗಳೂರು ನಗರ ವಿಶ್ವವಿದ್ಯಾಲಯದ ಸಿಂಡಿಕೇಟ್, ಅಕಡೆಮಿಕ್ ಕೌನ್ಸಿಲ್ ಸದಸ್ಯರುಗಳಿಗೆ, ಎಲ್ಲಾ ಸಿಬ್ಬಂದಿ ವರ್ಗದವರಿಗೆ ಈ ಸಂದರ್ಭದಲ್ಲಿ ಹೃದಯಪೂರ್ವಕ ಧನ್ಯವಾದಗಳನ್ನು ಅರ್ಪಿಸಿದ್ದರು. ನಂತರ ಮಾತನಾಡಿದ ಬೆಂಗಳೂರು ನಗರ ವಿಶ್ವವಿದ್ಯಾಲಯದ ಎನ್ ಎಸ್ ಎಸ್ ಸಂಯೋಜನಾಧಿಕಾರಿ ಡಾ. ಎಚ್. ಜಿ.ಗೋವಿಂದ ಗೌಡ ರವರು ಮಾನ್ಯ ಕುಲಪತಿಗಳಾದ ಪ್ರೊ ಲಿಂಗರಾಜ ಗಾಂಧಿ ರವರ ಮಾರ್ಗದರ್ಶನದೊಂದಿಗೆ ಎಲ್ಲ ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು ಮತ್ತು ಎನ್ನೆಸ್ಸೆಸ್ ಅಧಿಕಾರಿಗಳ ಸ್ವಯಂಸೇವಕರ ಸಹಕಾರದಿಂದ ಇಂದು ನಮ್ಮ ವಿಶ್ವವಿದ್ಯಾಲಯಕ್ಕೆ ಅತ್ಯುತ್ತಮ ವಿಶ್ವವಿದ್ಯಾಲಯ ಪ್ರಶಸ್ತಿ ಲಭಿಸಿರುವುದು ಸಂತಸವಾಗುತ್ತಿದೆ ಎಂದು ಹರ್ಷ ಹರ್ಷ ವ್ಯಕ್ತಪಡಿಸಿ ಪ್ರಶಸ್ತಿ ಲಭಿಸಲು ಕಾರಣೀಕರ್ತರಾದ ಎಲ್ಲರಿಗೂ ಧನ್ಯವಾದಗಳನ್ನ ಅರ್ಪಿಸಿದ್ದರು . ಕಾರ್ಯಕ್ರಮದಲ್ಲಿ ರಾಜ್ಯ ಎನ್ ಎಸ್ ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ , ಕ್ರೀಡಾ ಮತ್ತು ಯುವಸಬಲೀಕರಣ ಇಲಾಖೆ ಆಯುಕ್ತರಾದ ಡಾ. ಹೆಚ್. ಜಿ. ಗೋಪಾಲಕೃಷ್ಣ, ಎನ್‌ಎಸ್‌ಎಸ್ ಪ್ರಾದೇಶಿಕ ನಿರ್ದೇಶಕ ಖಾದ್ರಿ ನರಸಿಂಹಯ್ಯ, ವಿವಿಧ ವಿಶ್ವವಿದ್ಯಾಲಯಗಳ ಕುಲಪತಿಗಳು, ಕುಲಸಚಿವರು, ಎನ್‌ಎಸ್‌ಎಸ್ ಸಂಯೋಜನಾಧಿಕಾರಿಗಳು, ಎನ್‌ಎಸ್ ಎಸ್ ಕಾರ್ಯಕ್ರಮಾಧಿಕಾರಿಗಳು, ಸ್ವಯಂ ಸೇವಕರು ಪ್ರಶಸ್ತಿ ವಿಜೇತರು ಮುಂತಾದವರು ಹಾಜರಿದ್ದರು.

# ಸಮೃದ್ಧಿ ಚಾರಿಟಬಲ್ ಟ್ರಸ್ಟ್ ವತಿಯಿಂದ ಉಚಿತ ಬ್ಯಾಗ್ ವಿತರಣೆ




**ತುಮಕೂರು, ಸೆ.10:** ಸಮೃದ್ಧಿ ಚಾರಿಟಬಲ್ ಟ್ರಸ್ಟ್ ವತಿಯಿಂದ ತುಮಕೂರು ತಾಲ್ಲೂಕು, ಎಂ.ಗೊಲ್ಲಹಳ್ಳಿ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಯ ವಿಧ್ಯಾರ್ಥಿಗಳಿಗೆ ಉಚಿತವಾಗಿ ಸ್ಕೂಲ್ ಬ್ಯಾಗ್ ವಿತರಿಸಲಾಯಿತು. ಸಂಸ್ಥೆಯ ಅಧ್ಯಕ್ಷ ಕೆ.ವಿ.ಎಸ್.ಒಡೆಯರ್‌ರವರ ಅಧ್ಯಕ್ಷತೆಯಲ್ಲಿ ಟ್ರಸ್ಟಿಗಳಾದ ರುದ್ರಾಣಮ್ಮ ಹಾಗೂ ನಾಗರತ್ನಮ್ಮ ಹಾಗೂ ವಿನಯ್‌ಕುಮಾರ್‌ರವರು ಉಪಸ್ಥಿತರಿದ್ದರು. ಶಿಕ್ಷಕರಾದ ಉಮೇಶ್ ಹಾಗೂ ಅನಿತಾ ಹಾಜರಿದ್ದರು.

# ಕಾರಟಗಿ–ಹುಬ್ಬಳ್ಳಿಯಿಂದ ಗೋವಾದವರೆಗೆ ರೈಲುಮಾರ್ಗ ವಿಸ್ತರಣೆಗೆ ಒತ್ತಾಯ

**ಗಂಗಾವತಿ, ಸೆ.10:** ಕಾರಟಗಿ–ಹುಬ್ಬಳ್ಳಿ ಎಕ್ಸ್‌ಪ್ರೆಸ್ ರೈಲುಮಾರ್ಗವನ್ನು ಗೋವಾ ರಾಜ್ಯದವರೆಗೂ ವಿಸ್ತರಿಸಲು ಕೊಪ್ಪಳ ಜಿಲ್ಲಾ ವಾಣಿಜ್ಯೋದ್ಯಮ ಮತ್ತು ಕೈಗಾರಿಕಾ ಸಂಸ್ಥೆ ಇಂದು ಶನಿವಾರ ಹುಬ್ಬಳ್ಳಿ ರೇಲ್ವೆ ವಿಭಾಗದ ವ್ಯವಸ್ಥಾಪಕ ಅರವಿಂದ ಮಲಖೇಡೆ ಅವರಿಗೆ ಮನವಿ ಸಲ್ಲಿಸಿತು. ಸಂಘದ ಅಧ್ಯಕ್ಷ ಅಶೋಕಸ್ವಾಮಿ ಹೇರೂರ ನೇತೃತ್ವದಲ್ಲಿ ಅರವಿಂದ ಮಲಖೇಡೆ ಅವರನ್ನು ಭೇಟಿ ಮಾಡಿದ ನಗರಸಭಾ ಸದಸ್ಯ ಮನೋಹರ ಸ್ವಾಮಿ ಹಿರೇಮಠ,ಉದ್ಯಮಿಗಳಾದ ಮುಷ್ಟಿ ವಿರುಪಾಕ್ಷಪ್ಪ, ಶ್ರೀನಿವಾಸ್ ರೈಸ್ ಇಂಡಸ್ಟ್ರಿ ರೈಸ್ ಅಗ್ರೋ ಇಂಡಸ್ಟ್ರಿಯ ಶ್ರೀನಿವಾಸ, ಮಂಜುಶ್ರೀ ರೈಸ್ ಇಂಡಸ್ಟ್ರಿಯ ಶ್ರೀನಿವಾಸ, ವಿಜಯ ಕುಮಾರ್ ರಾಯಕರ್, ಪಂಪಾಪತಿ



ಗುಡದೂರ ಆರ್ಹಾಳ ಮುಂತಾದವರು ಉಪಸ್ಥಿತರಿದ್ದರು.

ಗೋವಾದವರೆಗೂ ರೇಲು ಸಂಚಾರವನ್ನು ವಿಸ್ತರಿಸುವುದರಿಂದಾಗುವ ಅನುಕೂಲಗಳ ಬಗ್ಗೆ ಅಶೋಕಸ್ವಾಮಿ ಹೇರೂರ ಅಧಿಕಾರಿಗಳಿಗೆ ವಿವರಿಸಿದರು. ಸಕಾರಾತ್ಮಕವಾಗಿ ಸ್ಪಂಧಿಸಿದ ಅಧಿಕಾರಿಗಳು ಮನವಿಯನ್ನು ಪರಿಶೀಲಿಸುವುದಾಗಿ ತಿಳಿಸಿದರು. ಈ ಸಂಧರ್ಬದಲ್ಲಿ ರೇಲ್ವೆ ಅಧಿಕಾರಿಗಳಾದ ಡಿ.ಓ.ಎಮ್. ಕೃಷ್ಣ ಚೈತನ್ಯ ಮತ್ತು ಡಿ.ಸಿ.ಎಮ್. ಶ್ರೀಮತಿ ಹರಿತಾ ಹಾಜರಿದ್ದರು. ಇತ್ತೀಚೆಗೆ ಕೊಪ್ಪಳ ಲೋಕಸಭಾ ಸದಸ್ಯ ಕರಡಿ ಸಂಗಣ್ಣ ಅವರು ವಿಭಾಗೀಯ ಜನರಲ್ ಮ್ಯಾನೇಜರ್ ಅವರಿಗೆ ಪತ್ರ ಬರೆದಿರುವುದನ್ನು ಅಶೋಕಸ್ವಾಮಿ ಹೇರೂರ ಇಲ್ಲಿ ಪ್ರಸ್ತಾಪಿಸಿದರು.

# ತೆಂಡೆಕೆರೆ ಗ್ರಾಪಂ ಉಪಾಧ್ಯಕ್ಷರಾಗಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ಅವಿರೋಧ ಆಯ್ಕೆ

**ಮಂಡ್ಯ, ಸೆ.10:** ಕೆ ಆರ್ ಪೇಟೆ ತಾಲೂಕಿನ ಶೀಳನೆರೆ ಹೋಬಳಿಯ ತೆಂಡೆಕೆರೆ ಗ್ರಾಮ ಪಂಚಾಯಿತಿ ಉಪಾಧ್ಯಕ್ಷರ ಸ್ಥಾನಕ್ಕೆ ಶಿವಲಿಂಗರವರು ರಜೀನಾಮೆ ಕೊಟ್ಟ ಹಿನ್ನೆಲೆಯಲ್ಲಿ ತೆರವಾದ ಸ್ಥಾನಕ್ಕೆ ಇಂದು ನೆಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ರಂಗರಾಜು ಹೊರತುಪಡಿಸಿ ಉಳಿದ ಯಾವ ಸದಸ್ಯರು ಕೂಡ ನಾಮಪತ್ರ ಸಲ್ಲಿಸಿದ ಕಾರಣ ಅವಿರೋಧವಾಗಿ ನೂತನ ಉಪಾಧ್ಯಕ್ಷರ ಸ್ಥಾನಕ್ಕೆ ಅಲಂಕರಿಸಿದ್ದಾರೆ ಎಂದು ಅಧಿಕೃತವಾಗಿ ಚುನಾವಣಾ ಅಧಿಕಾರಿಯಾಗಿ ಕಾರ್ಯನಿರ್ವಹಿಸಿದ ತಾಲೂಕು ಕಾರ್ಯನಿರ್ವಹಣಾಧಿಕಾರಿ ಸತೀಶ್ ಘೋಷಣೆ ಮಾಡಿದರು.

ನೂತನ ಉಪಾಧ್ಯಕ್ಷರ ಸ್ಥಾನಕ್ಕೆ



ಅಲಂಕರಿಸಿದ ರಂಗರಾಜು ರವರನ್ನ ಮನ ಸ್ಪರ್ಶಿಸುವಂತೆ ಸನ್ಮಾನಿಸಿ ಮಾತನಾಡಿದ ಮಂಡ್ಯ ಜಿಲ್ಲಾ ಹಾಲು ಒಕ್ಕೂಟ ನಿರ್ದೇಶಕ ಎಚ್ ಟಿ ಮಂಜು ರವರು ನಮ್ಮ ಪಕ್ಷದ ಬೆಂಬಲಿತ ಅಭ್ಯರ್ಥಿ ರಂಗರಾಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ, ಪಕ್ಷಭೇದ ಮರೆತು ಸರ್ವ ಸದಸ್ಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಗ್ರಾಮ ಪಂಚಾಯಿತಿ ವ್ಯಾಪ್ತಿಗೆ ಬರುವ ಪ್ರತಿಯೊಂದು ಗ್ರಾಮಗಳಿಗೆ ಪ್ರಮುಖವಾಗಿ ಬೇಕಾಗುವ ಮೂಲಭೂತ ಸೌಕರ್ಯಗಳನ್ನ ಒದಗಿಸು ಮುಖಾಂತರ ಉತ್ತಮ ಆಡಳಿತ ಅವಧಿ ಎಂಬ ನಾಮಾಂಕಿತಕ್ಕೆ ಕಾರಣರಾಗಬೇಕು ಎಂದು ನೂತನ ಉಪಾಧ್ಯಕ್ಷರಿಗೆ ಕಿವಿಮಾತು ತಿಳಿಸಿದರು..

ಬಳಿಕ ಮಾತನಾಡಿದ ನೂತನ ಉಪಾಧ್ಯಕ್ಷ ರಂಗರಾಜು ನನ್ನ ಗೆಲುವಿಗೆ ಕಾರಣರಾದ ನಮ್ಮ ನಾಯಕ ಮತ್ತು ಮನ್ಮುಲ್ ನಿರ್ದೇಶಕರಾದ ಎಚ್ ಟಿ ಮಂಜು ಮತ್ತು ಸರ್ವ ಸದಸ್ಯರಿಗೂ ನನ್ನ ಆಡಳಿತಾವಧಿಯಲ್ಲಿ ಕ್ರಿಯಾಶೀಲತೆಯಿಂದ ಜನರ ಸಮಸ್ಯೆ ಆಲಿಸುತ್ತ ಸರ್ಕಾರದಿಂದ ಬರುವ ಯೋಜನೆಗಳನ್ನ ಅರ್ಹ ಜನಸಾಮಾನ್ಯರಿಗೆ ಸದ್ಬಳಕೆ ಹಾಗುವ ನಿಟ್ಟಿನಲ್ಲಿ ಶ್ರಮವಹಿಸಿ ಗ್ರಾಮ ಪಂಚಾಯತ್ತಿ ಬರುವ ಎಲ್ಲ ಗ್ರಾಮಗಳ ಅಭಿವೃದ್ಧಿಗೆ ಸಹಕಾರಿ ಆಗುವ ಮೂಲಕ ಋಣತೀರಿಸುತ್ತೇನೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಧ್ಯಕ್ಷೆ ಗಂಗಮ್ಮ, ಸದ್ಯಸರುಗಳಾದ ಶಿವಲಿಂಗ, ರವಿಕುಮಾರ್, ಜ್ಯೋತಿ, ಹೇಮಾ ಕುಮಾರ್, ಶಿಲ್ಪ, ಜಯಮ್ಮ, ಶ್ರೀನಿವಾಸ್, ಸವಿತಾ, ಸವಿತಾ, ನಾಗರತ್ನ, ರಾಜು, ಸೌಭಾಗ್ಯ, ರೋಹಿಣಿ, ಕಾಂತರಾಜು, ಸ್ವಾಮಿಗೌಡ ಮುಖಂಡರಾದ ಶೇಖರ್, ಹಾದನೂರು ಮಹೇಶ್, ಹೆಗ್ಗಡಹಳ್ಳಿ ಅಲೋಕ್, ವಾಟಾಳ್ ನಾಗರಾಜು, ಉಮೇಶ್, ಪ್ರಸನ್ನ, ಬಸವರಾಜ್, ಗಂಗಾಧರ್, ಸೇರಿದಂತೆ ಉಪಸ್ಥಿತರಿದ್ದರು..

# ಶಾಲಾ ಕುಂದುಕೊರತೆ ಕುರಿತು ಸರ್ಕಾರದ ಗಮನ ಸೆಳೆಯಲು ಹೆಬಸೂರ ಗ್ರಾಮಮಟ್ಟದ ಸಭೆ

**ಧಾರವಾಡ, ಸೆ.10:** ಧಾರವಾಡ ಜಿಲ್ಲೆಯ ಹುಬ್ಬಳ್ಳಿ ಗ್ರಾಮೀಣ ತಾಲೂಕಿನ ನವಲಗುಂದ 69 ವಿಧಾನ ಸಭಾ ಕ್ಷೇತ್ರದ ಶಿರಗುಪ್ಪಿ ಹೋಬಳಿಯ ಬ್ಯಾಹಟ್ಟಿ ಕ್ಲಸ್ಟರ್‌ನ ಹೆಬಸೂರ ಗ್ರಾಮ ಪಂಚಾಯತ್ ವ್ಯಾಪ್ತಿಯ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆ ಹೆಬಸೂರ ಈ ಶಾಲೆಗೆ ಹಲವು ದಶಕಗಳ ವರ್ಷಗಳಿಂದ ವಿಪರೀತ ಮಳೆಯಾಗಿ ಅತಿವೃಷ್ಟಿಯಾದಾಗ ಶಾಲೆಗೆ ಹೊಂದಿಕೊಂಡಿರುವ ನಿಗದಿ ಹಳ್ಳ ಮತ್ತು ಬೆಣ್ಣೆ ಹಳ್ಳಗಳು ಹೊರ ಚೆಲ್ಲಿದ ನೀರಿನ ಪ್ರವಾಹ ಶಾಲಾ ಕಟ್ಟಡಕ್ಕೆ ಹಾಗೂ ಶಾಲಾ ಅಂಗಳಕ್ಕೆ ನುಗ್ಗಿ ಜಲ ದಿಗ್ಬಂಧನವಾಗಿ ಜಲ ಕಂಟಕವಾಗಿ ಶಾಲಾ ಕಟ್ಟಡ ಬಹಳಷ್ಟು ಶಿಥಿಲಗೊಂಡಿವೆ

ಈ ದಿಸೆಯಲ್ಲಿ ಮತ್ತೆ ಸೆ.6ರ ಮಂಗಳವಾರರಂದು ಪ್ರವಾಹದ ನೀರು ಶಾಲೆಗೆ ನುಗ್ಗಿ ಶಾಲೆಗೆ ಅವಘಡ ಸಂಭವಿಸಿದೆ. ಶಿಕ್ಷಕರು ವಿದ್ಯಾರ್ಥಿಗಳು ಆತಂಕದ ಸ್ಥಿತಿಯಲ್ಲಿದ್ದು. ಶಿಕ್ಷಣ ವ್ಯವಸ್ಥೆ ಕುಂಠಿತವಾಗುತ್ತಿದೆ. ಈ ಸಂದರ್ಭದಲ್ಲಿ ಈಗಾಗಲೇ ಸಚಿವ ಶಂಕರ ಪಾಟೀಲ ಮುನೇನಕೊಪ್ಪ ಹಾಗೂ ಗ್ರಾ.ಪಂ.ಪದಾಧಿಕಾರಿಗಳು ಗಣ್ಯರು ಮತ್ತು ಕೇಂದ್ರ ಸರ್ಕಾರದ ಅಧಿಕಾರಿಗಳ ತಂಡ ಜಿಲ್ಲಾಧಿಕಾರಿಗಳು ಜಿ.ಪಂ.ಕಾ.ನಿ.ಅಧಿಕಾರಿಗಳು ಡಿಡಿಪಿಐ ತಹಶೀಲ್ದಾರ ಇಓಬಿಇಓ–ಪಿಡಿಓ ಮುಂತಾದ ಉನ್ನತ ಹಂತದ ಅಧಿಕಾರಿಗಳು ಆಗಮಿಸಿ ಖುದ್ದಾಗಿ ಸ್ಥಳ ಪರಿಶೀಲನೆ ಮಾಡಿ ಮಾಹಿತಿ ಪಡೆದು ಸಕಾರಾತ್ಮಕವಾಗಿ ಸಮಸ್ಯಾ ಪರಿಹಾರ ಕ್ರಮಗಳನ್ನು ಸೂಚಿಸಿದ್ದಾರೆ.

ಈ ನೆರೆ ಹಾವಳಿ ಸಮಸ್ಯೆಯಿಂದ ಒಂದು ಶಾಶ್ವತ ಪರಿಹಾರ ಕಂಡುಕೊಳ್ಳಬೇಕಾಗಿದೆ.ಆದ್ದರಿಂದ ಸೆ.14ರ ಬುಧವಾರ ಮುಂಜಾನೆ 11–00 ಗಂಟೆಗೆ ನಮ್ಮ ಸರ್ಕಾರಿ ಹಿರಿಯ ಪ್ರಾಥಮಿಕ ಕನ್ನಡ ಹೆಣ್ಣು ಮಕ್ಕಳ ಶಾಲೆಯ ಆವರಣದಲ್ಲಿ ಹೆಬಸೂರ ಗ್ರಾಮ ಮಟ್ಟದ ಬೃಹತ್ ಸಭೆಯನ್ನು ಆಯೋಜಿಸಲಾಗಿದೆ. ಕಾರಣ ತಾವುಗಳು ಆಗಮಿಸಿ ಶಾಲೆಗೆ ನೆರೆ ಹಾವಳಿ ತಪ್ಪಿಸುವಲ್ಲಿ ಸಲಹೆ ಸೂಚನೆ ನೀಡಿ, ನಿರ್ಣಯ ಕೈಗೊಳ್ಳುವಲ್ಲಿ ಸಹಕಾರ ನಿಡಬೇಕೆಂದು ಸ್ಥಳೀಯರಲ್ಲಿ ಈ ಮೂಲಕ ಪ್ರಾರ್ಥಿಸಲಾಗಿದೆ.

Managing Editor : SANDEEP RENU ✆ 99728 72151 | Executive Editor : SHARAT JYOTSNA B.R ✆ 9886766483 ✉ vaarthe@gmail.com
Published from: K10,'A'/4, Khriki Extension, Malviya Nagar, New Delhi-110 017. Phone: 95-120-3917916-20
Printed at: Jyoti Printers, E-94, Sector 6, Noida, UP. Phone: 0120-4232687 Off : E-94,Sector 6, Noida,UP | RNI No. DELKAN/2003/10363

# ಕಾಂಗ್ರೆಸ್ ಸರ್ಕಾರ ಎಲ್ಲಾ ರಂಗದಲ್ಲೂ ವಿಫಲ

## ರಾಜಸ್ಥಾನದಲ್ಲಿ ಬಿಜೆಪಿ ಬೂತ್‌ಮಟ್ಟದ ಕಾರ್ಯಕರ್ತರ ಸಂಕಲ್ಪ ಮಹಾಸಮ್ಮೇಳನದಲ್ಲಿ ಅಮಿತ್ ಷಾ ಟೀಕೆ

**ರಾಜಸ್ಥಾನ: ಸೆ.10:** ರಾಜಸ್ಥಾನದ ಕಾಂಗ್ರೆಸ್ ಸರ್ಕಾರ ಎಲ್ಲಾ ರಂಗಗಳಲ್ಲಿ ವಿಫಲವಾಗಿದೆ ಎಂದು ಸಾಬೀತಾಗಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಜೋಧ್ಪುರದಲ್ಲಿ ಇಂದು ಬಿಜೆಪಿಯ ಬೂತ್ ಕಾರ್ಯಕರ್ತ ಸಂಕಲ್ಪ ಮಹಾಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅಮಿತ್ ಷಾ ವಿಧಾನಸಭೆ ಚುನಾವಣೆ ವೇಳೆ ನೀಡಿದ ಭರವಸೆಗಳನ್ನು ಕಾಂಗ್ರೆಸ್ ಈಡೇರಿಸಿಲ್ಲ ಎಂದು ಹೇಳಿದ್ದಾರೆ.

ರಾಜ್ಯದ ಆಡಳಿತಾರೂಢ ಕಾಂಗ್ರೆಸ್ ಸರಕಾರ ವೋಟ್ ಬ್ಯಾಂಕ್ ಓಲೈಕೆ ರಾಜಕಾರಣ ಮಾಡುತ್ತಿದೆ ಎಂದು ಆರೋಪಿಸಿದರು. ಶ್ರೀ ಶಾ ಹೇಳಿದರು, ರಾಜ್ಯದಲ್ಲಿ ಅಪರಾಧಗಳು ವೇಗವಾಗಿ ಹೆಚ್ಚುತ್ತಿವೆ ಆದರೆ ನಿರುದ್ಯೋಗ ದರವು ಹುಚ್ಚುಚ್ಚಾಗಿ ಹೆಚ್ಚಾಗಿದೆ. ಇತರ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದ ಜನರು ದುಬಾರಿ ವಿದ್ಯುತ್, ಡೀಸೆಲ್ ಮತ್ತು ಪೆಟ್ರೋಲ್ ಪಡೆಯುತ್ತಿದ್ದಾರೆ ಎಂದು ಅವರು ಹೇಳಿದರು.

ಕೇಂದ್ರ ಗೃಹ ಸಚಿವರು, ರಾಜಸ್ಥಾನದ ಅಭಿವೃದ್ಧಿಗೆ ಕೇಂದ್ರ ಸರ್ಕಾರ ನಿರಂತರವಾಗಿ



ಸಹಕಾರ ನೀಡುತ್ತಿದೆ. ರಾಜ್ಯಕ್ಕೆ 23 ವೈದ್ಯಕೀಯ ಕಾಲೇಜುಗಳನ್ನು ಕೇಂದ್ರ ಮಂಜೂರು ಮಾಡಿದೆ. ಮಾಜಿ ಕಾಂಗ್ರೆಸ್ ಉಪಾಧ್ಯಕ್ಷ ರಾಹುಲ್ ಗಾಂಧಿಯವರ 'ಭಾರತ್ ಜೋಡೋ ಯಾತ್ರೆ' ಬಗ್ಗೆ ಷಾ ವ್ಯಂಗ್ಯವಾಡಿದರು. ಗಾಂಧಿಯವರು ಮೊದಲು ಭಾರತದ ಇತಿಹಾಸವನ್ನು ತಿಳಿದುಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ಮಾಜಿ ಮುಖ್ಯಮಂತ್ರಿ ವಸುಂಧರಾ ರಾಜೆ, ರಾಜ್ಯ ಬಿಜೆಪಿ ಅಧ್ಯಕ್ಷ ಡಾ.ಸತೀಶ್ ಪೂನಿಯಾ ಕೂಡ ಮಾತನಾಡಿದರು. ಇದಕ್ಕೂ ಮುನ್ನ, ಜೋಧ್ಪುರದಲ್ಲಿ ಬಿಜೆಪಿಯ ಒಬಿಸಿ ಮೋರ್ಚಾದ ರಾಷ್ಟ್ರೀಯ ಕಾರ್ಯಕಾರಿ ಸಮಿತಿಯ ಸಮಾರೋಪ ಅಧಿವೇಶನವನ್ನು ಉದ್ದೇಶಿಸಿ ಇಂದು ಬೆಳಿಗ್ಗೆ, ಜೈಸಲ್ಮೇರ್ನ ಭಾರತ-ಪಾಕಿಸ್ತಾನ ಗಡಿ ಪ್ರದೇಶದ ಸಮೀಪವಿರುವ ತಾನೋಟ್ ದೇವಾಲಯದ ಸಂಕೀರ್ಣದಲ್ಲಿ ಗಡಿ ಪ್ರವಾಸೋದ್ಯಮ ಅಭಿವೃದ್ಧಿ ಯೋಜನೆಯ ಶಂಕುಸ್ಥಾಪನೆಯನ್ನು ಸಚಿವರು ನೆರವೇರಿಸಿದರು. ಈ ಯೋಜನೆಯಿಂದ ಗಡಿ ಪ್ರದೇಶದಲ್ಲಿ ಪ್ರವಾಸಿ ಸೌಲಭ್ಯ ಹೆಚ್ಚಲಿದೆ. ತನೋಟ್ನಲ್ಲಿರುವ ವಿಜಯ ಸ್ತಂಭದಲ್ಲಿ ಹುತಾತ್ಮ ಯೋಧರಿಗೆ ಸಚಿವರು ನಮನ ಸಲ್ಲಿಸಿದರು. ಅವರು ತನೋಟ್ ದೇವಿ ದೇವಸ್ಥಾನದಲ್ಲಿ ಪ್ರಾರ್ಥನೆ ಸಲ್ಲಿಸಿದರು.

> ರಾಜ್ಯದಲ್ಲಿ ಅಪರಾಧಗಳು ವೇಗವಾಗಿ ಹೆಚ್ಚುತ್ತಿವೆ ಆದರೆ ನಿರುದ್ಯೋಗ ದರವು ಹುಚ್ಚುಚ್ಚಾಗಿ ಹೆಚ್ಚಾಗಿದೆ. ಇತರ ರಾಜ್ಯಗಳಿಗೆ ಹೋಲಿಸಿದರೆ ರಾಜ್ಯದ ಜನರು ದುಬಾರಿ ವಿದ್ಯುತ್, ಡೀಸೆಲ್ ಮತ್ತು ಪೆಟ್ರೋಲ್ ಪಡೆಯುತ್ತಿದ್ದಾರೆ.
> – ಅಮಿತ್ ಶಾ, ಕೇಂದ್ರ ಗೃಹ ಸಚಿವ



ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಗುಲಾಂ ನಬಿ ಆಜಾದ್ ಶನಿವಾರ ಕಿಶ್ತ್ವಾರ್‌ನ ಚತ್ರೂದಲ್ಲಿ ಸಾರ್ವಜನಿಕ ರ್‍ಯಾಲಿಯಲ್ಲಿ ಭಾಗವಹಿಸಿದರು.

# ವಂದೇಭಾರತ್ 2: ಅತೀವೇಗದ ರೈಲಿನ ಹೊಸ ವಿನ್ಯಾಸಕ್ಕೆ ಇಲಾಖೆ ಸಜ್ಜು

**ನವದೆಹಲಿ: ಸೆ.10:** ಭಾರತೀಯ ರೈಲ್ವೇಯು ಹೈ-ಸ್ಪೀಡ್ ರೈಲು ವಂದೇ ಭಾರತ್ನ ಹೊಸ ಅವತಾರವನ್ನು ಪರಿಚಯಿಸುತ್ತಿದೆ ಅವುಗಳೆಂದರೆ ವಂದೇ ಭಾರತ್ 2. ಇದು ಹೆಚ್ಚಿನ ಪ್ರಗತಿ ಮತ್ತು ಸುಧಾರಿತ ವೈಶಿಷ್ಟ್ಯಗಳೊಂದಿಗೆ ಸಜ್ಜುಗೊಳಿಸಲ್ಪಡುತ್ತದೆ, ಕೇವಲ 52 ಸೆಕೆಂಡುಗಳಲ್ಲಿ 0 ರಿಂದ 100 **Kmpl** ವೇಗ, ಗರಿಷ್ಠ ವೇಗ 180 **Kmph,** ಕಡಿಮೆ ತೂಕ 430 ಟನ್ಗಳ ಬದಲಿಗೆ 392 ಟನ್ಗಳು ಮತ್ತು ಬೇಡಿಕೆಯ ಮೇರೆಗೆ **WI-FI** ವಿಷಯ.

ಹಿಂದಿನ ಆವೃತ್ತಿಗಳಲ್ಲಿ 24 ಇಂಚಿನ 32 ಇಂಚಿನ **LCD** ಟಿವಿಗಳನ್ನು ಹೊಸ ವಂದೇ ಭಾರತ್ ಸಹ ಹೊಂದಿರುತ್ತದೆ. 15 ಪ್ರತಿಶತ ಹೆಚ್ಚು ಶಕ್ತಿ ದಕ್ಷತೆಯ ಎಸಿಗಳು ಧೂಳು-ಮುಕ್ತ ಕ್ಲೀನ್ ಏರ್ ಕೂಲಿಂಗ್ ಟ್ರಾಕ್ಷನ್ ಮೋಟರ್ ಪ್ರಯಾಣವನ್ನು



ಹೆಚ್ಚು ಆರಾಮದಾಯಕವಾಗಿಸುತ್ತದೆ. ಎಕ್ಸಿಕ್ಯೂಟಿವ್ ವರ್ಗದ ಪ್ರಯಾಣಿಕರಿಗೆ ಒದಗಿಸಲಾಗುತ್ತಿರುವ ಸೈಡ್ ರಿಕ್ಲೈನರ್ ಸೀಟ್ ಸೌಲಭ್ಯವನ್ನು ಈಗ ಎಲ್ಲಾ ವರ್ಗಗಳಿಗೆ ಲಭ್ಯವಾಗುವಂತೆ ಮಾಡಲಾಗುವುದು.

ವಂದೇ ಭಾರತ್ ಎಕ್ಸ್‌ಪ್ರೆಸ್ನ ಹೊಸ ವಿನ್ಯಾಸದಲ್ಲಿ, ಗಾಳಿಯ ಶುದ್ಧೀಕರಣಕ್ಕಾಗಿ ಮೇಲ್ಛಾವಣಿ-ಮೌಂಟೆಡ್ ರೂಫ್ ಮೌಂಟೆಡ್ ಪ್ಯಾಕೇಜ್ ಘಟಕದಲ್ಲಿ ಫೋಟೋ-ಕ್ಯಾಟಲಿಟಿಕ್ ನೇರಳಾತೀತ ಗಾಳಿ ಶುದ್ಧೀಕರಣ ವ್ಯವಸ್ಥೆಯನ್ನು ಸ್ಥಾಪಿಸಲಾಗಿದೆ.

# ಮೋಸದಿಂದ ಪರವಾನಗಿ ನವೀಕರಿಸಿದ ಸ್ಮೃತಿ ಇರಾನಿ ಪುತ್ರಿ

**ಪಣಜಿ, ಸೆ. 10:** ಗೋವಾದ ಅಸ್ಸಾಗಾವೊದಲ್ಲಿರುವ ಕೇಂದ್ರ ಸಚಿವೆ ಸ್ಮೃತಿ ಇರಾನಿ ಪುತ್ರಿ ಒಡೆತನದ ಸಿಲ್ಲಿ ಸೋಲ್ಸ್ ಕೆಫೆ ವಿವಾದ ಹೊಸ ತಿರುವು ಪಡೆದುಕೊಂಡಿದೆ. ಸಿಲ್ಲಿ ಸೋಲ್ಸ್ ಕೆಫೆ ಮತ್ತು ಬಾರ್ನ ಪರವಾನಗಿಯನ್ನು ಮೋಸದಿಂದ ನವೀಕರಿಸಲಾಗಿದೆ ಎಂದು ಗೋವಾದ ಅಬಕಾರಿ ಆಯುಕ್ತರು ಜುಲೈನಲ್ಲಿ ನೋಟಿಸ್ ಸಲ್ಲಿಸಿದ್ದರು.

ಈ ಕೆಫೆಯಲ್ಲಿ ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಸ್ಮೃತಿ ಇರಾನಿ ಪುತ್ರಿಯ ಪಾಲಿದೆ ಎಂಬ ಆರೋಪ ಕೇಳಿ ಬಂದಿತ್ತು. ಆದ್ರೆ ಕೆಫೆಗೂ ತಮ್ಮ ಕುಟುಂಬದವರಿಗೂ ಯಾವುದೇ ಸಂಬಂಧವಿಲ್ಲ ಎಂದು ಸ್ಮೃತಿ ಇರಾನಿ ಕುಟುಂಬ ನ್ಯಾಯಾಧೀಶರಿಗೆ ತಿಳಿಸಿತ್ತು. ಆದರೀಗ ಆರ್.ಟಿ.ಐ. ಅಡಿ ಹೊಸ ವಿಚಾರ ಬೆಳಕಿಗೆ ಬಂದಿದೆ. ಸ್ಮೃತಿ ಇರಾನಿ ಅವರ ಪತಿ ಮತ್ತು ಮಕ್ಕಳು ಈ



ಸಂಸ್ಥೆಯನ್ನು ನಿರ್ವಹಿಸುತ್ತಿದ್ದಾರೆ ಎಂಬುದು ಆರ್ಟಿಐ ದಾಖಲೆಗಳಲ್ಲಿ ಬಹಿರಂಗವಾಗಿದೆ.

ಇನ್ನೊಂದೆಡೆ ಸಿಲ್ಲಿ ಸೋಲ್ಸ್ ತಮ್ಮ ಮಗಳಿಗೆ ಸೇರಿದ್ದೆಂದು ಆರೋಪ ಮಾಡಿರುವ ಕಾಂಗ್ರೆಸ್ ಮುಖಂಡರ ವಿರುದ್ಧ ಸ್ಮೃತಿ ಇರಾನಿ ಮಾನಹಾನಿ ಮೊಕದ್ದಮೆ ಹೂಡಿದ್ದಾರೆ. ಕಳೆದ ತಿಂಗಳು ದೆಹಲಿ ಹೈಕೋರ್ಟ್ಗೆ ಪ್ರಮಾಣ ಪತ್ರವನ್ನು ಸಲ್ಲಿಸಲಾಗಿತ್ತು. ಈ ಪ್ರಮಾಣಪತ್ರದಲ್ಲಿ ಸ್ಮೃತಿ ಇರಾನಿ ಮತ್ತವರ ಪುತ್ರಿ, ಗೋವಾದ ಅಸ್ಸಾಗಾವೊ, ಬೌಟಾ ವಾಡೋ ಹೌಸ್ 452ಯಲ್ಲಿರುವ ಸಿಲ್ಲಿ ಸೋಲ್ಸ್ ಕೆಫೆ& ಬಾರ್ಗೂ ತಮಗೂ ಯಾವುದೇ ಸಂಬಂಧವಿಲ್ಲ ಎಂದು ನಿರಾಕರಿಸಿದ್ದರು.

ಬಾರ್ನ ಅಬಕಾರಿ ಪರವಾನಗಿಯನ್ನು ಅಕ್ರಮವಾಗಿ ನವೀಕರಿಸಲಾಗಿದೆ ಎಂಬ ಮಾಹಿತಿಯನ್ನು ಬಹಿರಂಗ ಪಡಿಸಿದ್ದ ವಕೀಲ ಐರಿಸ್ ರಾಡ್ರಿಗಸ್, ಗೋವಾ ಸರ್ಕಾರದಿಂದ ಮಾಹಿತಿ ಹಕ್ಕು ಕಾಯ್ದೆ ಅಡಿಯಲ್ಲಿ ಈ ಬಾರ್ನ ಮಾಲೀಕತ್ವದ ಕುರಿತಂತೆ ದಾಖಲೆಗಳನ್ನು ಪಡೆದಿದ್ದಾರೆ. ಆರ್.ಟಿ.ಐ. ಪ್ರಕಾರ ಸಿಲ್ಲಿ ಸೋಲ್ಸ್ಗ ಅಬಕಾರಿ ಪರವಾನಗಿ ನೀಡಿದ ಕಂಪನಿಯ ಶೇ.75ರಷ್ಟು ಮಾಲೀಕತ್ವವನ್ನು ಸ್ಮೃತಿ ಇರಾನಿ ಅವರ ಪತಿ ಮತ್ತು ಕುಟುಂಬದವರು ಹೊಂದಿದ್ದಾರೆ. ಈ ವಿಚಾರ ಬಹಿರಂಗವಾಗ್ತಿದ್ದಂತೆ ವಿವಾದ ಮತ್ತೆ ಭುಗಿಲೇಳುವ ಸಾಧ್ಯತೆ ಇದೆ.

# ಬೀದಿನಾಯಿ ಕಚ್ಚಿದರೆ ಆಹಾರ ಹಾಕುವವರೂ ಹೊಣೆ: ಸುಪ್ರೀಂ

**ನವದೆಹಲಿ, ಸೆ. 10:** ಬೀದಿ ನಾಯಿಗಳ ಹಾವಳಿ ಪ್ರತಿ ವರ್ಷ ಸಾವಿರಾರು ಜನರು ಪ್ರಾಣ ಕಳೆದುಕೊಳ್ಳುತ್ತಿದ್ದಾರೆ. ಈ ಬೀದಿ ನಾಯಿಗಳ ಕಾಟಕ್ಕೆ ಪರಿಹಾರ ಕಂಡುಕೊಳ್ಳುವ ಅಗತ್ಯವನ್ನು ಒತ್ತಿ ಹೇಳಿರುವ ಸುಪ್ರೀಂ ಕೋರ್ಟ್ ಬೀದಿ ನಾಯಿಗಳಿಗೆ ಪ್ರತಿದಿನ ಆಹಾರ ನೀಡುವ ಜನರಿಗೆ ಅವುಗಳ ಲಸಿಕೆಯ ಜವಾಬ್ದಾರಿಯನ್ನು ನೀಡಬಹುದು. ಒಂದುವೇಳೆ ಅವರು ಆಹಾರ ಹಾಕುವ ಬೀದಿ ನಾಯಿಗಳು ಜನರ ಮೇಲೆ ದಾಳಿ ಮಾಡಿದರೆ ಅವರೇ ಆ ವೆಚ್ಚವನ್ನು ಭರಿಸಬೇಕಾಗುತ್ತದೆ ಎಂದು ಆದೇಶ ನೀಡಿದೆ.

ಜನರ ಸುರಕ್ಷತೆ ಮತ್ತು ಪ್ರಾಣಿಗಳ ಹಕ್ಕುಗಳ ನಡುವೆ ಸಮತೋಲನ ಕಾಯ್ದುಕೊಳ್ಳಬೇಕಾದ ಅಗತ್ಯವಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ನಮ್ಮ ದೇಶದಲ್ಲಿ ಹೆಚ್ಚಿನವರು ನಾಯಿ ಪ್ರಿಯರು. ನಾನು ಕೂಡ ನಾಯಿಗಳಿಗೆ ಆಹಾರ ನೀಡುತ್ತೇನೆ. ಆದರೆ, ಜನರು ನಾಯಿಗಳಿಗೆ ಆಹಾರ ಹಾಕುವುದರ ಜೊತೆಗೆ ಅವುಗಳ ಕಾಳಜಿ, ಜವಾಬ್ದಾರಿಯನ್ನೂ ತೆಗೆದುಕೊಳ್ಳಬೇಕು ಎಂದು ನ್ಯಾಯಮೂರ್ತಿ ಸಂಜೀವ್ ಖನ್ನಾ ಹೇಳಿದ್ದಾರೆ.

ಬೀದಿನಾಯಿ ಸಮಸ್ಯೆಯನ್ನು



ಪರಿಹರಿಸಲು ತರ್ಕಬದ್ಧ ಪರಿಹಾರವನ್ನು ಕಂಡುಹಿಡಿಯಬೇಕು ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಈ ವಿಚಾರಣೆಯನ್ನು ಸೆಪ್ಟೆಂಬರ್ 28ಕ್ಕೆ ಮುಂದೂಡಲಾಗಿದೆ. ಈ ವಿಷಯದಲ್ಲಿ ಉತ್ತರಗಳನ್ನು ಸಲ್ಲಿಸಲು ಕಕ್ಷಿದಾರರಿಗೆ ತಿಳಿಸಿದೆ.

2019ರಿಂದ ಭಾರತದಲ್ಲಿ 1.5 ಕೋಟಿಗೂ ಹೆಚ್ಚು ನಾಯಿ ಕಡಿತದ ಪ್ರಕರಣಗಳು ದಾಖಲಾಗಿವೆ. ಉತ್ತರ ಪ್ರದೇಶದಲ್ಲಿ (27,52,218), ತಮಿಳು ನಾಡು (20,70,921), ಮಹಾರಾಷ್ಟ್ರ (15,75,606) ಮತ್ತು ಪಶ್ಚಿಮ ಬಂಗಾಳ(12,09,232)ದಲ್ಲಿ ಅತಿ ಹೆಚ್ಚು ಪ್ರಕರಣಗಳು ದಾಖಲಾಗಿವೆ. ಮತ್ತೊಂದೆಡೆ, ಲಕ್ಷದ್ವೀಪದಲ್ಲಿ ಇದುವರೆಗೂ ಯಾವುದೇ ನಾಯಿ ಕಡಿತದ ಪ್ರಕರಣಗಳು ವರದಿಯಾಗಿಲ್ಲ.

2019ರಲ್ಲಿ 72,77,523 ನಾಯಿ ಕಡಿತವಾಗಿವೆ. 2020ರಲ್ಲಿ 46,33,493 ಮತ್ತು ಒಂದು ವರ್ಷದ ನಂತರ 17,01,133ಕ್ಕೆ ಇಳಿದಿದೆ. ಆದರೆ, 2022ರ ಮೊದಲ 7 ತಿಂಗಳು ಕೇವಲ 14.5 ಲಕ್ಷ ಪ್ರಕರಣಗಳನ್ನು ದಾಖಲಿಸಿವೆ. ಈ ವರ್ಷ ಅತಿ ಹೆಚ್ಚು ಪ್ರಕರಣಗಳು ತಮಿಳುನಾಡು (251,510) ಮತ್ತು ಮಹಾರಾಷ್ಟ್ರ (231,531)ದಲ್ಲಿ ದಾಖಲಾಗಿವೆ. ಭಾರತವು ಪ್ರತಿ ವರ್ಷ 100ಕ್ಕೂ ಹೆಚ್ಚು ರೇಬೀಸ್ ಪ್ರಕರಣಗಳು ಮತ್ತು ಸಾವುಗಳನ್ನು ವರದಿ ಮಾಡುತ್ತದೆ.

ವಿಶೇಷವಾಗಿ ಕೇರಳ ಮತ್ತು ಮುಂಬೈನಲ್ಲಿ ಬೀದಿ ನಾಯಿಗಳನ್ನು ಕೊಲ್ಲುವ ಕುರಿತು ವಿವಿಧ ನಾಗರಿಕ ಸಂಸ್ಥೆಗಳು ಹೊರಡಿಸಿದ ಆದೇಶಗಳಿಗೆ ಸಂಬಂಧಿಸಿದ ವಿಷಯಗಳ ಕುರಿತಾದ ಅರ್ಜಿಗಳ ಬ್ಯಾಚ್ ಅನ್ನು ಸುಪ್ರೀಂ ಕೋರ್ಟ್ ವಿಚಾರಣೆ ನಡೆಸುತ್ತಿದೆ. ಕೆಲವು ಎನ್ಜಿಓಗಳು ಮತ್ತು ವೈಯಕ್ತಿಕ ಅರ್ಜಿದಾರರು ಬಾಂಬೆ ಹೈಕೋರ್ಟ್ ಮತ್ತು ಕೇರಳ ಹೈಕೋರ್ಟ್ ಸೇರಿದಂತೆ ಕೆಲವು ಹೈಕೋರ್ಟ್ಗಳ ತೀರ್ಪುಗಳ ವಿರುದ್ಧ ಸುಪ್ರೀಂ ಕೋರ್ಟ್ಗೆ ಅರ್ಜಿ ಸಲ್ಲಿಸಿದ್ದು, ನಿಯಮಗಳ ಪ್ರಕಾರ ಬೀದಿ ನಾಯಿಗಳ ಕಾಟವನ್ನು ಎದುರಿಸಲು ಪುರಸಭೆಯ ಅಧಿಕಾರಿಗಳಿಗೆ ಅವಕಾಶ ಮಾಡಿಕೊಟ್ಟಿದ್ದಾರೆ

# ಮೋದಿ ಕಾರ್ಯಕ್ರಮದಿಂದ ಹೊರಗುಳಿದ 2 ರಾಜ್ಯಗಳು

**ನವದೆಹಲಿ: ಸೆಪ್ಟೆಂಬರ್ 10** ಕೇಂದ್ರ ಸರ್ಕಾರದ ಕಾರ್ಯಕ್ರಮಗಳಿಗೆ ಗೈರು ಹಾಜರಾಗುವ ರಾಜ್ಯಗಳ ಪ್ರವೃತ್ತಿಯಲ್ಲಿ, ಜಾರ್ಖಂಡ್ ಮತ್ತು ಬಿಹಾರ ಪ್ರಧಾನ ಮಂತ್ರಿ ನರೇಂದ್ರ ಮೋದಿ ಶನಿವಾರ ಉದ್ಘಾಟಿಸಿದ ಕೇಂದ್ರ-ರಾಜ್ಯ ವಿಜ್ಞಾನ ಸಮಾವೇಶದಿಂದ ಹೊರಗುಳಿಯಲು ನಿರ್ಧರಿಸಿವೆ. ಎರಡು ರಾಜ್ಯಗಳ ಅನುಪಸ್ಥಿತಿಗೆ ಅಧಿಕೃತ ಕಾರಣಕ್ಕಾಗಿ ಕಾಯಲಾಗುತ್ತಿದೆ. ಆದರೆ ಈವೆಂಟ್ನಲ್ಲಿ ಎಲ್ಲಾ ಇತರ ರಾಜ್ಯ ಸರ್ಕಾರಗಳು ಭಾಗವಹಿಸುತ್ತಿವೆ.

ದೇಶದಾದ್ಯಂತ ದೃಢವಾದ ವಿಜ್ಞಾನ, ತಂತ್ರಜ್ಞಾನ ಮತ್ತು ನಾವೀನ್ಯತೆ (ಎಸ್‌ಟಿಐ) ಪರಿಸರ ವ್ಯವಸ್ಥೆಯನ್ನು ನಿರ್ಮಿಸಲು ಕೇಂದ್ರ-ರಾಜ್ಯ ಸಮನ್ವಯ ಮತ್ತು ಸಹಯೋಗ ಕಾರ್ಯವಿಧಾನಗಳನ್ನು ಬಲಪಡಿಸುವ ಗುರಿಯನ್ನು ಹೊಂದಿರುವ ಈ ರೀತಿಯ ಮೊದಲ ಸಮಾವೇಶವು ಎರಡು ದಿನಗಳ ಕಾರ್ಯಕ್ರಮವಾಗಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಲ್ಲದೆ, ಉನ್ನತ ಕೈಗಾರಿಕೋದ್ಯಮಿಗಳು, ಯುವ ವಿಜ್ಞಾನಿಗಳು ಮತ್ತು ನವೋದ್ಯಮಿಗಳು ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಅಹಮದಾಬಾದ್‌ನ ಸೈನ್ಸ್ ಸಿಟಿಯಲ್ಲಿ ಆಯೋಜಿಸಲಾದ ಈ ಸಮಾವೇಶವು ಡಿಜಿಟಲ್ ಆರೋಗ್ಯ ರಕ್ಷಣೆ, ರೈತರ ಆದಾಯವನ್ನು ಸುಧಾರಿಸಲು ತಾಂತ್ರಿಕ ಮಧ್ಯಸ್ಥಿಕೆಗಳು, ಶುದ್ಧ ಇಂಧನ ಮತ್ತು ಕುಡಿಯುವ ಕುಡಿಯುವ ನೀರನ್ನು ಉತ್ಪಾದಿಸುವ ನಾವೀನ್ಯತೆ ಸೇರಿದಂತೆ ವಿವಿಧ ವಿಷಯಗಳ ಕುರಿತು ಸೆಷನ್‌ಗಳನ್ನು ಒಳಗೊಂಡಿರುತ್ತದೆ.

ಎರಡೂ ರಾಜ್ಯಗಳ ರಾಜಕೀಯ ಅಶಾಂತಿಯ ನಡುವೆ ಎರಡು ರಾಜ್ಯಗಳ ಈ ನಿರ್ಧಾರವು ಹೊರಬಂದಿದೆ. ಜಾರ್ಖಂಡ್‌ನಲ್ಲಿ, ಮುಖ್ಯಮಂತ್ರಿ ಸೊರೆನ್ ಅವರು ವಿಧಾನಸಭೆಯಲ್ಲಿ ಬಲಾಬಲ ಪರೀಕ್ಷೆಯಲ್ಲಿ ಗೆದ್ದಿದ್ದರೂ, ಅವರು ಅಧಿಕಾರದಲ್ಲಿರುವಾಗ ಸ್ವತಃ ಗಣಿಗಾರಿಕೆ ಗುತ್ತಿಗೆಯನ್ನು ನೀಡಿದ್ದಕ್ಕಾಗಿ ಅನರ್ಹಗೊಳಿಸುವ ನಿರೀಕ್ಷೆಯನ್ನು ಎದುರಿಸುತ್ತಿದ್ದಾರೆ. ಬಿಜೆಪಿಯೇ ಚುನಾವಣಾ ಆಯೋಗಕ್ಕೆ ದೂರು ನೀಡಿದೆ. ಆಡಳಿತಾರೂಢ ಜೆಎಂಎಂ-ಕಾಂಗ್ರೆಸ್ ಮೈತ್ರಿಕೂಟವು ಮಹಾರಾಷ್ಟ್ರ ಮತ್ತು ಮಧ್ಯಪ್ರದೇಶದಲ್ಲಿ ನಡೆದ ರೀತಿಯಲ್ಲಿ ಪಕ್ಷಗಳನ್ನು ಒಡೆದು ಸರ್ಕಾರವನ್ನು ಉರುಳಿಸಲು ಬಿಜೆಪಿ ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದೆ.

ಮುಖ್ಯಮಂತ್ರಿ ನಿತೀಶ್ ಕುಮಾರ್ ಬಿಜೆಪಿಯೊಂದಿಗಿನ ಮೈತ್ರಿಯನ್ನು ಕೊನೆಗೊಳಿಸಿದ್ದರಿಂದ ಮತ್ತು ತೇಜಸ್ವಿ ಯಾದವ್ ಅವರ ರಾಷ್ಟ್ರೀಯ ಜನತಾ ದಳ, ಕಾಂಗ್ರೆಸ್ ಮತ್ತು ಇತರ ಸಣ್ಣ ಪಕ್ಷಗಳೊಂದಿಗೆ ಹೊಸ ಸರ್ಕಾರವನ್ನು ರಚಿಸಿದ್ದರಿಂದ, ಸಮಾವೇಶವನ್ನು ತಪ್ಪಿಸುವ ಇತರ ರಾಜ್ಯವಾದ ಬಿಹಾರವು ಇತ್ತೀಚೆಗೆ ರಾಜಕೀಯ ಬಿರುಗಾಳಿಯಿಂದ ಹೊರಬಂದಿದೆ.

ಇನ್ನೊಂದು ಘಟನೆಯಲ್ಲಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಗುರುವಾರ ಇಂಡಿಯಾ ಗೇಟ್ ಬಳಿಯ ನೇತಾಜಿ ಸುಭಾಷ್ ಚಂದ್ರ ಬೋಸ್ ಅವರ 28 ಅಡಿ ಪ್ರತಿಮೆ ಮತ್ತು ನವೀಕರಿಸಿದ ಸೆಂಟ್ರಲ್ ವಿಸ್ಟಾ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸುವುದಿಲ್ಲ ಎಂದು ನಿರ್ಧರಿಸಿದರು.

# ರಾಜ್ಯಸಭಾ ಚುನಾವಣೆ : ತ್ರಿಪುರಾದ ಮಾಜಿ ಸಿಎಂ ದೇವ್ ಬಿಜೆಪಿ ಅಭ್ಯರ್ಥಿ

**ಹೊಸದಿಲ್ಲಿ : ಸೆ.10:** ತ್ರಿಪುರಾದಿಂದ ರಾಜ್ಯಸಭಾ ಸ್ಥಾನಕ್ಕಾಗಿ ಸೆ.22ರಂದು ನಡೆಯುವ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ತ್ರಿಪುರಾದ ಮಾಜಿ ಮುಖ್ಯಮಂತ್ರಿ ಬಿಪ್ಲವ್ ದೇವ್ ಅವರನ್ನು ಆಯ್ಕೆ ಮಾಡಲಾಗಿದೆ.

ರಾಜ್ಯಸಭಾ ಚುನಾವಣೆಯಲ್ಲಿ ತಮ್ಮನ್ನು ಬಿಜೆಪಿ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡಿರುವುದಕ್ಕೆ ದೇವ್ ಅವರು ಪ್ರಧಾನಿ ನರೇಂದ್ರ ಮೋದಿ, ಗೃಹಸಚಿವ ಅಮಿತ್ ಶಾ, ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಅವರಿಗೆ ಕೃತಜ್ಞತೆ ಸಲ್ಲಿಸಿದ್ದಾರೆ. ಬಿಜೆಪಿ ರಾಜ್ಯಸಭಾ ಸದಸ್ಯರಾಗಿದ್ದ ಡಾ.ಮಾಣಿಕ್ ಸಾಹ ಅವರನ್ನು ,ಜುಲೈಯಲ್ಲಿ ತ್ರಿಪುರಾ ಮುಖ್ಯಮಂತ್ರಿಯನ್ನಾಗಿ ನೇಮಿಸಿದ ಬಳಿಕ ತೆರವಾದ ಸ್ಥಾನಕ್ಕೆ ಈ ಚುನಾವಣೆ ನಡೆಯುತ್ತಿದೆ.

ತ್ರಿಪುರಾ ಮತ್ತು ರಾಜ್ಯದ ಜನತೆಯ ಅಭಿವೃದ್ಧಿ ಮತ್ತು ಕಲ್ಯಾಣಕ್ಕೆ ಶ್ರಮಿಸಲು ನಾನು ಬದ್ಧನಾಗಿದ್ದು , ಈಗ ತನ್ನನ್ನು ರಾಜ್ಯಸಭಾ ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯನ್ನಾಗಿಸಿರುವುದಕ್ಕಾಗಿ ಪಕ್ಷಕ್ಕೆ ಕೃತಜ್ಞತೆ ಸಲ್ಲಿಸುವೆ ಎಂದು ಅವರು ಹೇಳಿದರು. ಈಗಾಗಲೇ ಬಿಜೆಪಿ ದೇವ್ ಅವರಿಗೆ ಪಕ್ಷದ ಸಂಘಟನಾತ್ಮಕ ಜವಾಬ್ದಾರಿ ನೀಡಲಾಗಿದ್ದು ,



ಅವರನ್ನು ಹರ್ಯಾಣದಲ್ಲಿ ಪಕ್ಷದ ಉಸ್ತುವಾರಿಯನ್ನಾಗಿ ಮಾಡಲಾಗಿದೆ. ಎಡಪಕ್ಷಗಳು ಮಾಜಿ ಹಣಕಾಸು ಸಚಿವ ಹಾಗೂ ಶಾಸಕ ಭಾನುಲಾಲ್ ಸಾಹ ಅವರನ್ನು ಅಭ್ಯರ್ಥಿಯನ್ನಾಗಿಸಿವೆ.

# ರಾಷ್ಟ್ರೀಯ ಕಡಲ ಪರಂಪರೆಯ ಸಂಕೀರ್ಣ ನಿರ್ಮಾಣ

**ಗಾಂಧಿನಗರ: ಸೆ.10:** ಗುಜರಾತ್‌ನ ಲೋಥಾಲ್‌ನಲ್ಲಿರುವ ಸಿಂಧೂ ಕಣಿವೆ ನಾಗರಿಕತೆಯ ಸ್ಥಳದಲ್ಲಿ ರಾಷ್ಟ್ರೀಯ ಕಡಲ ಪರಂ.ಪರೆಯ ಸಂಕೀರ್ಣ(ಎನ್‌ಎಮ್‌ಎಚ್‌ಸಿ) ನಿರ್ಮಿಸಲು ಬಂದರು, ಶಿಪ್ಪಿಂಗ್ ಮತು ಜಲಮಾರ್ಗ ಸಚಿವಾಲಯವು ಯೋಜಿಸಿದೆ. ಇದು ಭಾರತದ ಮೊದಲ ರೀತಿಯ ಸಂಕೀರ್ಣವಾದ ಕೇಂದ್ರವಾಗಿದ್ದು ದೇಶದ ಶ್ರೀಮಂತ ಮತ್ತು ವೈವಿಧ್ಯಮಯ ಕಡಲ ಪರಂಪರೆಯನ್ನು ಪ್ರದರ್ಶಿಸುತ್ತದೆ. ಎನ್‌ಎಂಎಚ್‌ಸಿ ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ಅಡಿಗಲ್ಲು ಹಾಕಿದ್ದು , 2019 ಮಾರ್ಚ್ ತಿಂಗಳಿನಲ್ಲಿ ಈ ಯೋಜನೆಗೆ ಒಪ್ಪಿಗೆ ನೀಡಲಾಗಿತ್ತು . ಈ ಹೊಸ ಯೋಜನೆಯನ್ನು ವಿವಿಧ ಹಂತಗಳಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ. 1ಎ ಹಂತದಲ್ಲಿ 774.23 ಕೋಟಿ ಬಂಡವಾಳದಲ್ಲಿ 35 ಎಕರೆ ಜಾಗದಲ್ಲಿ 5 ಗ್ಯಾಲರಿಗಳೊಂದಿಗೆ ಮ್ಯೂಸಿಯಂ ನಿರ್ಮಿಸಲಾಗುವುದು. ಹಂತ 1ಬಿನಲ್ಲಿ ಗ್ಯಾಲರಿಗಳು, ಲೈಟ್ ಹೌಸ್ 5ಡಿ ಥಿಯೇಟರ್, ಬಾಗಿಚಾ ಕಾಂಪ್ಲೆಕ್ಸ್ ಮತ್ತು ಇತರ ಮೂಲ ಸೌಕರ್ಯಗಳನ್ನು ಒಳಗೊಂಡಂತೆ ವಸ್ತು ಸಂಗ್ರಹಾಲಯದ ಉಳಿದ ಭಾಗಗಳನ್ನು ನಿರ್ಮಿಸಲಾಗುವುದು. ಈ ಹಂತವನ್ನು ಇಪಿಸಿ ಮೋಡ್ ಅಡಿಯಲ್ಲಿ ಅಭಿವೃದ್ಧಿಪಡಿಸಲಾಗುವುದು.

ಹಂತ 2 ರಾಜ್ಯ ಪೆವಿಲಿಯನ್‌ಗಳು, ಲೋಥಲ್ ಸಿಟಿ, ಹಾಸ್ಟೆಲ್, ಇಕೋ ರೆಸಾರ್ಟ್‌ಗಳು ಕಡಲ ಮತ್ತು ನೌಕಾ ಥೀಮ್‌ಪಾರ್ಕ್, ಮತ್ತು ಸಾಹಸ ಹಾಗೂ ಅಮ್ಯೂಸ್‌ಮೆಂಟ್ ಪಾರ್ಕ್ ಸೇರಿದಂತೆ ಮಾರಿಟೈಮ್ ಇನ್ಸಿಸ್ಟಿಟ್ಯೂಟ್ ಗಳನ್ನು ಒಳಗೊಂಡಿರುತ್ತದೆ.

# ಸಿಧು ಮೂಸೆವಾಲಾ ಹತ್ಯೆ : ಮತ್ತೊಬ್ಬ ಆರೋಪಿ ಬಂಧನ

**ಚಂಡೀಗಢ: ಸೆಪ್ಟೆಂಬರ್ 10:** ಗಾಯಕ ಸಿಧು ಮೂಸೆ ವಾಲಾ ಹತ್ಯೆಯಲ್ಲಿ ಭಾಗಿಯಾಗಿದ್ದಾರೆ ಎನ್ನಲಾದ ಆರು ಶೂಟರ್‌ಗಳ ಪೈಕಿ ಕೊನೆಯವನನ್ನು ಇಂದು ಬಂಧಿಸಲಾಗಿದೆ ಎಂದು ಪಂಜಾಬ್ ಪೊಲೀಸರು ತಿಳಿಸಿದ್ದಾರೆ. ಈ ಹಿಂದೆ ಮೂವರು ಶೂಟರ್‌ಗಳನ್ನು ದೆಹಲಿ ಪೊಲೀಸರು ಬಂಧಿಸಿದ್ದರೆ, ಪಂಜಾಬ್ ಪೊಲೀಸರು ಅಮೃತಸರ ಬಳಿ ಎನ್‌ಕೌಂಟರ್‌ನಲ್ಲಿ ಇಬ್ಬರು ಸಾವನ್ನಪ್ಪಿದ್ದರು.

ಇದೀಗ ಬಂಧಿತನಾಗಿರುವ ದೀಪಕ್ ಅಲಿಯಾಸ್ ಮುಂಡಿ ಆತನ ಇಬ್ಬರು ಸಹಚರರಾದ ಕಪಿಲ್ ಪಂಡಿತ್ ಮತ್ತು ರಾಜಿಂದರ್ ಅವರೊಂದಿಗೆ ಪಶ್ಚಿಮ ಬಂಗಾಳ-ನೇಪಾಳ ಗಡಿಯಲ್ಲಿ ಕೇಂದ್ರೀಯ ಸಂಸ್ಥೆಗಳ ಜಂಟಿ ಕಾರ್ಯಾಚರಣೆಯಲ್ಲಿ ಸಿಕ್ಕಿಬಿದ್ದಿದ್ದಾನೆ ಎಂದು ಪಂಜಾಬ್ ಪೊಲೀಸ್ ಮಹಾನಿರ್ದೇಶಕ ಗೌರವ್ ಯಾದವ್ ಸುದ್ದಿಗೆ ತಿಳಿಸಿದ್ದಾರೆ.

ಪಂಜಾಬ್‌ನ ಮಾನ್ಸಾ ಜಿಲ್ಲೆಯಲ್ಲಿ ಮೇ 29 ರಂದು ಕಾಂಗ್ರೆಸ್ ಮುಖಂ



ಡರೂ ಆಗಿದ್ದ ಸಿಧು ಮೂಸ್ ವಾಲಾ ಅವರ ಭದ್ರತೆಯನ್ನು ರಾಜ್ಯ ಸರ್ಕಾರವು ಕಡಿತಗೊಳಿಸಿದ ಒಂದು ದಿನದ ನಂತರ ಅವರನ್ನು ಗುಂಡಿಕ್ಕಿ ಕೊಲ್ಲಲಾಯಿತು. ಈ ವಾರದ ಆರಂಭದಲ್ಲಿ ಮತ್ತೊಂದು ಸಂಬಂಧಿತ ಬೆಳವಣಿಗೆಯಲ್ಲಿ ಮೂಸೆ ವಾಲಾ ಅವರ ತಂದೆ ಬಲ್ಕೂರ್ ಸಿಂಗ್ ಸಿಧು ಅವರಿಗೆ ಇಮೇಲ್ ಮೂಲಕ ಕೊಲೆ ಬೆದರಿಕೆಯನ್ನು ಕಳುಹಿಸಿದ್ದಕ್ಕಾಗಿ ರಾಜಸ್ಥಾನದ ಜೋಧ್‌ಪುರದ ವ್ಯಕ್ತಿಯನ್ನು ಮಾನ್ಸಾ ಪೊಲೀಸರು ಬಂಧಿಸಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ.

ಬಂಧಿತ ವ್ಯಕ್ತಿ ಮಹಿಪಾಲ್, ಕೊಲೆಯ ಹಿಂದಿನ ಸೂತ್ರಧಾರ ಕೆನಡಾ ಮೂಲದ ಗೋಲ್ಡಿ ಬ್ರಾರ್ ಜೊತೆಗೆ ಜೈಲಿನಲ್ಲಿರುವ ದರೋಡೆಕೋರ ಲಾರೆನ್ಸ್ ಬಿಷ್ಣೋಯ್ ಹೆಸರಿನಲ್ಲಿ ಸೃಷ್ಟಿಸಿದ ಪುಟದಲ್ಲಿ ಸಾಮಾಜಿಕ ಮಾಧ್ಯಮದಲ್ಲಿ ಫಾಲೋವರ್ಸ್ ಸಂಖ್ಯೆಯನ್ನು ಹೆಚ್ಚಿಸುವ ಉದ್ದೇಶದಿಂದ ಬೆದರಿಕೆಯನ್ನು ಕಳುಹಿಸಿದ್ದ ಎಂದು ತಿಳಿಸಿದ್ದಾರೆ.

ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸೆಪ್ಟೆಂಬರ್ 1 ರಂದು ಇಬ್ಬರು ಶಂಕಿತ ಆರೋಪಿಗಳಾದ ಕೀನ್ಯಾದಿಂದ ಅನ್ಮೋಲ್ ಬಿಷ್ಣೋಯ್ ಮತ್ತು ಅಜೆರ್ಬೈಜಾನ್‌ನಲ್ಲಿ ಸಚಿನ್ ಥಾಪನ್ ಅವರನ್ನು ಬಂಧಿಸಲಾಗಿದೆ ಎಂದು ಕೇಂದ್ರ ಸರ್ಕಾರ ದೃಢಪಡಿಸಿದೆ. ಮಾಧ್ಯಮಗಳ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ವಿದೇಶಾಂಗ ವ್ಯವಹಾರಗಳ ಸಚಿವಾಲಯ, ಸ್ಥಳೀಯ ಅಧಿಕಾರಿಗಳು ಈ ಇಬ್ಬರನ್ನು ಕಸ್ಟಡಿಗೆ ತೆಗೆದುಕೊಂಡಿದ್ದಾರೆ. ನಾವು ಸ್ಥಳೀಯ ಅಧಿಕಾರಿಗಳೊಂದಿಗೆ ನಿಕಟ ಸಂಪರ್ಕದಲ್ಲಿದ್ದೇವೆ. ಆದರೆ ಕಾನೂನು ಪ್ರಕ್ರಿಯೆ ಕುರಿತು ಯಾವುದೇ ಪ್ರತಿಕ್ರಿಯೆಗಳನ್ನು ನೀಡಲಿಲ್ಲ

# ಮೊಬೈಲ್ ಗೇಮಿಂಗ್ ಆಪ್ ವಂಚನೆ : ಕೊಲ್ಕತ್ತಾದಲ್ಲಿ ಇಡಿ ದಾಳಿ, 7 ಕೋಟಿ ವಶ

**ಕೋಲ್ಕತ್ತಾ: ಸೆಪ್ಟೆಂಬರ್ 10:** ಕೋಲ್ಕತ್ತಾದ ಗಾರ್ಡನ್ ರೀಚ್ ಪ್ರದೇಶದಲ್ಲಿರುವ ಉದ್ಯಮಿ ಅಮೀರ್ ಖಾನ್ ಅವರ ಮನೆ ಮೇಲೆ ದಾಳಿ ನಡೆಸಿದ ಜಾರಿ ನಿರ್ದೇಶನಾಲಯ ಅಧಿಕಾರಿಗಳು 7 ಕೋಟಿ ರೂಪಾಯಿ ನಗದು ಮತ್ತು ಆಸ್ತಿ ದಾಖಲೆಗಳನ್ನು ವಶಪಡಿಸಿಕೊಂಡಿದ್ದಾರೆ.

E-Nuggets ಎಂಬ ಮೊಬೈಲ್ ಗೇಮಿಂಗ್ ಆಪ್ ಬಳಕೆದಾರರಿಗೆ ವಂಚಿಸಿದ ಆರೋಪದ ಮೇಲೆ ಆರೋಪಿ ಅಮೀರ್ ಖಾನ್ ಮತ್ತು ಇತರರ ವಿರುದ್ಧ ಫೆಡರಲ್ ಬ್ಯಾಂಕ್ ಅಧಿಕಾರಿಗಳು ನೀಡಿದ ದೂರಿನ ಮೇರೆಗೆ ಹಣ ವರ್ಗಾವಣೆ ತಡೆ ಕಾಯ್ದೆ **(PMLA)** ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ.

ಜಾರಿ ನಿರ್ದೇಶನಾಲಯ ಕೋಲ್ಕತ್ತಾದ ಆರು ಸ್ಥಳಗಳಲ್ಲಿ



ಮೊಬೈಲ್ ಗೇಮಿಂಗ್ ಅಪ್ಲಿಕೇಶನ್ ಮೂಲಕ ವಂಚನೆ ಪ್ರಕರಣವನ್ನು ತನಿಖೆ ನಡೆಸುತ್ತಿದೆ. ದಾಳಿ ಮುಂದುವರೆದಿದ್ದು, ವಶಪಡಿಸಿಕೊಂಡಿರುವ ಹಣದ ನಿಖರವಾದ ಮೊತ್ತವನ್ನು ಖಚಿತಪಡಿಸಿಕೊಳ್ಳಲು ನಗದು ಎಣಿಕೆ ಯಂತ್ರಗಳನ್ನು ತರಲಾಗಿದೆ.

ಒಬ್ಬ ವ್ಯಕ್ತಿ ಅಮೀರ್ ಖಾನ್, **S/o** ನೇಸರ್ ಅಹ್ಮದ್ ಖಾನ್ ಇ-ನಗ್ಗಟ್ಸ್ ಎಂಬ ಮೊಬೈಲ್ ಗೇಮಿಂಗ್ ಅಪ್ಲಿಕೇಶನ್ ಅನ್ನು ಪ್ರಾರಂಭಿಸಿದರು, ಇದನ್ನು ಸಾರ್ವಜನಿಕರನ್ನು ವಂಚಿಸುವ ಉದ್ದೇಶಕ್ಕಾಗಿ ವಿನ್ಯಾಸಗೊಳಿಸಲಾಗಿದೆ. ಆರಂಭಿಕ ಅವಧಿಯಲ್ಲಿ, ಬಳಕೆದಾರರಿಗೆ ಕಮಿಷನ್‌ನೊಂದಿಗೆ ಬಹುಮಾನ ನೀಡಲಾಯಿತು ಮತ್ತು ವಾಲೆಟ್‌ನಲ್ಲಿನ ಬ್ಯಾಲೆನ್ಸ್ ಅನ್ನು ತೊಂದರೆಯಿಲ್ಲದೆ ಹಿಂಪಡೆಯಬಹುದು ಎಂದು ಹೇಳಿಕೆ ತಿಳಿಸಿದೆ.


> ಜಾರಿ ನಿರ್ದೇಶನಾಲಯ ಕೋಲ್ಕತ್ತಾದ ಆರು ಸ್ಥಳಗಳಲ್ಲಿ ಮೊಬೈಲ್ ಗೇಮಿಂಗ್ ಅಪ್ಲಿಕೇಶನ್ ಮೂಲಕ ವಂಚನೆ ಪ್ರಕರಣವನ್ನು ತನಿಖೆ ನಡೆಸುತ್ತಿದೆ. ದಾಳಿ ಮುಂದುವರೆದಿದ್ದು, ವಶಪಡಿಸಿಕೊಂಡಿರುವ ಹಣದ ನಿಖರವಾದ ಮೊತ್ತವನ್ನು ಖಚಿತಪಡಿಸಿಕೊಳ್ಳಲು ನಗದು ಎಣಿಕೆ ಯಂತ್ರಗಳನ್ನು ತರಲಾಗಿದೆ

# ಕಾಂಗ್ರೆಸ್ ಅಭಿವೃದ್ಧಿ ಮಾದರಿ ಅಧ್ಯಯನಕ್ಕೆ ಜೆ.ಪಿ ನಡ್ಡಾ : ಛತ್ತೀಸ್‌ಗಢ ಸಿಎಂ ಟೀಕೆ

**ರಾಯಪುರ: ಸೆಪ್ಟೆಂಬರ್ 10:** ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಅವರು ಚಂಡೀಗಡ ರಾಜ್ಯದಲ್ಲಿನ ಕಾಂಗ್ರೆಸ್ ಅಭಿವೃದ್ಧಿ ಮಾದರಿಯ ಅಧ್ಯಯನ ನಡೆಸಲು ಆಗಮಿಸುತ್ತಿದ್ದಾರೆ ಎಂದು ಛತ್ತೀಸ್‌ಗಢ ಮುಖ್ಯಮಂತ್ರಿ ಭೂಪೇಶ್ ಭಗೇಲ್ ಟೀಕಿಸಿದ್ದಾರೆ.

ನಮ್ಮ ರಾಜ್ಯದ ಮಾದರಿ ಕಲಿಯಲು ಬಿಜೆಪಿ ಇಲ್ಲಿಗೆ ಬರುತ್ತಿದೆ. ನಮ್ಮ ಯೋಜನೆಗಳನ್ನು ಕೇಂದ್ರ ಅಳವಡಿಸಿಕೊಂಡಿದೆ. ಬಿಜೆಪಿ ಏಕಾಂಗಿಯಾಗಿ ಹೋರಾಡುವುದಿಲ್ಲ, ಇಡಿ, ಐಟಿ ಮತ್ತು ಸಿಬಿಐನಂತಹ ಕೇಂದ್ರೀಯ ಸಂಸ್ಥೆಗಳನ್ನು ಬಳಸುತ್ತದೆ ಎಂದು ತಿಳಿಸಿದರು.

ಕಾಂಗ್ರೆಸ್ ಸಹೋದರ ಮತ್ತು ಸಹೋದರಿಯ ಪಕ್ಷ. ಅವರ ಸ್ವಂತ ಪಕ್ಷವು ರಾಜವಂಶದ ಸಂಸ್ಕೃತಿಗೆ ವಿರುದ್ಧವಾಗಿದೆ ಎಂದು ಜೆ.ಪಿ ನಡ್ಡಾ ಹೇಳಿದ



ನಂತರ ಮುಖ್ಯಮಂತ್ರಿ ಭುಪೇಶ್ ಭಗೇಲ್ ಬಿಜೆಪಿಗೆ ಟಾಂಗ್ ಕೊಟ್ಟಿದ್ದಾರೆ.

ರಾಯ್‌ಪುರದಲ್ಲಿ ನಡೆದ ಸಭೆಯೊಂದರಲ್ಲಿ ಮಾತನಾಡಿದ ನಡ್ಡಾ, ಕಾಂಗ್ರೆಸ್ ಸಹೋದರ ಸಹೋದರಿಯರ ಪಕ್ಷವಾಗಿದೆ, ಈ ದಿನಗಳಲ್ಲಿ ಮುಖ್ಯಮಂತ್ರಿ ಭಾಗೇಲ್ ಭಾರತ್ ಜೋಡೋ ರ್‍ಯಾಲಿಗಳಿಗೆ ಹೋಗುತ್ತಿದ್ದಾರೆ, ಅವರು ಮೊದಲು ತಮ್ಮದೇ ಪಕ್ಷವನ್ನು ಒಟ್ಟುಗೂಡಿಸಬೇಕು. ನಮ್ಮ ಹೋರಾಟ ಕುಟುಂಬ ರಾಜಕಾರಣದ ವಿರುದ್ಧ ಎಂದು ಹೇಳಿದ್ದರು.


ದೇಶಾದ್ಯಂತ ರಾಜಕೀಯ ಚಟುವಟಿಕೆಗಳು ಹೆಚ್ಚುತ್ತಿರುವ ಸಂದರ್ಭದಲ್ಲಿ ನಡ್ಡಾ ಅವರು ಕೂಡ ಚಂಡೀಗಡಕ್ಕೆ ಭೇಟಿ ನೀಡಿದ್ದಾರೆ. ತಮಿಳುನಾಡಿನ ಕನ್ಯಾಕುಮಾರಿ ಜಿಲ್ಲೆಯ ನಾಗರಕೋಯಿಲ್ ನಗರದಲ್ಲಿ ಪಕ್ಷದ ಸಂಸದ ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ಶುಕ್ರವಾರ ತನ್ನ 'ಭಾರತ್ ಜೋಡೋ ಯಾತ್ರೆ~ಯನ್ನು ಮುಂದುವರೆಸಿದೆ. ಮೂರನೇ ದಿನದ ಯಾತ್ರೆಯು ನಾಗರಕೋಯಿಲ್‌ನ ಸ್ಕಾಟ್ ಕ್ರಿಶ್ಚಿಯನ್ ಕಾಲೇಜಿನಿಂದ ತಮಿಳುನಾಡಿನ ಅಳಗಿಯಮಂಡಪಂ ಜಂಕ್ಷನ್‌ವರೆಗೆ ಪ್ರಾರಂಭವಾಯಿತು.

> ನಮ್ಮ ರಾಜ್ಯದ ಮಾದರಿ ಕಲಿಯಲು ಬಿಜೆಪಿ ಇಲ್ಲಿಗೆ ಬರುತ್ತಿದೆ. ನಮ್ಮ ಯೋಜನೆಗಳನ್ನು ಕೇಂದ್ರ ಅಳವಡಿಸಿಕೊಂಡಿದೆ. ಬಿಜೆಪಿ ಏಕಾಂಗಿ ಯಾಗಿ ಹೋರಾಡುವುದಿಲ್ಲ, ಇಡಿ, ಐಟಿ ಮತ್ತು ಸಿಬಿಐನಂತಹ ಕೇಂದ್ರೀಯ ಸಂಸ್ಥೆಗಳನ್ನು ಬಳಸುತ್ತದೆ. ಕಾಂಗ್ರೆಸ್ ಸಹೋದರ ಮತ್ತು ಸಹೋದರಿಯ ಪಕ್ಷ. ಅವರ ಸ್ವಂತ ಪಕ್ಷವು ರಾಜವಂಶದ ಸಂಸ್ಕೃತಿಗೆ ವಿರುದ್ಧವಾಗಿದೆ.
> – ಭೂಪೇಶ್ ಭಗೇಲ್, ಛತ್ತೀಸ್‌ಗಢ ಮುಖ್ಯಮಂತ್ರಿ

# ದಲಿತ ಬಾಲಕನ ಮೇಲೆ ಜೈನ ಅರ್ಚಕನಿಂದ ಹಲ್ಲೆ

**ಸಾಗರ್: ಸೆಪ್ಟೆಂಬರ್ 10:** 11 ವರ್ಷದ ದಲಿತ ಮಗುವು ಬಾದಾಮಿಯನ್ನು ತೆಗೆದುಕೊಂಡು ಕಾರಣಕ್ಕೆ ಜೈನ ದೇವಾಲಯದ ಅರ್ಚಕರು ಮರಕ್ಕೆ ಕಟ್ಟಿ ಥಳಿಸಿದ ಅಮಾನವೀಯ ಘಟನೆ ಮಧ್ಯಪ್ರದೇಶದ ಸಾಗರ್ ಎಂಬಲ್ಲಿ ನಡೆದಿದೆ.

ಥಳಿಸಿದ ವ್ಯಕ್ತಿಯನ್ನು ರಾಕೇಶ್ ಜೈನ್ ಎಂದು ಗುರುತಿಸಲಾಗಿದೆ. ಮಗುವಿನ ತಂದೆ ನೀಡಿದ ದೂರಿದ ಆಧಾರದ ಮೇಲೆ ಕರೀಲದಲ್ಲಿರುವ ಜೈನ್ ಸಿದ್ಧಾಯತನ ಮಂದಿರದ ಪುರೋಹಿತ ರಾಕೇಶ್ ಜೈನ್ ಮೇಲೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ



ಎಂದು ಪೊಲೀಸರು ತಿಳಿಸಿದ್ದಾರೆ.

ಮರಕ್ಕೆ ಕಟ್ಟಿಹಾಕಿದ ಬಾಲಕ ಅಳುತ್ತಿರುವುದನ್ನು ಮತ್ತು ಬಿಡುಗಡೆ ಮಾಡುವಂತೆ ಕೇಳುತ್ತಿರುವ ವೀಡಿಯೊ ಶನಿವಾರ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗಿತ್ತು. ದೂರುದಾರರ ಪ್ರಕಾರ, ಬಾಲಕ ಗುರುವಾರ ದೇವಸ್ಥಾನದ ಗೇಟ್ ಬಳಿ ನಿಂತಿದ್ದಾಗ ಬಾದಾಮಿ ಕಳ್ಳತನ ಮಾಡಿದ್ದಾನೆ ಎಂದು ಆರೋಪಿಸಲಾಗಿತ್ತು. ಪೂಜಾರಿ ಮತ್ತೊಬ್ಬನ ಸಹಾಯದಿಂದ ಮಗುವನ್ನು ಮರಕ್ಕೆ ಕಟ್ಟಿ ಥಳಿಸಿದ್ದಾರೆ ಎಂದು ಆರೋಪಿಸಿದರು.

ಆರೋಪಿ ಪೂಜಾರಿ ವಿರುದ್ಧ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ (ದೌರ್ಜನ್ಯ ತಡೆ) ಕಾಯ್ದೆಯಡಿ ಪ್ರಕರಣ ದಾಖಲಾಗಿದ್ದು, ಇದುವರೆಗೆ ಯಾರನ್ನೂ ಬಂಧಿಸಿಲ್ಲ ಎಂದು ಅಧಿಕಾರಿ ತಿಳಿಸಿದ್ದಾರೆ.

# ಪ್ರವೀಣ್ ನೆಟ್ಟಾರು ಮನೆಯವರಿಗೆ ಉದ್ಯೋಗ: ಮುಖ್ಯಮಂತ್ರಿ ಬೊಮ್ಮಾಯಿ ಘೋಷಣೆ:



**ದೊಡ್ಡಬಳ್ಳಾಪುರ, ಸೆ.10–** ಇತ್ತೀಚೆಗೆ ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ಳಾರೆಯಲ್ಲಿ ಹತ್ಯೆಯಾದ ಪ್ರವೀಣ್ ನೆಟ್ಟಾರ್ ಅವರ ಮನೆಯವರಿಗೆ ತನ್ನ ಕಚೇರಿಯಲ್ಲಿ ಉದ್ಯೋಗ ನೀಡುವುದಾಗಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಘೋಷಣೆ ಮಾಡಿದ್ದಾರೆ.

ದೊಡ್ಡಬಳ್ಳಾಪುರದಲ್ಲಿ ನಡೆಯುತ್ತಿರುವ ಜನಸ್ಪಂದನ ಕಾರ್ಯಕ್ರಮದಲ್ಲಿ ಮಾತನಾಡಿದ ಸಿಎಂ, ಯುವ ಮೋರ್ಚಾ ಕಾರ್ಯಕರ್ತ ಪ್ರವೀಣ್ ನೆಟ್ಟಾರು ಷಡ್ಯಂತ್ರಕ್ಕೆ ಬಲಿಯಾಗಿ ಪ್ರಾಣ ತ್ಯಾಗ ಮಾಡಿದ್ದಾರೆ. ಅವರ ಮನೆಯವರಿಗೆ ನಾನು ನನ್ನ ಕಚೇರಿಯಲ್ಲಿ ಕೆಲಸ ಕೊಡುವ ಆಜ್ಞೆ ಮಾಡುತ್ತೇನೆ ಎಂದರು. ಕಾರ್ಯಕ್ರಮ ವೇದಿಕೆಯಲ್ಲಿ ಪ್ರವೀಣ್ ನೆಟ್ಟಾರು ಮತ್ತು ಇತ್ತೀಚೆಗೆ ಅಗಲಿದ ಉಮೇಶ್ ಕತ್ತಿ ಅವರ ಭಾವಚಿತ್ರಕ್ಕೆ ನಮನ ಸಲ್ಲಿಸಲಾಯಿತು.

ನಾವು ದೊಡ್ಡಬಳ್ಳಾಪುರದಿಂದ ಜನಸ್ಪಂದನ ಯಾತ್ರೆಯನ್ನು ರಾಜ್ಯಾದ್ಯಂತ ನಡೆಸುತ್ತೇವೆ. ತಾಕತ್ ಇದ್ದರೆ ನಮ್ಮ ಯಾತ್ರೆಯನ್ನು ನಿಲ್ಲಿಸಿ, ನಿಮ್ಮ ಮಾತಿನಿಂದಲ್ಲ ಎಂದು ಕಾಂಗ್ರೆಸ್ ಗೆ ಸವಾಲೆಸೆದರು.ಇದು ಪ್ರಜಾಪ್ರಭುತ್ವ. ಇಲ್ಲಿ ಜನರು ನಿರ್ಧಾರ ಮಾಡುತ್ತಾರೆ. ರಾಜ್ಯದಲ್ಲಿ ಪ್ರತಿ ಗ್ರಾಮಗಳಿಗೆ ಜನಸ್ಪಂದನ ಯಾತ್ರೆ ನಡೆಸುತ್ತೇವೆ. ರಾಜ್ಯದಲ್ಲಿ ಮತ್ತೆ ಬಿಜೆಪಿ ಅಧಿಕಾರಕ್ಕೆ ಬರುತ್ತದೆ. ನಮ್ಮ ಸಾಧನೆಗಳ ರಿಪೋರ್ಟ್ ಕಾರ್ಡ್ ತೋರಿಸಿ ನಿಮ್ಮ ಮುಂದೆ ಬಂದು ನಿಲ್ಲುತ್ತೇವೆ. ಆಶೀರ್ವಾದ ಮಾಡಿ. ಈ ಜನಸ್ಪಂದನ ವಿಜಯೋತ್ಸವವನ್ನಾಗಿ ಮಾಡುತ್ತೇವೆ. ನನ್ನ ಅದಮ್ಯ ಶಕ್ತಿಯನ್ನು ಇಮ್ಮಡಿಗೊಳಿಸಿ ಪಕ್ಷ ಅಧಿಕಾರಕ್ಕೆ ತರಲು ಹೊರಡುತ್ತಿದ್ದೇನೆ ಎಂದು ಬೊಮ್ಮಾಯಿ ಹೇಳಿದರು.

# ಕಾಂಗ್ರೆಸ್‌ನಿಂದ ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸ–ಶ್ರೀರಾಮುಲು



**ಬೆಂಗಳೂರು, ಸೆ.10–** ಬಿಜೆಪಿ ಸರ್ಕಾರದ 3 ವರ್ಷಗಳ ಸಾಧನೆಯ ಸಂಬಂಧ ಇಂದು ದೊಡ್ಡಬಳ್ಳಾಪುರದ ಬಳಿ ಜನಸ್ಪಂದನ ಕಾರ್ಯಕ್ರಮದಲ್ಲಿ ಸಚಿವ ಬಿ. ಶ್ರೀರಾಮುಲು ಕಾಂಗ್ರೆಸ್ ವಿರುದ್ಧ ವಾಗ್ದಾಳಿ ನಡೆಸಿದರು. ಕಾಂಗ್ರೆಸ್ ಮೊಸರಿನಲ್ಲಿ ಕಲ್ಲು ಹುಡುಕುವ ಕೆಲಸದಲ್ಲಿ ನಿರತವಾಗಿದೆ ಎಂದು ಹೇಳಿದ್ದಾರೆ.

ಸಚಿವ ಬಿ.ಶ್ರೀರಾಮುಲು ಅವರು ಪ್ರಾಸ್ತಾವಿಕ ಮಾತನಾಡಿ, ಮಂಗಳೂರಿನ ಪ್ರಧಾನಿಯವರು ಪಾಲ್ಗೊಂಡ ಸಮಾವೇಶದ ಮಾದರಿಯಲ್ಲೇ ಇದೊಂದು ದೊಡ್ಡ ಸಮಾವೇಶ. ಆದರೆ, ಕಾಂಗ್ರೆಸ್ ಪಕ್ಷದವರಿಂದ ಮೊಸರಿನಲ್ಲಿ ಕಲ್ಲು ಹುಡುಕುವ ಕಾರ್ಯ ನಡೆಯುತ್ತಿದೆ ಎಂದು ಆಕ್ಷೇಪಿಸಿದರು. ಕಾಂಗ್ರೆಸ್ ದೇಶ, ರಾಜ್ಯ ಮತ್ತು ಧರ್ಮ– ಜಾತಿಗಳನ್ನು ಒಡೆಯುವ ಕೆಲಸವನ್ನೇ ಮಾಡಿದೆ. ಈಗ ಭಾರತ್ ಜೋಡೋ ಕೆಲಸ ಮಾಡುತ್ತಿದೆ ಎಂದು ಅವರು ಟೀಕಿಸಿದರು.

ಕಾಂಗ್ರೆಸ್ಸಿಗರು ಪಕ್ಷವನ್ನು ಮೊದಲು ಜೋಡಿಸಬೇಕು. ಪ್ರಧಾನಿ ಯವರನ್ನು ಟೀಕಿಸುವುದು ಸರ್ವಥಾ ಸಲ್ಲದು ಎಂದು ಆಕ್ಷೇಪಿಸಿದರು. ಪಕ್ಷವು ಅನೇಕ ಸುಧಾರಣೆಗಳನ್ನು ಜಾರಿಗೊಳಿಸಿದೆ ಎಂದರು.

# ನಾಳೆಯಿಂದ ವಿಧಾನಮಂಡಲ ಅಧಿವೇಶನ



**ಬೆಂಗಳೂರು, ಸೆ.10–** ಸೋಮವಾರದಿಂದ ಹತ್ತು ದಿನಗಳ ಕಾಲ ರಾಜ್ಯ ವಿಧಾನಮಂಡಲ ಅಧಿವೇಶನ ಪ್ರಾರಂಭವಾಗಲಿದ್ದು, ಜನರ ಸಮಸ್ಯೆಗಳು ಹಾಗೂ ಶಾಸನಾತ್ಮಕ ಚಟುವಟಿಕೆಗಳು ಈ ಬಾರಿಯಾದರೂ ನಡೆಯಲಿದೆಯೇ ಎಂಬ ಚರ್ಚೆ ಈಗ ಪ್ರಾರಂಭವಾಗಿದೆ.

ಸೋಮವಾರ ಕಲಾಪ ಆರಂಭವಾಗಲಿದ್ದು, ಮೊದಲು ಸಂತಾಪ ನಿರ್ಣಯ ಮಂಡನೆಯಾ ಗುತ್ತದೆ. ಸಚಿವ ಉಮೇಶ್ ಕತ್ತಿ ನಿಧನ ಹಿನ್ನೆಲೆಯಲ್ಲಿ ಸಂತಾಪ ಬಳಿಕ ಕಲಾಪ ಒಂದು ದಿನದ ಮಟ್ಟಿಗೆ ಮುಂದೂಡಿಕೆಯಾಗಲಿದೆ. ಇದು ಚುನಾವಣಾ ವರ್ಷವಾಗಿರುವುದರಿಂದ ರಾಜಕೀಯ ಮಹತ್ವ ಪಡೆಯುವ ವಿಚಾರಗಳನ್ನೇ ಪ್ರಸ್ತಾಪಿಸಲು ಕಾಂಗ್ರೆಸ್ ನಿರ್ಧರಿಸಿದೆ. ಹೀಗಾಗಿ 40% ಕಮಿಷನ್, ಬೆಂಗಳೂರು ಮಳೆ ಅವಾಂತರ, ಸರಕಾರದ ನಿಧಾನ ಗತಿಯ ಸ್ಪಂದನೆ ಇತ್ಯಾದಿ ವಿಚಾರಗಳನ್ನು ಪ್ರಸ್ತಾಪಿಸಿ ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸಲು ನಿರ್ಧರಿಸಿದೆ. ಈ ಸಂಬಂಧ ಕಾಂಗ್ರೆಸ್ ರಿಸರ್ಚ್ ಟೀಂ ಭಾರಿ ಸಿದ್ಧತೆ ನಡೆಸಿದೆ.

ಇನ್ನೊಂದೆಡೆ ಜೆಡಿಎಸ್ ನಡೆ ಕೂಡಾ ನಿಗೂಢವಾಗಿದೆ. ಬಿಡದಿಯನ್ನು ಕಾರ್ಯ ಚಟುವಟಿಕೆ ಮಾಡಿಕೊಂಡಿರುವ ಮಾಜಿ ಸಿಎಂ ಎಚ್.ಡಿ.ಕುಮಾರಸ್ವಾಮಿ ಸರಕಾರ ಹಾಗೂ ಕಾಂಗ್ರೆಸ್ ಎರಡನ್ನೂ ಇಕ್ಕಟ್ಟಿಗೆ ಸಿಲುಕಿಸಲು ಅಧಿವೇಶನವನ್ನು ಬಳಸಿಕೊಳ್ಳುವ ಸಾಧ್ಯತೆ ಇದೆ. ಬಿಹಾರ್ ಸಿಎಂ ನಿತೀಶ್ ಕುಮಾರ್ ಭೇಟಿ ಬಳಿಕ ಕುಮಾರಸ್ವಾಮಿ ನಡೆ ಬದಲಾಗಿದೆ ಎಂದೇ ವ್ಯಾಖ್ಯಾನಿಸಲಾ ಗುತ್ತಿದೆ.

ಇದರ ಜತೆಗೆ ಚುನಾವಣಾ ವರ್ಷದಲ್ಲಿ ತಮ್ಮ ನಾಯಕತ್ವವನ್ನು ಸಾಬೀತುಪಡಿಸಿಕೊಳ್ಳುವುದು ಸಿಎಂ ಬಸವರಾಜ್ ಬೊಮ್ಮಾಯಿ ಅವರಿಗೂ ಅನಿವಾರ್ಯವಾಗಿದೆ. ಆದರೆ ಕೆಲವು ಮಹತ್ವದ ವಿಧೇಯಕಗಳು ಈ ಅಧಿವೇಶನದಲ್ಲೇ ತೆಗೆದುಕೊಳ್ಳಬೇಕಾಗಿದೆ.

# ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ ಗೆಲುವು ಖಚಿತ: ಕಟೀಲ್



**ಬೆಂಗಳೂರು, ಸೆ.10–** ಮುಂದಿನ ವರ್ಷ ನಡೆಯಲಿರುವ ರಾಜ್ಯ ವಿಧಾನಸಭಾ ಚುನಾವಣೆಯಲ್ಲಿ 150ಕ್ಕೂ ಹೆಚ್ಚು ಸ್ಥಾನಗಳನ್ನು ಬಿಜೆಪಿ ಗೆಲ್ಲುವುದು ಖಚಿತ. ಯಡಿಯೂರಪ್ಪ, ಬಸವರಾಜ ಬೊಮ್ಮಾಯಿ ಅವರ ಸರ್ಕಾರದ ಅಭಿವೃದ್ಧಿ ಕಾರ್ಯಗಳು ಇದಕ್ಕೆ ಪೂರಕ ಎನಿಸಲಿವೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ನಳಿನ್‌ಕುಮಾರ್ ಕಟೀಲ್ ಅವರು ತಿಳಿಸಿದರು.

ದೊಡ್ಡಬಳ್ಳಾಪುರದ ಬಳಿ ಜನಸ್ಪಂದನ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಯಡಿಯೂರಪ್ಪ ಹಾಗೂ ಬೊಮ್ಮಾಯಿ ಅವರ ನೇತೃತ್ವದಲ್ಲಿ ರಾಜ್ಯದಲ್ಲಿ ಪರಿವರ್ತನೆಯ ಯುಗ ಆರಂಭವಾಗಿದೆ. ವಿದ್ಯಾನಿಧಿಯನ್ನು ಬೊಮ್ಮಾಯಿ ಆರಂಭಿಸಿದ್ದಾರೆ. ಕಿಸಾನ್ ಸಮ್ಮಾನ್ಗೆ ಹೆಚ್ಚುವರಿ ಮೊತ್ತ ಸೇರಿಸಿ ಕೊಡಲಾಗುತ್ತಿದೆ. ಆದರೆ ಕಾಂಗ್ರೆಸ್ ಭ್ರಷ್ಟಾಚಾರದ ಗಂಗೋತ್ರಿ ಕಾಂಗ್ರೆಸ್ ಎಂದು ಟೀಕಿಸಿದರು.

ಸೋನಿಯಾ ಗಾಂಧಿ, ರಾಹುಲ್, ಡಿ.ಕೆ.ಶಿವಕುಮಾರ್ ಸೇರಿ ಎಲ್ಲರೂ ಜಾಮೀನಿನ ಮೇಲೆ ಹೊರಗಿದ್ದಾರೆ. ಭ್ರಷ್ಟಾಚಾರಿಗಳ ಪಕ್ಷ ಕಾಂಗ್ರೆಸ್ ಎಂದು ಆರೋಪಿಸಿದರು.

ಸಿದ್ದರಾಮಯ್ಯರ ಕಾಲದಲ್ಲಿ ಅತಿಹೆಚ್ಚು ಭ್ರಷ್ಟಾಚಾರ ಹಗರಣ ನಡೆದಿದೆ. 24 ಹಿಂದೂ ಕಾರ್ಯಕರ್ತರ ಹತ್ಯೆಯಾಗಿದ್ದು, ಗೋಹತ್ಯೆ ನಿರಂತರವಾಗಿತ್ತು. ಆದರೆ, ಗೋಹತ್ಯಾ ನಿಷೇಧ, ಮತಾಂತರ ನಿಷೇಧವನ್ನು ಬಿಜೆಪಿ ಸರಕಾರ ಜಾರಿಗೊಳಿಸಿದೆ ಎಂದು ತಿಳಿಸಿದರು.

ಸಿದ್ದರಾಮಯ್ಯ ಅವರದ್ದು ಹಿಂದೂ ವಿರೋಧಿ ನಿಲುವು. ಬಿಜೆಪಿ ರೈತರ ಪರ ಇರುವ ಪಕ್ಷ. ಅಭಿವೃದ್ಧಿಗೆ ಹೆಸರಾಗಿ ಮೋದಿ, ಯಡಿಯೂರಪ್ಪ, ಬೊಮ್ಮಾಯಿ ಇದ್ದಾರೆ. ಬಿಜೆಪಿ ಸಶಕ್ತವಾಗುತ್ತಿದೆ. ಮುಂದಿನ ಬಾರಿ ಬಿಜೆಪಿ ರಾಜ್ಯದಲ್ಲಿ ಅಧಿಕಾರಕ್ಕೆ ಬರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು. ಕೋವಿಡ್ ನಿರ್ವಹಣೆಯನ್ನು ಯಡಿಯೂರಪ್ಪ ಅವರ ನೇತೃತ್ವದ ಬಿಜೆಪಿ ಸರಕಾರ ಸಮರ್ಥವಾಗಿ ಮಾಡಿದೆ. 60 ವರ್ಷ ಆಡಳಿತ ಮಾಡಿದ್ದ ಕಾಂಗ್ರೆಸ್ ಆರೋಗ್ಯ ಕ್ಷೇತ್ರವನ್ನು ಕಡೆಗಣಿಸಿತ್ತು. ಮೋದಿ ಯವರ ಸರಕಾರವು ದೇಶದ ಎಲ್ಲರಿಗೂ ಉಚಿತವಾಗಿ ಕೋವಿಡ್ ಲಸಿಕೆ ನೀಡಿದೆ ಎಂದರು.

# ಸೆ.13ರಂದು ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ

**ಬೆಂಗಳೂರು, ಸೆ.10–** ವಿಧಾನ ಮಂಡಲ ಅಧಿವೇಶನ ಹಿನ್ನೆಲೆಯಲ್ಲಿ ಕಾಂಗ್ರೆಸ್ ಪಕ್ಷದ ತಂತ್ರಗಾರಿಕೆ, ಸರಕಾರವನ್ನು ಇಕ್ಕಟ್ಟಿಗೆ ಸಿಲುಕಿಸುವ ವಿಧಾನದ ಬಗ್ಗೆ ಚರ್ಚೆ ನಡೆಸಲು ಮಂಗಳವಾರ ಸಂಜೆ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ಕರೆಯಲಾಗಿದೆ.

ಬೆಂಗಳೂರಿನ ಖಾಸಗಿ ಹೋಟೇಲ್ ನಲ್ಲಿ ಸಂಜೆ 6.30ಕ್ಕೆ ಕರೆದಿರುವ ಸಭೆಯಲ್ಲಿ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪರಿಷತ್ ವಿಪಕ್ಷ ನಾಯಕ ಬಿ.ಕೆ.ಹರಿಪ್ರಸಾದ್ ಜತೆಗೆ ರಾಜ್ಯಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆಯವರೂ ಪಾಲ್ಗೊಳ್ಳಲಿದ್ದಾರೆ.

ಬೆಂಗಳೂರಿನ ಖಾಸಗಿ ಹೋಟೇಲ್‌ನಲ್ಲಿ ಸಂಜೆ 6.30ಕ್ಕೆ ಕರೆದಿರುವ ಸಭೆಯಲ್ಲಿ ಶಾಸಕಾಂಗ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಪರಿಷತ್ ವಿಪಕ್ಷ ನಾಯಕ ಬಿ. ಕೆ.ಹರಿಪ್ರಸಾದ್ ಜತೆಗೆ ರಾಜ್ಯಸಭೆಯಲ್ಲಿ ಕಾಂಗ್ರೆಸ್ ಪಕ್ಷದ ನಾಯಕರಾಗಿರುವ ಮಲ್ಲಿಕಾರ್ಜುನ ಖರ್ಗೆಯವರೂ ಪಾಲ್ಗೊಳ್ಳಲಿದ್ದಾರೆ.


ಕೆಂಪುಕೋಟೆಯ ಮೇಲೆ ಕೇಸರಿ ಧ್ವಜ ಹಾರಿಸಲಾಗುವುದು ಎಂದು ಕೆ.ಎಸ್.ಈಶ್ವರಪ್ಪ ನೀಡಿದ ಹೇಳಿಕೆ ಹಿನ್ನೆಲೆಯಲ್ಲಿ ಕಳೆದ ವರ್ಷ ಕಾಂಗ್ರೆಸ್ ಅಧಿವೇಶನದಲ್ಲಿ ಅಹೋರಾತ್ರಿ ಧರಣಿ ನಡೆಸಿತ್ತು.

ಆದರೆ ವಿಪಕ್ಷ ನಾಯಕ ಸಿದ್ದರಾಮಯ್ಯ ಅವರಿಂದ ಈ ಹೋರಾಟಕ್ಕೆ ನಿರೀಕ್ಷಿತ ಬೆಂಬಲ ಸಿಕ್ಕಿರಲಿಲ್ಲ. ಆದರೆ ಕಳೆದ ಕೆಲ ತಿಂಗಳಿಂದ ಶಿವಕುಮಾರ್ ಹಾಗೂ ಸಿದ್ದ ರಾಮಯ್ಯ ಒಟ್ಟಾಗಿ ತಂತ್ರಗಾರಿಕೆ ನಡೆಸುತ್ತಿದ್ದು, ಶಾಸಕಾಂಗ ಪಕ್ಷದ ಸಭೆಯಲ್ಲಿ ಈ ಬಗ್ಗೆ ಇನ್ನಷ್ಟು ಸ್ಪಷ್ಟ ಚಿತ್ರಣ ಲಭಿಸಲಿದೆ.



ದೊಡ್ಡಬಳ್ಳಾಪುರದಲ್ಲಿ ಶನಿವಾರ ನಡೆದ ಬಿಜೆಪಿ ಜನಸ್ಪಂದನ ಕಾರ್ಯಕ್ರಮದಲ್ಲಿ ಸಚಿವ ಎಂಟಿಬಿ ನಾಗರಾಜ್, ಶಾಸಕ ಎಸ್.ಆರ್. ವಿಶ್ವನಾಥ್ ಹಾಡಿಗೆ ಹೆಜ್ಜೆ ಹಾಕಿದರು.

# ಶ್ರೀ ಜಗದ್ಗುರು ರಂಭಾಪುರಿ ಪೀಠಕ್ಕೆ ಎಂ.ಬಿ.ಪಾಟೀಲ ಭೇಟಿ



**ರಂಭಾಪುರಿ ಪೀಠ (ಬಾಳೆಹೊನ್ನೂರು) ಸೆ.10–** ಕರ್ನಾಟಕ ಪ್ರದೇಶ ಕಾಂಗ್ರೆಸ್ ಪ್ರಚಾರ ಸಮಿತಿ ಅಧ್ಯಕ್ಷ–ಶಾಸಕ ಎಂ.ಬಿ.ಪಾಟೀಲರು ಶನಿವಾರ ಸಂಜೆ ಬಾಳೆಹೊನ್ನೂರು ಶ್ರೀ ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾಸಂಸ್ಥಾನ ಪೀಠಕ್ಕೆ ಭೇಟಿ ನೀಡಿದರು. ಶ್ರೀ ವೀರಭದ್ರಸ್ವಾಮಿ ಹಾಗೂ ಶ್ರೀ ಜಗದ್ಗುರು ರೇಣುಕಾಚಾರ್ಯ ಮಂದಿರಕ್ಕೆ ಭೇಟಿ ನೀಡಿ ದರ್ಶನ ಮಾಡಿದರು. ನಂತರ ಶ್ರೀ ರಂಭಾಪುರಿ ಡಾ. ವೀರಸೋಮೇಶ್ವರ ಜಗದ್ಗುರು ಗಳವರನ್ನು ಭೇಟಿ ಮಾಡಿ ಗೌರವ ಅರ್ಪಿಸಿದರು. ಶ್ರೀ ರಂಭಾಪುರಿ ಜಗದ್ಗುರುಗಳು ಎಂ.ಬಿ.ಪಾಟೀಲರಿಗೆ ಶ್ರೀ ಪೀಠದಿಂದ ಶಾಲು ಹೊದಿಸಿ ಆಶೀರ್ವದಿಸಿದರು. ಈ ಸಂದರ್ಭದಲ್ಲಿ ಶೃಂಗೇರಿ ಶಾಸಕ ಟಿ.ಡಿ.ರಾಜೇಗೌಡ, ಮಾಜಿ ವಿಧಾನ ಪರಿಶತ್ ಅಧ್ಯಕ್ಷ ಬಿ.ಎಲ್. ಶಂಕರ, ಮಾಜಿ ವಿಧಾನ ಪರಿಷತ್ ಸದಸ್ಯೆ ಗಾಯತ್ರಿ ಶಾಂತೇಗೌಡರು, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಅಂಶುಮಂತ, ತರೀಕೆರೆ ಮಾಜಿ ಶಾಸಕ ಜಿ.ಎಚ್.ಶ್ರೀನಿವಾಸ್ ಸೇರಿದಂತೆ ಕಾಂಗ್ರೆಸ್ಸಿನ ಹಲವಾರು ಗಣ್ಯರು, ಹಲವಾರು ಮಠಾಧೀಶರು ಉಪಸ್ಥಿತ ರಿದ್ದರು.

# ಲಂಚದ ಹಣದಲ್ಲಿ ಮೋಜು: ಸಿದ್ದರಾಮಯ್ಯ



**ಹುಬ್ಬಳ್ಳಿ, ಸೆ.10–** ರಾಜ್ಯದಲ್ಲಿ ಮಳೆ ಹಾಗೂ ಪ್ರವಾಹದಿಂದ ಜನರು ಸಂಕಷ್ಟ ಅನುಭವಿಸುತ್ತಿದ್ದಾರೆ. ಆದರೆ ಬಿಜೆಪಿಯವರು ಲಂಚದ ಹಣದಲ್ಲಿ ಮಜಾ ಮಾಡುತ್ತಿದ್ದಾರೆ ಎಂದು ವಿಧಾನಸಭೆ ವಿಪಕ್ಷದ ನಾಯಕ ಸಿದ್ದರಾಮಯ್ಯ ಶನಿವಾರ ಕಿಡಿ ಕಾರಿದ್ದಾರೆ.

ವಿಮಾನ ನಿಲ್ದಾಣದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, ರಾಜ್ಯದಲ್ಲಿ ಪ್ರವಾಹದಿಂದ 7 ಲಕ್ಷ ಹೆಕ್ಟೇರ್‌ನಷ್ಟು ಬೆಳೆ ಹಾನಿಯಾಗಿದೆ. ರೈತರಿಗೆ ಇಲ್ಲಿವರೆಗೂ ಒಂದು ರೂಪಾಯಿ ಪರಿಹಾರ ನೀಡಿಲ್ಲ. ಜನಸ್ಪಂದನ ಹೆಸರಲ್ಲಿ ಡ್ಯಾನ್ಸ್ ಮಾಡುತ್ತಿದ್ದಾರೆ ಎಂದು ಸರಕಾರದ ವಿರುದ್ಧ ಹರಿಹಾಯ್ದರು.

ರಾಜ್ಯದಲ್ಲಿ ಪ್ರವಾಹವುಂಟಾಗಿ ಜನ ಸಮಸ್ಯೆ ಪಡುತ್ತಿದ್ದರೂ ಯಾವ ಉಸ್ತುವಾರಿ ಸಚಿವರು ಜಿಲ್ಲೆಗಳಿಗೆ ಹೋಗುತ್ತಿಲ್ಲ. ಜನಸಾಮಾನ್ಯರ ಸಮಸ್ಯೆ ಬಗ್ಗೆ ಇವರಿಗೆ ಸ್ವಲ್ಪವಾದರೂ ಕಾಳಜಿ ಇಲ್ಲ. ಹಣ ಹೊಡೆಯುವುದೆ ಇವರ ಅಜೆಂಡಾ ಆಗಿದೆ ಎಂದು ಕಿಡಿ ಕಾರಿದರು. ದಾವಣಗೆರೆಯಲ್ಲಿ ನಡೆದ ನನ್ನ ಜನ್ಮೋತ್ಸವದ ಪ್ರತ್ಯುತ್ತರವಾಗಿ ಜನ ಸ್ಪಂದನ ಮಾಡುತ್ತಿದ್ದಾರೆ. ಆ ಸಂದರ್ಭದಲ್ಲಿ ಜನ ಸ್ವಯಂಪ್ರೇರಿತರಾಗಿ ಆಗಮಿಸಿದ್ದರು. ಆದರೆ ಇಲ್ಲಿ ಭ್ರಷ್ಟಾಚಾರದ ಹಣದಲ್ಲಿ ಜನರನ್ನು ಕರೆದುಕೊಂಡು ಬಂದು ಸಮಾರಂಭ ಮಾಡುತ್ತಿದ್ದಾರೆ ಆಕ್ರೋಶ ವ್ಯಕ್ತಪಡಿಸಿದರು.

ಸಚಿವ ಉಮೇಶ ಕತ್ತಿ ಉತ್ತರ ಕರ್ನಾಟಕದ ಪ್ರಭಾವಿ ರಾಜಕಾರಣಿ ಹಾಗೂ ಬಿಜೆಪಿಯ ಹಿರಿಯ ಮುತ್ಸದ್ಧಿಯಾಗಿದ್ದರು. ಅವರ ಬಗ್ಗೆ ಒಂದು ಕಡೆ ಶೋಕಚಾರಣೆ ಅನ್ನುತ್ತಾರೆ. ಇನ್ನೊಂದು ಕಡೆ ಡ್ಯಾನ್ಸ್ ಮಾಡುತ್ತಿದ್ದಾರೆ ಎಂದರು. ಪಿಎಸ್ಐ ನೇಮಕಾತಿ ಹಗರಣದಲ್ಲಿ ಬಿಜೆಪಿ ಶಾಸಕ ಬಸವರಾಜ ದಡೇಸೂಗೂರು ಹಣ ಪಡೆದ ಬಗ್ಗೆ ತಾವೇ ಒಪ್ಪಿಕೊಂಡಿದ್ದಾರೆ. ಆತನ ವಿರುದ್ಧ ಎಫ್ ಐಆರ್ ದಾಖಲು ಮಾಡಿ ತನಿಖೆ ನಡೆಸಬೇಕು. ಪಿಎಸ್‌ಐ ಪ್ರಕರಣದಲ್ಲಿ ಪ್ರಿಯಾಂಕ ಖರ್ಗೆ ಮಾತನಾಡಿದರೆ ನೋಟಿಸ್ ಕೊಡುತ್ತಾರೆ. ಆದರೆ ಅವರ ಶಾಸಕ ಸ್ವತಃ ಒಪ್ಪಿಕೊಂಡರೂ ಯಾವುದೇ ಕ್ರಮ ಕೈಗೊಂಡಿಲ್ಲ. ಬಿಜೆಪಿಯವರು ಪ್ರತಿಯೊಂದು ವಿಷಯದಲ್ಲೂ ಸೇಡಿನ ರಾಜಕೀಯ ಮಾಡುತ್ತಿದ್ದಾರೆ ಎಂದರು. ಎಸಿಬಿ ರದ್ದು ಪಡಿಸಿ ಲೋಕಾಯುಕ್ತ ಮರು ರಚನೆ ಮಾಡಿರುವುದಕ್ಕೆ ನಾವು ಸ್ವಾಗತ ಮಾಡಿದ್ದೇವೆ. ನ್ಯಾಯಾಲಯದಿಂದಲೇ ಆದೇಶವಿದೆ ಹೀಗಾಗಿ ಸ್ವಾಗತ ಮಾಡುತ್ತೇವೆ ಎಂದರು.

ರಾಜ್ಯದ ಬಸವರಾಜ ಬೊಮ್ಮಾಯಿ ಸರ್ಕಾರಕ್ಕೆ ವರ್ಷ ತುಂಬಿದ್ದಕ್ಕಾಗಿ ಜನಸ್ಪಂದನ ಎಂಬ ಕಾರ್ಯಕ್ರಮ ಹಮ್ಮಿಕೊಂಡಿದ್ದು, ಇದಕ್ಕೆ "ಜನಸ್ಪಂದನ" ಅಲ್ಲ 'ಜನ ಮರ್ದನ" ಎಂದು ಹೆಸರಿಡಬೇಕಾಗಿತ್ತು. ಕಳೆದ ಮೂರು ವರ್ಷಗಳ ಬಿಜೆಪಿ ಸರ್ಕಾರದ ಭ್ರಷ್ಟಾಚಾರ, ದುರಾಡಳಿತ ಮತ್ತು ಸುಳ್ಳು ಹೇಳಿಕೆಗಳಿಂದಾಗಿ ಜನ ನಲುಗಿಹೋಗಿದ್ದಾರೆ. ಸ್ಪಂದನ ಮಾಡಲು ಜನರಿಗೆ ಅಭಿವ್ಯಕ್ತಿ ಸ್ವಾತಂತ್ರ್ಯ ಎಲ್ಲಿದೆ ವಿರೋಧ ಪಕ್ಷಗಳು ಇವರನ್ನು ಪ್ರಶ್ನೆ ಮಾಡಿದರೆ ಸಿಬಿಐ, ಇಡಿ, ಐಟಿ ದಾಳಿ ನಡೆಸಿ ಬೆದರಿಸುತ್ತಾರೆ. ನಾಗರಿಕರು ಪ್ರಶ್ನೆ ಮಾಡಿದರೆ ಸುಳ್ಳು ಕೇಸ್ ಗಳನ್ನು ಹಾಕಿ ಜೈಲಿಗೆ ಹಾಕುತ್ತಾರೆ. ಜನ ಸ್ಪಂದಿಸುವುದಾದರೂ ಹೇಗೆ ಎಂದು ಸಿದ್ದರಾಮಯ್ಯ ಅವರು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದ್ದಾರೆ.

# ಪದವಿಪೂರ್ವ ಕಾಲೇಜುಗಳ ಕ್ರೀಡಾಕೂಟ



**ಗಂಗಾವತಿ, ಸೆ.10–** ಪದವಿಪೂರ್ವ ಶಿಕ್ಷಣ ಇಲಾಖೆ ಕೊಪ್ಪಳ ಎಂಎಸ್ ಪದವಿ ಪೂರ್ವ ಕಾಲೇಜ್ ರುದ್ರೇಶ್ ನಗರ ಮರಳಿ ಇವರ ಸಂಯುಕ್ತ ಆಶ್ರಯದಲ್ಲಿ ಗಂಗಾವತಿ ತಾಲೂಕು ಮಟ್ಟದ ಪದವಿ ಪೂರ್ವ ಕಾಲೇಜುಗಳ 2022–23 ನೇ ಸಾಲಿನ ಕ್ರೀಡಾ ಕೂಟವನ್ನು ಸಂಸದರಾದ ಕರಡಿ ಸಂಗಣ್ಣ, ಶಾಸಕ ಪರಣ್ಣ ಮುನವಳ್ಳಿ ಅವರು, ಹಾಗೂ ಬಸವರಾಜ ದಡೆಸೂಗುರು ಅವರು ಜ್ಯೂತಿ ಬೆಳಗಿಸುವ ಮೂಲಕ ಉದ್ಘಾಟಿಸಿದರು,

ಈ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಶಾಸಕ ಪರಣ್ಣ ಮುನವಳ್ಳಿಯವರು ಕ್ರಿಡಾಪಟುಗಳನ್ನ ಉದ್ದೇಶಿಸಿ ಎಲ್ಲಾ ಕಾಲೇಜಿನ ಕ್ರಿಡಾ ವಿಧ್ಯಾರ್ಥಿಗಳಿಗೆ ಶುಭಕೋರಿ ಮಾತನಾಡಿದರು.

ಈ ಸಂದರ್ಭದಲ್ಲಿ ಕೊಪ್ಪಳ ಲೋಕಸಭಾ ಕ್ಷೇತ್ರ ಸಂಸದ ಕರಡಿ ಸಂಗಣ್ಣ ಅವರು, ಕನಗಿರಿ ಶಾಸಕರಾದ ಬಸವರಾಜ ದಡೆಸೂಗುರು, ಕಾಡಾ ಮಾಜಿ ಅಧ್ಯಕ್ಷ ತಿಪ್ಪೆರುದ್ರ ಸ್ವಾಮಿ, ಕಾಲೇಜಿನ ಅಧ್ಯಕ್ಷ ಎಚ್.ಎಂ. ಸಿದ್ದರಾಮಯ್ಯ ಸ್ವಾಮಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹಾಲಿಂಗಪ್ಪ ಬನ್ನಿಕೊಪ್ಪ, ಗ್ರಾಮೀಣ ಮಂಡಲದ ಅಧ್ಯಕ್ಷ ಚೆನ್ನಪ್ಪ ಮಳಿಗಿ, ನಗರ ಘಟಕ ಅಧ್ಯಕ್ಷ ಕಾಶಿನಾಥ ಚಿತ್ರಗಾರ್, ನಗರಸಭೆ ಸದಸ್ಯ ಉಮೇಶ ಸಿಂಗನಾಳ, ಪರಶುರಾಮ ಮಡ್ಡೇರ್, ನಿಲಕಂಠ ಕಟ್ಟಿಮನಿ ಪ್ರಮುಖರಾದ ರಾಚಪ್ಪ ಸಿದ್ದಾಪುರ ಅವರು ಉಪಸ್ಥಿತರಿದ್ದರು.

# ವಿಕಲಚೇತನರಿಗೆ ತ್ರಿಚಕ್ರ ವಾಹನ ವಿತರಣೆ



**ಗಂಗಾವತಿ, ಸೆ.10–** ಗಂಗಾವತಿ ನಗರದ ಶಾಸಕರ ಕಾರ್ಯಾಲಯದ ಆವರಣದಲ್ಲಿ 2019–20ನೇ ಸಾಲಿನ ಶಾಸಕರ ಪ್ರದೇಶಾಭಿವೃದ್ಧಿ ನಿಧಿ ಯೋಜನೆಯಡಿಯಲ್ಲಿ 5 ಜನ ವಿಕಲಚೇತನ ಫಲಾನುಭವಿಗಳಿಗೆ ತ್ರಿಚಕ್ರ ವಾಹನಗಳನ್ನು ಶಾಸಕ ಪರಣ್ಣ ಮುನವಳ್ಳಿಯವರು ವಿತರಿಸಿದರು.

ಈ ಸಂದರ್ಭದಲ್ಲಿ ಜಿಲ್ಲಾ ಬಿಜೆಪಿ ವಾಣಿಜ್ಯ ಪ್ರಕೊಷ್ಠದ ಸದಸ್ಯರಾದ ಸಾಗರ್ ಮುನವಳ್ಳಿ, ಕಿನ್ನಾಳ ಗ್ರಾಮ ಪಂಚಾಯತಿ ಸದಸ್ಯರು ಹಾಗೂ ಬಿಜೆಪಿ ಗ್ರಾ ಮಂಡಲ ಪ್ರಧಾನ ಕಾರ್ಯದರ್ಶಿ ಪ್ರಶಾಂತ್ ಕುಲಕರ್ಣಿ, ವಿಕಲ ಚೇತನ ಸಂಘದ ರಾಜ್ಯ ಅಧ್ಯಕ್ಷ ಮಂಜುನಾಥ ಹೊಸಕೇರಾ, ನಗರಸಭೆ ಸದಸ್ಯರಾದ ಉಮೇಶ ಸಿಂಗನಾಳ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷ ಮಹಾಲಿಂಗಪ್ಪ ಬನ್ನಿಕೊಪ್ಪ ಇದ್ದರು.

# ತರಬೇತಿ–ಕೌಶಲ್ಯ ಮಿಷನ್ ಯೋಜನೆ ಫಲಾನುಭವಿಗಳಿಗೆ ಟೂಲ್‌ಕಿಟ್ ವಿತರಣೆ



**ಕೊಪ್ಪಳ, ಸೆ.10–** ದಿನಾಂಕ 10.09.2022ರ ಶನಿವಾರ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಕೊಪ್ಪಳ ಹಾಗೂ ನಗರಸಭೆ ಗಂಗಾವತಿ ದೀನದಯಾಳ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನದ ಅಡಿಯಲ್ಲಿ ಸ್ವ ಸಹಾಯ ಸಂಘದ ಸದಸ್ಯರಿಗೆ ತರಬೇತಿ ಮತ್ತು ಕೌಶಲ್ಯ ಮಿಷನ್ ಯೋಜನೆಯಡಿಯಲ್ಲಿ ತರಬೇತಿ ಪಡೆದ ಫಲಾನುಭವಿಗಳಿಗೆ ಟೂಲ್ ಕಿಟ್ ವಿತರಣೆ ಕಾರ್ಯಕ್ರಮವನ್ನು ಮಂಥನ ಸಭಾಂಗಣದಲ್ಲಿ ಆಯೋಜಿಸಲಾಗಿತ್ತು.

ಈ ಕಾರ್ಯಕ್ರಮವನ್ನು ಶಾಸಕರಾದ ಪರಣ್ಣ ಮುನವಳ್ಳಿಯವರು ಉದ್ಘಾಟಿಸಿ ಸರ್ಕಾರದ ವತಿಯಿಂದ ಅನೇಕ ಯೋಜನೆಗಳು ಕಾರ್ಯರೂಪದಲ್ಲಿದ್ದು ಅದನ್ನು ಸದುಪಯೋಗಪಡಿಸಿಕೊಳ್ಳಬೇಕು ಸ್ವಸಹಾಯ ಸಂಘಗಳನ್ನು ರಚನೆ ಮಾಡಿ ಅವುಗಳಿಂದ ಸ್ವಾವಲಂಬಿ ಜೀವನ ನಡೆಸಲು ಅನೂಕೂಲವಾಗುವುದು ಹಾಗೂ ಸ್ವಾವಲಂಬಿ ಜೀವನ ನಡೆಸಿ ಇತರರಿಗೆ ಆದರ್ಶವಾಗಬೇಕೆಂದು ಮಾತನಾಡಿದರು.

ಈ ಸಂಧರ್ಭದಲ್ಲಿ ನಗರಸಭೆ ಅಧ್ಯಕ್ಷರಾದ ಶ್ರೀಮತಿ ಮಾಲಾಶ್ರೀ ಸಂದೀಪ್, ಕೌಶಲ್ಯಾಭಿವೃದ್ಧಿ ಅಧಿಕಾರಿಗಳಾದ ಪ್ರಾಣೇಶ್, ಪೌರಾಯುಕ್ತರಾದ ವಿರುಪಾಕ್ಷಪ್ಪ ಮೂರ್ತಿ, ನಗರ ಯೋಜನಾ ಪ್ರಾಧಿಕಾರದ ಅಧ್ಯಕ್ಷರಾದ ಮಹಾ ಲಿಂಗಪ್ಪ ಬನ್ನಿಕೊಪ್ಪ ಹಾಗೂ ಸಂಘ ಸಂಸ್ಥೆಗಳ ಮಹಿಳೆಯರು, ಫಲಾನುಭವಿಗಳು ಉಪಸ್ಥಿತರಿದ್ದರು.

# ಅಂಧೇರಿ: ಎಂ.ವಿ.ಎಂ ಶೈಕ್ಷಣಿಕ ಸಂಕುಲದಲ್ಲಿ ಶಿಕ್ಷಕರ ದಿನಾಚರಣೆ



ಮುಂಬಯಿ (ಆರ್‌ಬಿಐ), ಸೆ.10– ಮೊಗವೀರ ವ್ಯವಸ್ಥಾಪಕ ಮಂಡಳಿಯ ಅಂಧೇರಿ ಪಶ್ಚಿಮದಲ್ಲಿನ ಎಂ.ವಿ.ಎಂ ಶೈಕ್ಷಣಿಕ ವಿದ್ಯಾಸಂಕುಲದ ಒಂದನೇ ಮಹಡಿಯಲ್ಲಿರುವ ಶ್ರೀಮತಿ ಶಾಲಿನಿ ಜಿ.ಶಂಕರ್ ಕನ್ವೆನ್ಷನ್ ಸಭಾಗೃಹದಲ್ಲಿ ಪ್ರತಿವರ್ಷದಂತೆ ಕಳೆದ ಸೋಮವಾರ (ಸೆ.5) ಶಿಕ್ಷಕ ದಿನಾಚರಣೆಯನ್ನು ಸಂಭ್ರಮದಿಂದ ಆಚರಿಸಲಾಯಿತು. ಮೊಗವೀರ ವ್ಯವಸ್ಥಾಪಕ ಮಂಡಳಿಯ ಪ್ರಧಾನ ಕಾರ್ಯದರ್ಶಿ ದಿಲೀಪ್ ಕುಮಾರ್ ಮುಲ್ಕಿ, ಟ್ರಸ್ಟಿಗಳಾದ ಅಜಿತ್ ಜಿ.ಸುವರ್ಣ, ದೇವರಾಜ್ ಬಂಗೇರ ಹಾಗೂ ಹರೀಶ್ ಪುತ್ರನ್ ಮತ್ತು ಶಾಲಾ ಮುಖ್ಯೋಪಾಧ್ಯಾಯ ಮತ್ತು ಮುಖ್ಯೋಪಾಧ್ಯಾಯಿನಿಯರು ದೀಪ ಬೆಳಗುವುದರ ಮೂಲಕ ಕಾರ್ಯಕ್ರಮಕ್ಕೆ ಚಾಲನೆಯನ್ನಿತ್ತರು.

ದಿಲೀಪ್ ಕುಮಾರ್ ಮುಲ್ಕಿ, ಅಜಿತ್ ಜಿ.ಸುವರ್ಣ ಸಭೆಯನ್ನುದ್ದೇಶಿಸಿ ಮಾತನಾಡಿ ವಿದ್ಯಾರ್ಥಿಗಳ ಕಾರ್ಯವೈಖರಿ ಶ್ಲಾಘಿಸುತ್ತಾ, ಶಿಕ್ಷಕರ ಮಹತ್ವವನ್ನು, ಶಿಕ್ಷಕರು ಶಿಕ್ಷಣ ನೀಡುವ ಮೂಲಕ ರಾಷ್ಟ್ರ ನಿರ್ಮಾಣದಲ್ಲಿ ಶಿಕ್ಷಕರು ವಹಿಸುವ ಪಾತ್ರವನ್ನು ಪ್ರಶಂಸಿದರು.

ದೇವರಾಜ್ ಬಂಗೇರ ಹಾಗೂ ಹರೀಶ್ ಪುತ್ರನ್, ಮಂಡಳಿಯ ಜತೆ ಕಾರ್ಯದರ್ಶಿಗಳಾದ ಪ್ರೀತಿ ಶ್ರೀಯಾನ್ ಮತ್ತು ದಯಾವತಿ ಸುವರ್ಣ ಆಡಳಿತ ಸಮಿತಿಯ ಸದಸ್ಯರುಗಳಾದ ರವಿ ಸಾಲ್ಯಾನ್, ಪ್ರಶಾಂತ ತಿಂಗಳಾಯ, ಗೋವಿಂದ ಪುತ್ರನ್, ಚಂದ್ರಶೇಖರ ಕರ್ಕೇರ, ಸುರೇಶ ಕುಂದರ್, ಮಹಿಳಾ ವಿಭಾಗದ ಸದಸ್ಯರುಗಳಾದ ಭಾರತಿ ಕರ್ಕೇರ, ಮೋಹಿನಿ ಸುವರ್ಣ ಮತ್ತಿತರರು ಪ್ರಧಾನವಾಗಿ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದು ಎಂವಿಎಂ ವಿದ್ಯಾಲಯದ ವಿವಿಧ ವಿಭಾಗದ ವಿದ್ಯಾರ್ಥಿಗಳಿಂದ ಸಾಂಸ್ಕೃತಿಕ ಹಾಗೂ ಸಂಗೀತ ಕಾರ್ಯಕ್ರಮಗಳನ್ನು ಪ್ರಸ್ತುತ ಪಡಿಸಿದರು.

ಮಂಡಳಿಯ ಸದಸ್ಯರುಗಳು, ಶಿಕ್ಷಕರು, ಸಿಬ್ಬಂದಿಗಳು ಶಾಲೆಯ ಎಲ್ಲಾ ವಿಭಾಗಗಳಾದ ಪೂರ್ವ ಪ್ರಾಥಮಿಕ, ಪ್ರಾಥಮಿಕ, ಪ್ರೌಢಶಾಲೆ, ಅಂತರರಾಷ್ಟ್ರೀಯ ಶಾಲೆ ಹಾಗೂ ಕಾಲೇಜಿನ ವಿದ್ಯಾರ್ಥಿಗಳು ಹಲವು ರೀತಿಯ ಸಂಗೀತ ಕಾರ್ಯಕ್ರಮ, ನೃತ್ಯ ಹಾಗೂ ತಮ್ಮ ಜೀವನದಲ್ಲಿ ಶಿಕ್ಷಕರು ವಹಿಸುವ ಸವಾಲುಗಳು, ಕಷ್ಟಗಳು ಮತ್ತು ವಿಶೇಷ ಪಾತ್ರಗಳನ್ನು ಮನ ಮುಟ್ಟುವಂತೆ ಕಿರು ನಾಟಕದ ಮೂಲಕ ತೋರಿಸಿ ಕೊಟ್ಟರು. ಶಿಕ್ಷಕರಿಗೆ ವಿವಿಧ ರೀತಿಯ ಸ್ಪರ್ಧೆಗಳನ್ನು ಆಯೋಜಿಸಲಾಗಿದ್ದು ಕಾಲೇಜ್‌ನ ಹಳೆ ವಿದ್ಯಾರ್ಥಿಗಳು ಕಾರ್ಯಕ್ರಮ ಆಯೋಜಿಸಿದ್ದರು.

ವಿದ್ಯಾ ಸಂಕುಲದ ಆಡಳಿತಾತ್ಮಕ ಮುಖಸ್ಥ ಜೀತು ರೋಹಿರ ಸ್ವಾಗತಿಸಿ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮವು ಶಿಕ್ಷಕ ವೃಂದ ಮತ್ತು ವಿದ್ಯಾರ್ಥಿಗಳ ಸಾಮೂಹಿಕ ನೃತ್ಯದ ಮೂಲಕ ಮುಕ್ತಾಯಗೊಂಡಿತು.

# ಮುಂದಿನ ಚುನಾವಣೆಯಲ್ಲಿ ಬಿಜೆಪಿಗೆ ಮತದಾರರಿಂದ ತಕ್ಕ ಪಾಠ



ಬಳ್ಳಾರಿ, ಸೆ.10– ಸರ್ಕಾರದ ಹಣದಲ್ಲೇ ಲಕ್ಷಾಂತರ ರೂಪಾಯಿ ವಸ್ತ್ರಗಳನ್ನು ಧರಿಸುವ ನಮ್ಮ ಪ್ರಧಾನಿ ಮೋದಿಯವರ ಬಗ್ಗೆ ತುಟಿ ಬಿಚ್ಚದ ಬಿಜೆಪಿಗರು ರಾಹುಲ್ ಗಾಂಧಿಯವರ ಭಾರತ ಜೋಡೋ ಯಾತ್ರೆ ವೇಳೆ ಅವರು ಧರಿಸಿದ ಟಿ ಶರ್ಟ್, ಕಾರವ್ಯಾನ್ ಬಗ್ಗೆ ಇಲ್ಲಸಲ್ಲದ ಆರೋಪ ಮಾಡುವುದು ಎಷ್ಟು ಸರಿ?

ರಾಹುಲ್ ಗಾಂಧಿ ಹುಟ್ಟಿದ್ದು ಮೂವರು ಪ್ರಧಾನಿಗಳು ಆದ ವಂಶದಲ್ಲಿ. ಆತ ಹುಟ್ಟುತ್ತಲೇ ಆಗರ್ಭ ಶ್ರೀಮಂತ. ಆತ ಈ ರೀತಿ ಧಿರಿಸು ಧರಿಸಿದರೂ ತಪ್ಪಲ್ಲ. ಯಾತ್ರೆ ವೇಳೆ ರಾಹುಲ್ ಗಾಂಧಿ ಧರಿಸಿದ ಟಿ ಶರ್ಟ್ ಬೆಲೆ 41 ಸಾವಿರ ರುಪಾಯಿ. ಎಂದು ಸದ್ಯ ಬಿಜೆಪಿಗರು ಆರೋಪ ಮಾಡುತ್ತಿರುವುದು ಎಷ್ಟು ನಿಜ, ಸುಳ್ಳು ಗೊತ್ತಿಲ್ಲ. ಇವರು ಆರೋಪ ಮಾಡುವ ರೀತಿ ನೋಡಿದರೆ ಇವರೇ ರಾಹುಲ್‌ಗಾಂಧಿ ಟಿ ಶರ್ಟ್ ಗಿಫ್ಟ್ ಕೊಟ್ಟ ಹಾಗೆ ಇದೆ. ಇನ್ನು ರಾಹುಲ್ ಗಾಂಧಿ ಯಾತ್ರೆ ವೇಳೆ ವಿರಮಿಸಲು ಬಳಸುವ ಕಾರಾವ್ಯಾನ್ ಬಗ್ಗೆ ಸಹ ಬಿಜೆಪಿಗರು ಟೀಕೆ ಮಾಡುವುದು ಕಂಡುಬಂದಿದೆ.

ಇದು ಹೊಸದೇನಲ್ಲ.

ಇದನ್ನು ಬಿಜೆಪಿ ನಾಯಕರು, ಜೆಡಿಎಸ್ ನಾಯಕರು ಹೀಗೆ ಎಲ್ಲರೂ ಬಳಸುವುದು ವಾಡಿಕೆ. ಆದರೆ, ನಮ್ಮ ಬಿಜೆಪಿ ಐಟಿ ತಂಡ ಇದೇನೋ ಭಾರೀ ವಿಲಾಸಿ ವಾಹನ ಬಳಕೆ ಮಾಡಿ, ಯಾತ್ರೆ ಮಾಡುತ್ತಿದ್ದಾರೆ ಎಂದು ಬಿಂಬಿಸುವ ಯತ್ನ ಮಾಡುತ್ತಿದ್ದಾರೆ. ಇದು ಇವರ ಕೀಳುಮಟ್ಟದ ರಾಜಕಾರಣದ ಝಲಕ್ ಆಗಿದೆ. ರಾಹುಲ್ ಗಾಂಧಿ ಅವರು ಕೈಗೊಂಡಿರುವ ಭಾರತ್ ಜೋಡೋ ಯಾತ್ರೆ ಭಾರೀ ಯಶಸ್ಸು ಕಾಣುವ ಪರಿ ಕಂಡು ಬಿಜೆಪಿಗರು ಭಯಗ್ರಸ್ಥರಾಗಿದ್ದಾರೆ. ಇದೇ ಕಾರಣಕ್ಕೆ ರಾಹುಲ್ ಗಾಂಧಿ ಅವರ ಸಣ್ಣಸಣ್ಣ ವಿಷಯ ಮುಂದಿಟ್ಟುಕೊಂಡು ಯಾತ್ರೆಯ ಯಶಸ್ಸು ಹೊರ ಬರದಂತೆ ನೋಡಿ ಕೊಳ್ಳಲು ಯತ್ನಿಸುತ್ತಿದ್ದಾರೆ. ರಾಹುಲ್‌ಗಾಂಧಿ ಅವರು ಹೋದ ಕಡೆ ಎಲ್ಲಾ ಜನ ಜಂಗುಳಿ ಸೇರುತ್ತಿದೆ. ದೇಶದಲ್ಲಿನ ಬಿಜೆಪಿಯ ಭ್ರಷ್ಟ ಆಡಳಿತವನ್ನು ಕಂಡು ಬೇಸತ್ತ ಜನ ಇದೀಗ ಮನಮೋಹನ್ ಸಿಂಗ್ ನೇತೃತ್ವದ ಕಾಂಗ್ರೆಸ್ ಸರ್ಕಾರ ಕೊಟ್ಟ ಆಡಳಿತದ ದಿನಗಳನ್ನು ನೆನೆಯುತ್ತಿದ್ದಾರೆ.

ಇದೇ ಇಂದಿನ ಬಿಜೆಪಿ ನಾಯಕರಿಗೆ ನುಂಗಲಾರದ ತುತ್ತಾಗಿದೆ. ಇದೇ ಕಾರಣಕ್ಕೆ ಬಿಜೆಪಿಗರು ಯಾತ್ರೆ ಬಗ್ಗೆ ಏನೂ ಮಾತನಾಡದೆ ರಾಹುಲ್ ಗಾಂಧಿ ಅವರು ಯಾವ ಪ್ಯಾಂಟ್ ಹಾಕ್ತಾರೆ, ಯಾವ ಅಂಗಿ ಹಾಕ್ತಾರೆ, ಎಲ್ಲಿ ಊಟ ಮಾಡ್ತಾರೆ, ಮಲಗುತ್ತಾರೆ ಅನ್ನೋ ವಿಷಯ ಮುಂದಿಟ್ಟು ತಮ್ಮ ಕೀಳು ಮಟ್ಟದ ರಾಜಕಾರಣವನ್ನು ಮುಂದುವರಿಸಿದ್ದಾರೆ. ಆದರೆ, ದೇಶದ ಜನ ಈ ಬಿಜೆಪಿಗರ ಬಣ್ಣ ಅರಿತಿದ್ದಾರೆ. ಮುಂದಿನ ಚುನಾವಣೆಯಲ್ಲಿ ಸರಿಯಾದ ಪೆಟ್ಟನ್ನು ಬಿಜೆಪಿಗೆ ನೀಡಲಿದ್ದಾರೆ ಎಂದು ವೆಂಕಟೇಶ್ ಹೆಗಡೆ, ವಕೀಲರು, ಕೆಪಿಸಿಸಿ ಮಾಧ್ಯಮ ವಕ್ತಾರರು ತಿಳಿಸಿದರು.



ಮೈಸೂರು ನಗರದಲ್ಲಿ ಶನಿವಾರ ದಸರಾ ಆನೆಗಳ ತಾಲೀಮು ಜನರನ್ನು ಆಕರ್ಷಿಸಿತು.

# ಜನಸ್ಪಂದನದ ವೇಳೆ ಕರಾಳೋತ್ಸವ ಹೋರಾಟಗಾರರ ಬಂಧನ

ದೊಡ್ಡಬಳ್ಳಾಪುರ, ಸೆ.10– ಜನಸ್ಪಂದನದ ವೇಳೆ ಕರಾಳೋತ್ಸವ ಆಚರಿಸಲು ಹೊರಟಿದ್ದ ಜಿಲ್ಲಾ ಕೇಂದ್ರ ಹೋರಾಟಗಾರರನ್ನು ಪೊಲೀಸರು ಬಂಧಿಸಿದ ಘಟನೆ ಇಂದು ಬೆಳಿಗ್ಗೆ ನಡೆದಿದೆ.ದೊಡ್ಡಬಳ್ಳಾಪುರವನ್ನು ಬೆಂಗಳೂರು ಗ್ರಾಮಾಂತರ ಜಿಲ್ಲಾ ಕೇಂದ್ರವನ್ನಾಗಿ ಘೋಷಣೆ ಮಾಡುವಂತೆ ಒತ್ತಾಯಿಸಿ, ಇಂದು ನಡೆಯಲಿರುವ ಸರ್ಕಾರದ ಜನಸ್ಪಂದನ ಕಾರ್ಯಕ್ರಮವನ್ನು ಕರಾಳೋತ್ಸವವನ್ನಾಗಿ ಆಚರಿಸಲು ಜಿಲ್ಲಾ ಕೇಂದ್ರ ಹೋರಾಟ ಸಮಿತಿ ನಿರ್ಧರಿಸಲಾಗಿತ್ತು.

ಇದರ ಅಂಗವಾಗಿ ಇಂದು ಬೆಳಿಗ್ಗೆ 9.30 ಗಂಟೆಗೆ ನಗರದ ಕನ್ನಡ ಜಾಗೃತ ಪರಿಷತ್ತಿನ ಮುಂಭಾಗದಿಂದ ಬೃಹತ್ ಜಾಥಾ ಹೊರಟು ನಗರದ ಅರ್ಕಾವತಿ ವೃತ್ತದಲ್ಲಿ ಕರಾಳೋತ್ಸವ ಮಾಡುವ ಮೂಲಕ ಪ್ರತಿಭಟನೆ ಹಮ್ಮಿಕೊಳ್ಳಲು ಸಮಿತಿಯ ಮುಖಂಡರು ನಿರ್ಧಾರಿಸಿದ್ದರು. ಆದರೆ ಸ್ಥಳಕ್ಕೆ ಬಂದ ಪೊಲೀಸರು ಪ್ರತಿಭಟನೆ ಕೈಬಿಡುವಂತೆ ಮನವೊಲಿಸಲು ಮುಂದಾದರು ಒಪ್ಪದ ಕಾರಣ, ಪೊಲೀಸ್ ಇಲಾಖೆಯ ವರ್ತನೆ ಖಂಡಿಸಿ ಪ್ರತಿಭಟನಾ ನಿರತರು ಧಿಕ್ಕಾರ ಕೂಗಿದರು.

ನೂರಾರು ಪ್ರತಿಭಟನಾ ನಿರತರನ್ನು ವಶಕ್ಕೆ ಪಡೆದು, ಬಸ್ಸಿನಲ್ಲಿ ಕರೆದೊಯ್ದುರು.ಈ ವೇಳೆ ಸರ್ಕಾ ಜಿಲ್ಲಾ ಕೇಂದ್ರ ಹೋರಾಟ ಸಮಿತಿಯ ವತಿಯಿಂದ ದೊಡ್ಡಬಳ್ಳಾಪುರ ವನ್ನು ಜಿಲ್ಲಾ ಕೇಂದ್ರವನ್ನಾಗಿ ಮಾಡಬೇಕೆಂದು ಒತ್ತಾಯಿಸಿ, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ರವರಿಗೆ ಮನವಿ ಸಲ್ಲಿಸಿದ ಸಂದರ್ಭದಲ್ಲಿ ಸಂಬಂಧಪಟ್ಟ ಕಡತಗಳನ್ನು ಪರಿಶೀಲಿಸಿ ಅನ್ಯಾಯ ಆಗದಂತೆ ಕ್ರಮ ಕೈಗೊಳ್ಳುತ್ತೇನೆ ಎಂದು ಭರವಸೆ ನೀಡಿದ್ದರು.

ಆದರೆ ಜಿಲ್ಲಾ ಉಸ್ತುವಾರಿ ಸಚಿವರಾದ ಸುಧಾಕರ್ ಅವರು ಪದೇಪದೇ ಜಿಲ್ಲಾ ಕೇಂದ್ರದ ವಿಚಾರವಾಗಿ ಬೆಂಕಿ ಹಚ್ಚುವ ಕೆಲಸ ಮಾಡುತ್ತಲೇ ಇರುತ್ತಾರೆ. ಈ ದಿಸೆಯಲ್ಲಿ ಜಿಲ್ಲಾ ಕೇಂದ್ರ ಹೋರಾಟ ಸಮಿತಿ ನೇತೃತ್ವದಲ್ಲಿ ಜನಸ್ಪಂದನದ ವೇಳೆ ಕರಾಳೋತ್ಸವ ಆಚರಿಸಲು ನಿರ್ಧರಿಸಲಾಗಿದೆ. ಆರೋಗ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸಚಿವ ಡಾ.ಕೆ.ಸುಧಾಕರ್ ಅವರ ಹೇಳಿಕೆ ಖಂಡಿಸಿ ತಾಲೂಕಿನಲ್ಲಿ ಹೋರಾಟ ನಡೆಸಲಾಗುತ್ತಿದೆ. ಜಿಲ್ಲಾ ಕೇಂದ್ರವಾಗಲು ಎಲ್ಲಾ ಅರ್ಹತೆಗಳಿದ್ದರು ದೊಡ್ಡಬಳ್ಳಾಪುರ ತಾಲೂಕಿಗೆ ಅನ್ಯಾಯ ಮಾಡಲಾಗುತ್ತಿದೆ. ಈ ದಿಸೆಯಲ್ಲಿ ಜಿಲ್ಲಾ ಕೇಂದ್ರದ ಅರ್ಹತೆಗಳ ಬಗ್ಗೆ ದೊಡ್ಡಬಳ್ಳಾಪುರ ಹಾಗೂ ದೇವನಹಳ್ಳಿಯ ಅರ್ಹತೆಗಳನ್ನು ಪಟ್ಟಿ ಮಾಡಿ, ಹಾಗೂ ದೊಡ್ಡಬಳ್ಳಾಪುರದ ವಿಶೇಷತೆಗಳ ಬಗ್ಗೆ ಕರಪತ್ರದಲ್ಲಿ ಮಾಹಿತಿ ನೀಡಿ ಸಾರ್ವಜನಿಕರಿಗೆ ಹಂಚಿದ್ದು, ಸಾರ್ವಜನಿಕರು ಸಹ ಹೋರಾಟವನ್ನು ಬೆಂಬಲಿಸಲು ಹೋರಾಟ ಸಮಿತಿ ಮನವಿ ಮಾಡಿದೆ ಎಂದು ಪ್ರತಿಭಟನಾಕಾರರು ಹೇಳಿದರು. ರ ಹಾಗೂ ಪೊಲೀಸ್ ಇಲಾಖೆಯ ವರ್ತನೆ ಖಂಡಿಸಿ ಪ್ರತಿಭಟನಾ ನಿರತರು ಧಿಕ್ಕಾರ ಕೂಗಿದರು.

# ದ.ರಾ.ಬೇಂದ್ರೆ ಕನ್ನಡ ಸಾರಸ್ವತ ಲೋಕದ ಮಿನುಗುತಾರೆ




ಕಲಬುರಗಿ ತಾಲೂಕು ಕಸಾಪ ಸರ್ಕಾರಿ ಪ್ರೌಢ ಶಾಲೆಯಲ್ಲಿ ಆಯೋಜಿಸಿದ 'ಜ್ಞಾನಪೀಠ ಗಾರುಡಿಗರು' ಉಪನ್ಯಾಸ ಮಾಲಿಕೆಯ ಅಡಿಯಲ್ಲಿ ವರಕವಿ ದ.ರಾ ಬೇಂದ್ರೆಯವರ ಬದುಕು–ಬರಹ ಕುರಿತು ಉಪನ್ಯಾಸ ಕಾರ್ಯಕ್ರಮ ಜರುಗಿತು.

ಕಲಬುರಗಿ, ಸೆ.10– ಕನ್ನಡ ಕಾವ್ಯಲೋಕಕ್ಕೆ ವಿಶಿಷ್ಟ ಶೈಲಿ ಮತ್ತು ಲಯಗಳ ಮೂಲಕ ನಾದದ ಗುಂಗು ಹಿಡಿಸಿದ ಶಬ್ದ ಗಾರುಡಿಗ, ವರಕವಿ, ದ.ರಾ.ಬೇಂದ್ರೆಯವರು ಕನ್ನಡ ಸಾರಸ್ವತ ಲೋಕದ ಮಿನುಗುತಾರೆ ಎಂದು ಜಿಲ್ಲಾ ಕಸಾಪ ಗೌರವ ಕಾರ್ಯದರ್ಶಿ ಪ್ರೊ. ಯಶವಂತ ಅಷ್ಟಗಿ ಹೇಳಿದರು.


ತಾಲೂಕು ಕಸಾಪ ಸರ್ಕಾರಿ ಪ್ರೌಢ ಶಾಲೆಯಲ್ಲಿ ಆಯೋಜಿಸಿದ 'ಜ್ಞಾನಪೀಠ ಗಾರುಡಿಗರು' ಉಪನ್ಯಾಸ ಮಾಲಿಕೆಯ ಅಡಿಯಲ್ಲಿ ವರಕವಿ ದ.ರಾ ಬೇಂದ್ರೆಯವರ ಬದುಕು–ಬರಹ ಕುರಿತು ಉಪನ್ಯಾಸ ಮಾತನಾಡಿದರು.

ಬೇಂದ್ರೆಯವರು ತಮ್ಮ ಕಾವ್ಯ ಶಕ್ತಿಯಿಂದ ಉತ್ಸಾಹದ ಚಿಲುಮೆಯನ್ನು ಕ್ಕಿಸಿ ನೊಂದ ಜೀವಕ್ಕೆ ಸಾಂತ್ವನ ನೀಡಿ, ಪ್ರೀತಿ ಪ್ರೇಮಗಳನ್ನು ಮೂಡಿಸಿ, ಸಾಹಿತ್ಯ ಲೋಕವನ್ನು ಶ್ರೀಮಂತಗೊಳಿಸಿದವರು. ಈ ನೆಲದ ಭಾಷಾ ಸೊಗಡನ್ನು ಕಾವ್ಯಕ್ಕೆ ತಂದ ಅಪ್ಪಟ ದೇಸಿ ಕವಿಯೆಂದರೆ ಬೇಂದ್ರೆ ಯವರು.

ಜೀವನದಲ್ಲಿ ನೊಂದು ಬೆಂದು ಬಳಲಿದ ವರಾದರೂ ಕಾವ್ಯದ ಮೂಲಕವಾಗಿ ಮಿಂಚಿದ ರತ್ನವೆನಿಸಿ ದ್ದಾರೆ. ಜೀವನದಲ್ಲಿ ಮಕ್ಕಳ ಸಾವು,ಪತ್ನಿಯ ಸಾವು ಬೇಂದ್ರೆಯವರಿಗೆ ಅತೀವ ದುಃಖವ ನ್ನುಂಟು ಮಾಡಿದವು. ಆದರೂ ಇದ್ಯಾವುದಕ್ಕೂ ದೃತಿಗೆಡದೆ ಕೊರತೆಯ ಬದುಕಿನಲ್ಲಿಯೇ ಅಪಾರವಾದ ಶ್ರೇಷ್ಠ ಸಾಹಿತ್ಯ ಸಂಪತ್ತನ್ನು ನಿರ್ಮಾಣ ಮಾಡಿದ ಹೆಗ್ಗಳಿಕೆ ಬೇಂದ್ರೆಯವರಿಗೆ ಸಲ್ಲುತ್ತದೆ. ಅವರು ಸಂಕಷ್ಟದ ಕುಲುಮೆಯಲ್ಲಿ ಅರಳಿ ನಿಂತ ಅಪೂರ್ವ ಪ್ರತಿಭೆ. ಬೇಂದ್ರೆ ಅವರ ಮಾತೃಭಾಷೆ ಮರಾಠಿ ಆದರೂ ಕನ್ನಡ ಸಾಹಿತ್ಯಕ್ಕೆ ನಿರೀಕ್ಷೆಗ ಮೀರಿದ ಕೊಡುಗೆ ನೀಡಿ ಗಮನ ಸೆಳೆದಿದ್ದಾರೆ ಎಂದರು.

ಕಸಾಪ ತಾಲೂಕಾಧ್ಯಕ್ಷ ಶರಣ ಬಸಪ್ಪ ಕೋಬಾಳ ಅಧ್ಯಕ್ಷತೆ ವಹಿಸಿ ಮಾತನಾಡಿ, ಬೇಂದ್ರೆಯವರು ನಮ್ಮಿಂದ ಭೌತಿಕವಾಗಿ ದೂರವಾಗಿ ದ್ದರೂ, ಕಾವ್ಯದ ಮೂಲಕ ಇನ್ನೂ ಜೀವಂತ ವಾಗಿದ್ದಾರೆ. ಅವರ ನೆನಪು ನಮ್ಮಲ್ಲಿ ನಾಡು ನುಡಿಯ ಅಭಿಮಾನವನ್ನು ಉಕ್ಕಿಸಲಿ, ಕನ್ನಡನಾಡು ನುಡಿ ಅಭಿವೃದ್ಧಿ

# ಬ್ರಹ್ಮಶ್ರೀ ನಾರಾಯಣ ಗುರು ಜಯಂತ್ಯುತ್ಸವ




ಬಳ್ಳಾರಿ, ಸೆ.10– ಜಿಲ್ಲಾಡಳಿತ, ಜಿಲ್ಲಾಪಂಚಾಯತ್, ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ನಗರದ ಈಡಿಗರ ಹಾಸ್ಟೆಲ್ ಆವರಣದಲ್ಲಿ ಬ್ರಹ್ಮಶ್ರೀ ನಾರಾಯಣ ಗುರು ಜಯಂತ್ಯೋತ್ಸವದ ಮೆರವಣಿಗೆಗೆ ನಗರ ಶಾಸಕರಾದ ಜಿ.ಸೋಮಶೇಖರರೆಡ್ಡಿ ಅವರು ಚಾಲನೆ ನೀಡಿದರು.

ಬ್ರಹ್ಮಶ್ರೀ ನಾರಾಯಣ ಗುರು ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಮಾಡಿ ನಮನ ಸಲ್ಲಿಸುವುದರ ಮೂಲಕ ಜಯಂತ್ಯೋತ್ಸವದ ಮೆರವಣಿಗೆಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ಶಾಸಕರಾದ ಜೆ.ಎನ್.ಗಣೇಶ್, ಮಹಾನಗರ ಪಾಲಿಕೆಯ ಮೇಯರ್ ರಾಜೇಶ್ವರಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕರಾದ ಸಿದ್ಧಲಿಂಗೇಶ್ ರಂಗಣ್ಣನವರ್ ಸೇರಿದಂತೆ ಮಹಾನಗರ ಪಾಲಿಕೆಯ ಸದಸ್ಯರು ಹಾಗೂ ಈಡಿಗ ಸಮಾಜದ ಮುಖಂಡರು ಇದ್ದರು. ನಂತರದ ವೇದಿಕೆ ಕಾರ್ಯಕ್ರಮವನ್ನು ಬಳ್ಳಾರಿ ನಗರ ಶಾಸಕರಾದ ಜಿ.ಸೋಮಶೇಖರ ರೆಡ್ಡಿ ಅವರು ಅವರು ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರಾಚೀನ ಭಾರತದಲ್ಲಿ ಸಾಮಾಜಿಕ ಸುಧಾರಣೆಯಲ್ಲಿ ಹೆಚ್ಚು ಒತ್ತು ನೀಡಿದವರು ಬ್ರಹ್ಮಶ್ರೀ ನಾರಾಯಣ ಗುರುಗಳು ಮತ್ತು ಈಡಿಗ ಸಮುದಾಯಕ್ಕೆ ಅವರ ಕೊಡುಗೆ ಅಪಾರವಾದದ್ದು. ಈಡಿಗ ಸಮಾಜದ ಬಾಂಧವರಿಗೆ ಜಯಂತಿಯ ಶುಭಾಶಯಗಳನ್ನು ತಿಳಿಸುತ್ತಾ, ಈಡಿಗ ಸಮುದಾಯದ ಏಳಿಗೆಗೆ ಹಾಗೂ ಅವರಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಸರ್ಕಾರದಿಂದ ಒದಗಿಸಲಿದ್ದೇವೆ ಎಂದು ಹೇಳಿದರು.

ಕಂಪ್ಲಿ ಕ್ಷೇತ್ರದ ಶಾಸಕರಾದ ಜೆ.ಎನ್.ಗಣೇಶ್ ಅವರು ವೇದಿಕೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಕನ್ನಡ ಸಾಹಿತ್ಯ ಪರಿಷತ್ತು ಜಿಲ್ಲಾ ಘಟಕದ ಅಧ್ಯಕ್ಷರಾದ ನಿಷ್ಠಿರುದ್ರಪ್ಪ ಅವರು ಜಯಂತ್ಯೋತ್ಸವದ ಕುರಿತು ವಿಶೇಷ ಉಪನ್ಯಾಸ ನೀಡಿದರು. ಜಯಂತ್ಯೋತ್ಸವದ ಮೆರವಣಿಗೆಯಲ್ಲಿ ಕಳಸ ಹೊತ್ತ ಮಹಿಳೆಯರು ಹಾಗೂ ವಿವಿಧ ಸಾಂಸ್ಕೃತಿಕ ಕಲಾತಂಡಗಳು ಗಮನಸೆಳೆದವು.

# ಹಾನಗಲ್ ಕುಮಾರ ಸ್ವಾಮಿಗಳ ಜಯಂತಿ




ಬಳ್ಳಾರಿ, ಸೆ.10– ನಗರದ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಾದ ರಾವ್ ಬಹದ್ದೂರ್ ವೈ ಮಹಾಬಲೇಶ್ವರಪ್ಪ ತಾಂತ್ರಿಕ ಮಹಾವಿದ್ಯಾಲಯದಲ್ಲಿ ದಿನಾಂಕ 10–09–2022 ರಂದು ಶ್ರೀಮದ್ವೀರಶೈವ ಶಿವಯೋಗಮಂದಿರ ಸಂಸ್ಥೆ ಹಾಗೂ ಅಖಿಲ ಭಾರತ ವೀರಶೈವ ಮಹಾಸಭಾ ಸಂಸ್ಥಾಪಕರಾದ ಕಾರಣಿಕ ಪುರಷ , ಸಮಾಜಸಂಜೀವಿನಿ ಪೂಜ್ಯಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳವರ 155ನೇಯ ಜಯಂತಿ ಮಹೋತ್ಸವ ಸಮಾರಂಭವು ಜರುಗಿತು. ಮುಖ್ಯ ಅತಿಥಿಗಳಾಗಿ ವೀರಶೈವ ವಿದ್ಯಾವರ್ಧಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರು, ಕೊಟ್ಟೂರೇಶ್ವರ ಪದವಿ ಮಹಾ ವಿದ್ಯಾಲಯ, ಕೊಟ್ಟೂರು, ಅಧ್ಯಕ್ಷರಾದ ಶ್ರೀಸಿದ್ದರಾಮಯ್ಯ ಕಲ್ಮಠ, ಪ್ರಾಚಾರ್ಯ ರಾದ ಡಾ|| ಟಿ. ಹನುಮಂತರೆಡ್ಡಿ, ಉಪಪ್ರಾಂಶುಪಾಲರು ಡಾ||ಸವಿತಾ ಸೊನೋಳಿ, ಡಾ||ಹೆಚ್. ಎಂ.ಮಲ್ಲಿ ಕಾರ್ಜುನ, ಡಾ||ಯರ್‍ರನ ಗೌಡರು, ಡಾ|| ಹೆಚ್.ಗಿರೀಶ ಹಾಗೂ, ಕಾಲೇಜಿನ ಸಿಬ್ಬಂದಿ ವರ್ಗ, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಸಿದ್ದರಾಮಯ್ಯ ಕಲ್ಮಠ, ಮಾತನಾಡುತ್ತಾ "ಭಾರತದೇಶದ ಈ ಪ್ರದೇಶದಲ್ಲಿ, ಸಮಾಜವು ಅತಂತ್ರವಾಗಿರುವ ಅಂದಿನ ಸಮಯದಲ್ಲಿ, ಎಲ್ಲ ಮನುಜರು ಚನ್ನಾಗಿ ಬದುಕಬೇಕು, ಅಭಿವೃದ್ಧಿ ಯಾಗಬೇಕು ಎನ್ನುವ ಸಂಕಲ್ಪದಿಂದ ಎಲ್ಲಾ ಸಮಾಜದ ಮುಖಂಡರನ್ನು ಒಗ್ಗೂಡಿಸಿ, ಶೈಕ್ಷಣಿಕ, ಆಧ್ಯಾತ್ಮಿಕವಾಗಿ ಅಭಿವೃದ್ಧಿಮಾಡಿದರೆ ಮಾತ್ರ ಸಮಾಜವು ಅಭಿವೃದ್ಧಿಯಾಗುತ್ತದೆ ಎಂದು 100ವರ್ಷಗಳ ಹಿಂದೆ ಮಾಡಿದ್ದ ತಪಸ್ಸಿನ ಫಲ ಇಂದು ಹಲವಾರು ಸಂಸ್ಥೆಗಳು ಹುಟ್ಟಿ, ಲಕ್ಷಾಂತರ ಜನರಿಗೆ ಅನಕ್ಷರ, ಅಜ್ಞಾನದಿಂದ ಸುಸಜ್ಜಿತ, ಸಮಾಜವಾಗಿ, ಇಡೀ ಕರ್ನಾಟಕ ರಾಜ್ಯವು ಸಾಂಸ್ಕೃತಿಕವಾಗಿ, ಧಾರ್ಮಿಕವಾಗಿ ಬೇರೇ ರಾಜ್ಯಗಳಿಗೆ ಮಾದರಿಯಾಗಿದೆ. ಮಾನವನ ಜೀವನ ಒಂದು ಕಲ್ಲು, ಅದನ್ನು ಹದಮಾಡಿ ಸುಂದರವಾಗಿ ಕಟ್ಟಿದಾಗ ಮಾತ್ರ ಸುಂದರ ಮೂರ್ತಿ ಯಾಗುತ್ತದೆ. ಪೂಜ್ಯಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳವರ ಮಾರ್ಗದಲ್ಲಿ ನಡೆಯಬೇಕು" ಎಂದು ನುಡಿದರು,

# ಜಿಲ್ಲಾ ಸಹಕಾರಿ ಬ್ಯಾಂಕ್ ದುರಾಡಳಿತ: ಪ್ರತಿಭಟನೆ




ಕಲಬುರಗಿ ಜಿಲ್ಲಾ ಸಹಕಾರ ಬ್ಯಾಂಕ್ ದುರಾಡಳಿತದಲ್ಲಿ ತೊಡಗಿದೆ ಎಂದು ಆರೋಪಿಸಿ ಕಲ್ಯಾಣ ಕರ್ನಾಟಕ ರೈತ ಹೋರಾಟ ಸಮಿತಿಯ ಕಾರ್ಯಕರ್ತರು ಪ್ರತಿಭಟಿಸಿ ಬ್ಯಾಂಕ್ ಆವರಣದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು.

ಕಲಬುರಗಿ, ಸೆ.10– ಜಿಲ್ಲಾ ಸಹಕಾರ ಬ್ಯಾಂಕ್ ದುರಾಡಳಿತದಲ್ಲಿ ತೊಡಗಿದೆ ಎಂದು ಆರೋಪಿಸಿ ಕಲ್ಯಾಣ ಕರ್ನಾಟಕ ರೈತ ಹೋರಾಟ ಸಮಿತಿಯ ಕಾರ್ಯಕರ್ತರು ಪ್ರತಿಭಟಿಸಿ ಬ್ಯಾಂಕ್ ಆವರಣದಲ್ಲಿ ಧರಣಿ ಸತ್ಯಾಗ್ರಹ ನಡೆಸಿದರು. ಸಮಿತಿಯ ಅಧ್ಯಕ್ಷ ಪ್ರಕಾಶ್ ಪಾಟೀಲ್ ಯತ್ನಾಳ್ ಅವರ ನೇತೃತ್ವದಲ್ಲಿ ನಡೆದ ಪ್ರತಿಭಟನೆಯಲ್ಲಿ ಶೌಕತ್ ಅಲಿ ಆಲೂರ್, ಬಸವರಾಜ್ ಬೂದಿಹಾಳ್, ಹಣಮಂತರಾವ್ ಹೂಗಾರ್, ಶರಣಪ್ಪ ದೊಡ್ಡಮನಿ, ಬಸಣ್ಣ ಕೋಳಕೂರ್, ಮಾಪಣ್ಣ ಗಂಜಗಿರಿ, ಅಪ್ಪಾಸಾಬ್ ಹೊಸಮನಿ, ಶರಣು ಮಂದರವಾಡ್, ಲಕ್ಷ್ಮೀಕಾಂತ್ ಹಾಗರಗುಂಡಗಿ, ಶಾಮರಾವ್ ಸೂರನ್, ವೆಂಕೋಬರಾವ್ ವಾಗಣಗೇರಿ, ಎಸ್. ಎಸ್. ಸಲಗರ್, ಬಾಬು ಪಾಟೀಲ್ ಮುಂತಾದವರು ಪಾಲ್ಗೊಂಡಿ ದ್ದರು.

ಪ್ರತಿಭಟನೆಕಾರರು ನಂತರ ಬ್ಯಾಂಕ್ ಅಧಿಕಾರಿಗಳಿಗೆ ಮನವಿ ಪತ್ರ ಸಲ್ಲಿಸಿ, ಬ್ಯಾಂಕಿನಿಂದ ಜಿಲ್ಲೆಯ ಪ್ರತಿ ತಾಲ್ಲೂಕಿನ ರೈತರಿಗೆ ಸಾಲ ನೀಡುವಲ್ಲಿ, ಸಾಲಮನ್ನಾ ಹಣ ನೀಡುವಲ್ಲಿ ತಾರತಮ್ಯ ನೀತಿ ಅನುಸರಿಸುತ್ತಿದೆ. ಕಟ್ಟಡ ನಿಧಿ ಹಣ ಸಂಗ್ರಹ ದುರ್ಬಳಕೆ ಮಾಡಿಕೊಳ್ಳುತ್ತಿದೆ. ನಕಲಿ ರೈತರ ಹೆಸರಿನಲ್ಲಿ ಸಾಲದ ಹಣ ದುರ್ಬಳಕೆ ಮಾಡಿಕೊಳ್ಳುತ್ತಿದೆ. ಸಾಲ ವಸೂಲಾತಿ ಹೆಸರಿನಲ್ಲಿ ದೌರ್ಜನ್ಯ ಮಾಡಲಾಗುತ್ತಿದೆ ಎಂದು ಆಕ್ರೋಶ ಹೊರಹಾಕಿದರು. ಜಿಲ್ಲಾ ಸಹಕಾರ ಬ್ಯಾಂಕ್‌ನಿಂದ ತಾಲ್ಲೂಕುವಾರು ಸೇಡಂ, ಅಫಜಲಪುರ, ಆಳಂದ್, ಸುರಪುರ ತಾಲ್ಲೂಕುಗಳಿಗೆ ತಲಾ 100 ಕೋಟಿ ರೂ.ಗಳನ್ನು ಕೊಟ್ಟು, ಇನ್ನುಳಿದ ಜೇವರ್ಗಿ, ಚಿತ್ತಾಪುರ, ಶಹಾಪುರ ಸೇರಿದಂತೆ ಅನೇಕ ತಾಲ್ಲೂಕುಗಳಿಗೆ ಕೇವಲ 1, 2, 3 ಕೋಟಿ ರೂ.ಗಳನ್ನು ನೀಡುವ ಮೂಲಕ 2 ಜಿಲ್ಲೆಯ ಸಮಸ್ತ ರೈತರಿಗೆ ತಾರತಮ್ಯ ಎಸಗಲಾಗಿದೆ. ಈ ಕುರಿತು ತನಿಖೆ ಕೈಗೊಳ್ಳಬೇಕು ಎಂದು ಅವರು ಆಗ್ರಹಿಸಿದರು. ಈ ಹಿಂದೆ ಎಚ್.ಡಿ. ಕುಮಾರಸ್ವಾಮಿ ಅವರು ಮುಖ್ಯಮಂತ್ರಿ ಗಳಾಗಿದ್ದಾಗ ಸಾಲ ಮನ್ನಾ ಮಾಡಿ ಆದೇಶ ಹೊರಡಿಸಿದ್ದರೂ ಇಲ್ಲಿಯವರೆಗೆ ರೈತರಿಗೆ ಪ್ರಯೋಜನ ಆಗಿಲ್ಲ. ಸಾಲ ಮನ್ನಾ ಹಂಚಿಕೆಯಲ್ಲಿ ವಿಎಸ್‌ಎಸ್‌ಎನ್ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಸಹಕಾರ ಬ್ಯಾಂಕ್ ಅಧಿಕಾರಿಗಳು ಸೇರಿಕೊಂಡು ಗೋಲ್‌ಮ್ಯಾಲ್ ಮಾಡುತ್ತಿದ್ದಾರೆ. ಈ ಕುರಿತು ಯಾವುದೇ ಅಧಿಕಾರಿಗಳು ಗಮನಹರಿಸುತ್ತಿಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.

ಬ್ಯಾಂಕಿನ ಸಿಬ್ಬಂದಿಯ ಗೌಪ್ಯ ಖಾತೆಯಿಂದ ಸುಮಾರು 2 ಕೋಟಿ ರೂ.ಗಳನ್ನು ಬ್ಯಾಂಕಿನ ಅಧಿಕಾರಿಗಳು ಡ್ರಾ ಮಾಡಿಕೊಂಡು ವೈಯಕ್ತಿಕ ವಿಚಾರಕ್ಕೆ ಬಳಸಿಕೊಂಡು ಅಕ್ರಮ ಎಸಗಿದ್ದಾರೆ ಎಂದು ದೂರಿದ ಅವರು, ಈ ಹಿಂದೆ ರೈತರಿಗೆ ನೀರಾವರಿ ಸೌಲಭ್ಯಕ್ಕೆ ನೀಡಲಾದ ಎಂ.ಟಿ. ಲೋನ್ (ಪೈಪ್‌ಲೈನ್) ಕೋವಿಡ್ ಹಾಗೂ ಅತಿವೃಷ್ಟಿಯಿಂದ ಕಂಗಾಲಾದ ರೈತರಿಂದ ಮರಳಿ ಪಡೆಯುವ ನಿಟ್ಟಿನಲ್ಲಿ ರೈತರಿಗೆ ಮನಸೋ ಇಚ್ಛೆ ನೋಟಿಸ್ ನೀಡುವಮೂಲಕ ಬೆದರಿಕೆ ಹಾಕಲಾಗುತ್ತದೆ. ಸಾಲ ಕಟ್ಟದೇ ಹೋದಲ್ಲಿ ರೈತರ ಹೊಲಗಳನ್ನು ಜಪ್ತಿ ಮಾಡುವುದಾಗಿ ಬೆದರಿಸುತ್ತಿದ್ದು, ಈ ಕುರಿತು ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ರೈತರಿಗೆ ಸ್ಕೇಲ್ ಆಫ್ ಫೈನಾನ್ಸ್ ಪ್ರಕಾರ 25000 ರೂ.ಗಳನ್ನು ಸಾಲ ನೀಡುವ ಸಮಯದಲ್ಲಿ ಅದನ್ನು ರೈತರ ಪಹಣಿಯಲ್ಲಿ ಸೇರಿಸುವುದು ಖಂಡನೀಯ. ಅದರಲ್ಲಿ ಶೇರ್ ಅಮೌಂಟ್ ಹಾಗೂ ಇತರೆ ನಿಧಿ ಹಣ ಸೇರಿಸಿ ಸುಮಾರು 4000ರೂ.ಗಳನ್ನು ಕಡಿಮೆ ಮಾಡಿ ರೈತರಿಗೆ ಕೇವಲ 21,000ರೂ.ಗಳನ್ನು ಮಾತ್ರ ನೀಡಲಾಗುತ್ತಿದೆ ಎಂದು ಅವರು ದೂರಿದರು. ಈ ಹಿಂದೆ ಆಳಂದ್ ಡಿಸಿಸಿ ಬ್ಯಾಂಕ್‌ನಲ್ಲಿ ಮ್ಯಾನೇಜರ್ ಆಗಿ ಕೆಲಸ ಮಾಡುತ್ತಿದ್ದ ಲಕ್ಷ್ಮಣ್ ಪವಾರ್ ಎಂಬಾತನು ಸುಮಾರು 8 ಕೋಟಿ ರೂ.ಗಳ ರೈತರ ಹಣವನ್ನು ದುರ್ಬಳಕೆ ಮಾಡಿಕೊಂಡಿರುವ ಕುರಿತು ಬ್ಯಾಂಕಿನ ಅಧಿಕಾರಿಗಳ ಗಮನಕ್ಕೆ ತಂದರೂ ಆತನ ವಿರುದ್ಧ ಕ್ರಮ ಜರುಗಿಸಿ ಹಣ ಮರಳಿ ಪಡೆದುಕೊಳ್ಳದೇ ಆತನಿಗೆ ಪದೋನ್ನತಿ ಕೊಟ್ಟಿದ್ದು ನಾಚಿಕೇಗೇಡಿತನ ಸಂಗತಿ ಎಂದು ಟೀಕಿಸಿದರು. ಕೂಡಲೇ ಈ ಕುರಿತು ಸಮಗ್ರತನಿಖೆಯನ್ನು ಕೈಗೊಳ್ಳುವಂತೆ, ತಪ್ಪಿತಸ್ಥರ ವಿರುದ್ಧ ಹಾಗೂ ಆಡಳಿತ ಮಂಡಳಿಯ ವಿರುದ್ಧ ಕ್ರಮ ತೆಗೆದುಕೊಳ್ಳುವಂತೆ ಆಗ್ರಹಿಸಿದ ಅವರು, ಅಲ್ಲಿಯವರೆಗೂ ಆಡಳಿತ ಮಂಡಳಿಯನ್ನು ಹಾಗೂ ಅಧಿಕಾರಿಗಳನ್ನು ಅಮಾನತ್ತಿನಲ್ಲಿ ಇಟ್ಟು ಸೂಕ್ತ ಆಡಳಿತಾಧಿಕಾರಿಗಳನ್ನು ನೇಮಕಮಾಡಿ ನ್ಯಾಯ ದೊರಕಿಸಿಕೊಡಬೇಕು ಎಂದು ಒತ್ತಾಯಿಸಿದರು.

# ಸರಬರಾಜುದಾರರ ಸಂಘದಿಂದ ನೂತನ ಬುಡಾ ಅಧ್ಯಕ್ಷ ಮಾರುತಿ ಪ್ರಸಾದ್‌ಗೆ ಸನ್ಮಾನ



ಬಳ್ಳಾರಿ, ಸೆ.10– ಬಳ್ಳಾರಿ ಶಾಮಿಯಾನ ಸಪ್ಲಯರ್ಸ್ ಅಸೋಸಿಯೇಷನ್ ಇವರ ವತಿಯಿಂದ ಕ್ಲಾಸಿಕ್ ಫಂಕ್ಷನ್ ಹಾಲ್ ನಲ್ಲಿ ಶನಿವಾರದದಂದು ಬಳ್ಳಾರಿ ನಗರ ಅಭಿವೃದ್ಧಿ ಪ್ರಾಧಿಕಾರದ ನೂತನ ಅಧ್ಯಕ್ಷರಾಗಿ ಆಯ್ಕೆಯಾದ ಮಾರುತಿ ಪ್ರಸಾದ್ ಎಸ್ ಇವರಿಗೆ ಅಭಿನಂದನಾ ಸಮಾರಂಭ ಏರ್ಪಡಿಸಿ ಸನ್ಮಾನಿಸಲಾಯಿತು. ಸನ್ಮಾನ ಸ್ವೀಕರಿಸಿ ಮಾತನಾಡಿದ ಮಾರುತಿ ಪ್ರಸಾದ್ ರವರು ಮೊಟ್ಟಮೊದಲು 23 ವರ್ಷಗಳ ಹಿಂದೆ ಆರಂಭಿಸಿದ ಗಣೇಶ ಹಬ್ಬದ ಆಚರಣೆಯಲ್ಲಿ ಸಮಾಜ ಸೇವೆ ಒಗ್ಗಟ್ಟು ಸಂಘಟನಾ ಶಕ್ತಿ ಆರಂಭವಾಯಿತು, ಅಲ್ಲಿಂದ ರಾಜಕೀಯವಾಗಿ 15 ವರ್ಷಗಳಿಂದ ನಿರಂತರವಾಗಿ ಸೇವೆ ಮಾಡುತ್ತಾ ಬಂದಿರುವೆ ಅದಕ್ಕೆ ಕಾರಣ ಸಹಾಯ ಸಹಕಾರದಿಂದ ಮಾತ್ರ ಸಾಧ್ಯವಾಗಿದೆ, ಯಾವುದೇ ಕೆಲಸ ಸಮಸ್ಯೆ ಇರಲಿ ಆ ಸಮಸ್ಯೆಯನ್ನು ಬಗೆಹರಿಸುತ್ತೇನೆ ತಮ್ಮೆಲ್ಲರ ಆಶೀರ್ವಾದ ಇರಲಿ ಎಂದು ಕೋರಿದರು.

ರಮೇಶ್ ಗೋಪಾಲ್ ರವರು ಮಾರುತಿ ಪ್ರಸಾದ್‌ರವರು ಅಧ್ಯಕ್ಷ ಹುದ್ದೆಗಾಗಿ ಬೇಡಿ ಬಂದವರಲ್ಲ ಕಳೆದ ಹತ್ತು ವರ್ಷಗಳಿಂದ ಪಕ್ಷಕ್ಕಾಗಿ ಸಮಾಜಕ್ಕಾಗಿ ಅವಿರತವಾಗಿ ಸೇವೆಯನ್ನು ಮಾಡಿದ್ದಾರೆ, ಆ ಸೇವೆಯೇ ಅವರಿಗೆ ಬೂಡಾ ಅಧ್ಯಕ್ಷ ಹುದ್ದೆ ಅಲಂಕರಿಸುವಂತೆ ಮಾಡಿದೆ ಎಂದು ತಿಳಿಸಿದರು. ಅದೇ ರೀತಿಯಾಗಿ ಆರ್ಯವೈಶ್ಯ ಸಂಘದ ಯುವಕರು ಹೆಚ್ಚು ಹೆಚ್ಚು ರಾಜಕೀಯವಾಗಿ ಮುಂದೆ ಬರಬೇಕು ಎಂದು ತಿಳಿಸಿದರು. ಕಳೆದ ಎರಡು ವರ್ಷದ ಅವಧಿಯಲ್ಲಿ ಅಸೋಸಿಯೇಷನ್ ವತಿಯಿಂದ ಮಕ್ಕಳಿಗೆ ಉಚಿತ ಪುಸ್ತಕ, ಬಟ್ಟೆ, ನೀರು ಆಹಾರ ಕಿಟ್ಟುಗಳನ್ನು ವಿತರಿಸಲಾಗಿದೆ. ಈ ಸೇವೆ ನಿರಂತರವಾಗಿ ಮುಂದುವರೆಯಲಿ ಎಂದರು.

# ಕಿಂಗ್‌ಚಾರ್ಲ್ಸ್ ದೊರೆ : ಬ್ರಿಟನ್ ಅಧಿಕೃತ ಘೋಷಣೆ



**ಲಂಡನ್, ಸೆ.10:** ಎಕ್ಸೆಶನ್ ಕೌನ್ಸಿಲ್‌ನ ಐತಿಹಾಸಿಕ ಸಮಾರಂಭದಲ್ಲಿ ಕಿಂಗ್ ಚಾರ್ಲ್ಸ್ ಐಐಐಅವರನ್ನು ಬ್ರಿಟನ್‌ನ ನೂತನ ದೊರೆಯಾಗಿ ಶನಿವಾರ ಅಕೃತವಾಗಿ ಘೋಷಿಸಲಾಯಿತು. ಇದೇ ಮೊದಲ ಬಾರಿಗೆ ಕಾರ್ಯಕ್ರಮದ ನೇರ ಪ್ರಸಾರ ಮಾಡಲಾಗಿತ್ತು. ತನ್ನ ತಾಯಿ ರಾಣಿ ಎಲಿಜಬೆತ್ ಐಐ ಗುರುವಾರ ನಿಧನರಾದ ಹಿನ್ನೆಲೆಯಲ್ಲಿ, ಲಂಡನ್‌ನ ಸೈಂಟ್ ಜೇಮ್ಸ್ ಅರಮನೆಯಲ್ಲಿ ನಡೆದ ಅಕೃತ ಘೋಷಣೆ ಮತ್ತು ಪ್ರಮಾಣ ವಚನ ಸ್ವೀಕಾರ ಸಮಾರಂಭದಲ್ಲಿ 73ರ ಹರೆಯದ ವೇಲ್ಸ್‌ನ ಮಾಜಿ ರಾಜಕುಮಾರ ಚಾರ್ಲ್ಸ್ ಬ್ರಿಟನ್‌ನ ನೂತನ ದೊರೆಯಾಗಿ ಅಕಾರ ಸ್ವೀಕರಿಸಿದ್ದಾರೆ.

"ಗಾಡ್ ಸೇವ್ ದ ಕಿಂಗ್ "ಎಂಬುದಾಗಿ ಕೌನ್ಸಿಲ್‌ನ ಪಾದ್ರಿ ಹೇಳಿದಾಗ ಸೇರಿದ್ದ ಜನತೆ ಅದನ್ನು ಪುನರುಚ್ಚರಿಸಿ ಅನುಮೋದಿಸಿದರು.ಈ ಸಂದರ್ಭ ಅವರ ಪತ್ನಿ ರಾಣಿ ಕನ್ಸೋರ್ಟ್ ಕ್ಯಾಮಿಲ್ಲಾ ಮತ್ತು ಪುತ್ರ ಹಾಗೂ ಉತ್ತರಾಕಾರಿಯಾಗಿರುವ ಪ್ರಿನ್ಸ್ ವಿಲ್ಲಿಯಮ್ ಚಾರ್ಲ್ಸ್ ಜೊತೆಗಿದ್ದರು. ಪ್ರಿನ್ಸ್ ವಿಲಿಯಮ್ ವೇಲ್ಸ್‌ನ ನೂತನ ರಾಜಕುಮಾರ ಎಂದೂ ಘೋಷಿಸಲಾಗಿದೆ.

ತಾಯಿಯ ಆರೋಗ್ಯ ತೀವ್ರ ಹದಗೆಟ್ಟ ಹಿನ್ನೆಲೆಯಲ್ಲಿ ಚಾರ್ಲ್ಸ್ ಸ್ಕಾಟ್‌ಲ್ಯಾಂಡ್‌ನ ಬಾಲ್‌ಮೊರಾಲ್ ಕ್ಯಾಸ್ಟ್ಲ್‌ನಿಂದ ಶುಕ್ರವಾರವೇ ಲಂಡನ್‌ಗೆ ಆಗಮಿಸಿದ್ದರು.ರಾಣಿ ಎಲಿಜಬೆತ್ ನಿಧನದ ಶೋಕಾರ್ಥವಾಗಿ ಅರಮನೆಯಲ್ಲಿನ ಧ್ವಜವನ್ನು ಕೆಳಕ್ಕಿಳಿಸಲಾಗಿದ್ದುದನ್ನು ಮತ್ತೆ ಮೇಲಕ್ಕೇರಿಸಲಾಗಿದೆ.ಬ್ರಿಟನಿನಾದ್ಯಂತ ಇದೇ ರೀತಿ ಧ್ವಜಗಳನ್ನು ಮತ್ತೆ ಮೇಲಕ್ಕೇರಿಸಲಾಗುವುದು.

ರಾಣಿಯವರು ಯಾವ ರೀತಿ ಅಚಲ ನಿಷ್ಠೆಯಿಂದ ತಮ್ಮನ್ನು ಸಮರ್ಪಿಸಿಕೊಂಡಿದ್ದರೋ , ಅದೇ ರೀತಿ ನಾನು ದೇವರು ನನಗೆ ನೀಡುವ ಅವಯಲ್ಲಿ ದೇಶದ ಸಾಂವಿಧಾನಿಕ ತತ್ವಗಳನ್ನು ಎತ್ತಿ ಹಿಡಿಯಲು ಬದ್ಧತೆಯಿಂದ ಶ್ರಮಿಸುವೆ ಎಂಬುದಾಗಿ ಅವರು ತನ್ನ ಮೊದಲ ಟಿವಿ ಭಾಷಣದಲ್ಲಿ ಹೇಳಿದರು."ನನ್ನ ಪ್ರೀತಿಯ ಮಮ್ಮಾ ನೀವು ನನ್ನ ಪ್ರೀತಿಯ ದಿ.ಪಪ್ಪಾ ಜೊತೆ ಸೇರಲು ಕೊನೆಯ ಮಹಾಯಾನ ಕೈಗೊಂಡಿದ್ದೀರಿ. ಇಷ್ಟು ವರ್ಷಗಳಲ್ಲಿ ಶ್ರದ್ಧೆಯಿಂದ ದೇಶದ ಜನರಿಗಾಗಿ ಮತ್ತು ನಮ್ಮ ಕುಟುಂಬಕ್ಕಾಗಿ ಸಮರ್ಪಣೆಯಿಂದ ದುಡಿದಿದ್ದೀರಿ. ನಿಮ್ಮ ಪ್ರೀತಿಗೆ ಕೃತಜ್ಞತೆ ಎಂದಷ್ಟೇ ನಾನು ಹೇಳ ಬಯಸುವೆ. ದೇವತೆಗಳು ನಿಮ್ಮ ಶಾಂತಿಕೋರಿ ಹಾಡುತ್ತಿವೆ ಎಂದು ಚಾರ್ಲ್ಸ್ ಭಾವುಕರಾಗಿ ನುಡಿದರು.

ದೊರೆಯ ಅಕಾರ ಸ್ವೀಕಾರ ಸಮಾರಂಭವನ್ನು ಮೊದಲ ಬಾರಿಗೆ ಸಾರ್ವಜನಿಕವಾಗಿ ಪ್ರಸಾರ ಮಾಡಲಾಗಿತ್ತು .ಈ ಸಂದರ್ಭ ದೊರೆಯ ರಕ್ಷಣೆಗಾಗಿ ಇರುವ ರಾಯಲ್ ಹಾರ್ಸ್ ಫಿರಂಗಿದಳ ಲಂಡನ್‌ನ ಹೈಡ್ ಪಾರ್ಕ್‌ನಲ್ಲಿ 41ತೋಪುಗಳನ್ನು ಹಾರಿಸುವ ಮೂಲಕ ಗೌರವ ಸಲ್ಲಿಸಿತು.ರಾಜಕಾರಣಿಗಳು,ಹಿರಿಯ ಪಾದ್ರಿಗಳು ಮತ್ತು ಸುಪ್ರೀಂಕೋರ್ಟ್ ನ್ಯಾಯಾಧೀಶರು ಸೇರಿದಂತೆ ಗಣ್ಯರು ಸಮಾರಂಭದಲ್ಲಿ ಪಾಲ್ಗೊಂಡಿದ್ದರು.

ಸಾರ್ವಜನಿಕರಿಗೆ ಅಂತಿಮ ನಮನ ಸಲ್ಲಿಸಲು ಅನುಕೂಲವಾಗುವಂತೆ, ಅಗಲಿದ ರಾಣಿಯ ಪಾರ್ಥಿವ ಶರೀರವನ್ನು ಲಂಡನ್‌ನ ವೆಸ್ಟ್‌ಮಿನಿಸ್ಟರ್ ಹಾಲ್‌ನಲ್ಲಿ ಇಡಲಾಗುವುದು.ಅನಂತರ ಅವರ ಶವಪೆಟ್ಟಿಗೆಯನ್ನು ಈಡನ್ ಬರ್ಗ್‌ನಲ್ಲಿರುವ ಹೋಲಿರೂಡ್‌ಹೌಸ್‌ನ ಅರಮನೆಗೆ ಒಯ್ಯುವ ನಿಟ್ಟಿನಲ್ಲಿ ಬಾಲ್‌ಮೊರಾಲ್ ಎಸ್ಟೇಟ್‌ಗೆ ಕೊಂಡೊಯ್ಯಲಾಗುವುದು.ಅಲ್ಲಿಂದ ಸೈಂಟ್ ಗಿಲ್ಸ್ ಕ್ಯಾಥೆಡ್ರಾಲ್‌ಗೆ ಮೆರವಣಿಗೆ ನಡೆಯಲಿದ್ದು , ಅಲ್ಲಿ ಅವರಿಗೆ ಅಂತಿಮ ನಮನ ಸಲ್ಲಿಸಲು ಅವಕಾಶ ಕಲ್ಪಿಸಿ, ಬಳಿಕ ಮತ್ತೆ ಲಂಡನ್‌ಗೆ ಒಯ್ದು ನಾಲ್ಕು ದಿನಗಳ ಬಳಿಕ ಅಂತ್ಯಕ್ರಿಯೆ ಜರಗಲಿದೆ ಎಂದು ಮೂಲಗಳು ತಿಳಿಸಿವೆ.

## ಪ್ರಜಾಪ್ರಭುತ್ವಕ್ಕೆ ಧಕ್ಕೆ : ಹಾಂಗ್‌ಕಾಂಗ್‌ನಲ್ಲಿ 5 ಭಾಷಣತಜ್ಞರ ಬಂಧನ

**ಹಾಂಗ್‌ಕಾಂಗ್:** ಪ್ರಜಾಪ್ರಭುತ್ವದ ಬೆಂಬಲಿಗರನ್ನು ತೋಳಗಳಿಂದ ತಮ್ಮ ಗ್ರಾಮವನ್ನು ರಕ್ಷಿಸುವ ಕುರಿಗಳಂತೆ ಮಕ್ಕಳ ಪುಸ್ತಕಗಳಲ್ಲಿ ಚಿತ್ರಿಸಿದ 5 ಸ್ಪೀಚ್ ಥೆರಪಿಸ್ಟ್‌ಗಳನ್ನು ಹಾಂಕ್ ಕಾಂಗ್ ಶನಿವಾರ ಬಂಧಿಸಿದೆ.

ಹಾಂಕ್ ಕಾಂಗ್‌ನ ಪ್ರಜಾಪ್ರಭುತ್ವ ಚಳುವಳಿಯನ್ನು ಮಕ್ಕಳಿಗೆ ವಿವರಿಸಲು ಚಿತ್ರ ಪುಸ್ತಕಗಳ ಸರಣಿಯನ್ನು ನಿರ್ಮಿಸಲು ಇವರಿಗೆ ತಿಳಿಸಲಾಗಿತ್ತು. ಇದೀಗ ಐವರಿಗೆ ದೇಶದ್ರೋಹ ಕಾನೂನಿನ ಅನ್ವಯ 19 ತಿಂಗಳ ಜೈಲು ಶಿಕ್ಷೆಯನ್ನು ಕೋರ್ಟ್ ವಿಧಿಸಿದೆ.ಸೇವೆ ಸಲ್ಲಿಸಿದ ಸಮಯದ ಕಡಿತದ ನಂತರ ಇವರನ್ನು 31 ದಿನಗಳಲ್ಲಿ ಬಿಡುಗಡೆ ಮಾಡಬಹುದು ಎಂದು ವಕೀಲರೊಬ್ಬರು ಅಂದಾಜಿಸಿದ್ದಾರೆ.

## ಇಂಡೋನೇಷ್ಯಾದಲ್ಲಿ ಭೂಕಂಪ

**ಜಕಾರ್ತ, ಸೆ 10 :**ಇಂಡೋನೇಷ್ಯಾದ ಪೂರ್ವ ಪ್ರಾಂತ್ಯದ ಪಪುವಾದಲ್ಲಿ ಶನಿವಾರ ರಿಕ್ಟರ್ ಮಾಪಕದಲ್ಲಿ 6.2 ರ ತೀವ್ರತೆಯ ಭೂಕಂಪ ಸಂಭವಿಸಿದೆ, ಆದರೆ ಅಧಿಕೃತ ಮೂಲಗಳ ಪ್ರಕಾರ ಯಾವುದೇ ಹಾನಿ ಅಥವಾ ಸಾವು ನೋವುಗಳ ವರದಿಯಾಗಿಲ್ಲ.

ಇಂಡೋನೇಷಿಯಾದ ಹವಾಮಾನ, ಹವಾಮಾನಶಾಸ್ತ್ರ ಮತ್ತು ಭೂಭೌತಶಾಸ್ತ್ರ ಸಂಸ್ಥೆಯು ಭೂಕಂಪನದಿಂದ ಸುನಾಮಿ ಅಪಾಯ ಉಂಟಾಗಿಲ್ಲ ಎಂದು ತಿಳಿಸಿದೆ. ಈ ಹಿಂದೆ 6.0, 5.9 ಮತ್ತು 5.5 ರ ತೀವ್ರತೆಯೊಂದಿಗೆ ಪೂರ್ವ ಆಘಾತಗಳ ಸರಣಿಯ ನಂತರ ಭೂಕಂಪವನ್ನು ಮುಖ್ಯ ಆಘಾತ ಎಂದು ವರ್ಗೀಕರಿಸಲಾಗಿದೆ

ಸ್ಥಳೀಯ ಕಾಲಮಾನ ಬೆಳಿಗ್ಗೆ 7.05 ಗಂಟೆಗೆ ಮುಖ್ಯ ಆಘಾತವು 37 ಕಿಮೀ ವಾಯುವ್ಯ ಮಾಂಬೆರಾಮೊ ಟೆಂಗಾದಲ್ಲಿ 10 ಕಿಮೀ ಆಳದಲ್ಲಿ ಕೇಂದ್ರಬಿಂದುವಾಗಿದೆ ಎಂದು ಹೇಳಲಾಗಿದೆ.

ಈ ಆಘಾತಗಳು ಭೀತಿಯನ್ನು ಉಂಟುಮಾಡಿವೆ. ನಿವಾಸಿಗಳು ಕಟ್ಟಡಗಳು ಮತ್ತು ಮನೆಗಳ ಹೊರಗೆ ಧಾವಿಸಲು ಕಾರಣವಾಯಿತು ಎಂದು ಪ್ರಾಂತೀಯ ವಿಪತ್ತು ನಿರ್ವಹಣೆ ಸಂಸ್ಥೆ ತಿಳಿಸಿದೆ.




# ಡೆನ್ಮಾರ್ಕ್‌ನ ರಾಣಿ ಮಾರ್ಗರೆಟ್; ಸುದೀರ್ಘ ಸೇವೆ ಖ್ಯಾತಿ




**ಕೋಪನ್ ಹ್ಯಾಗನ್, ಸೆ 10** ಬ್ರಿಟನ್‌ನ ರಾಣಿ 2ನೇ ಎಲಿಜಬೆತ್‌ರ ಮರಣದ ನಂತರ ಡೆನ್ಮಾರ್ಕ್‌ನ ಜನಪ್ರಿಯ ರಾಣಿ ಮಾರ್ಗರೇಟ್ ಈಗ ಯುರೋಪಿನ ಸುದೀರ್ಘ ಸೇವೆ ಸಲ್ಲಿಸಿದ ರಾಣಿ ಖ್ಯಾತಿಗೆ ಪಾತ್ರರಾಗಿದ್ದಾರೆ.

ತನ್ನ 50 ವರ್ಷಗಳಲ್ಲಿ ಸಿಂಹಾಸನದಲ್ಲಿ ಡ್ಯಾನಿಶ್ ರಾಜಪ್ರಭುತ್ವವನ್ನು ಏಕೀಕರಿಸುವ ಮತ್ತು ಆಧುನೀಕರಿಸಿದ್ದಕ್ಕಾಗಿ ಪ್ರಶಂಸಿಸಲ್ಪಟ್ಟ ಮಾರ್ಗರೆಥೆ II ಗುರುವಾರ ಬ್ರಿಟನ್‌ನಲ್ಲಿ ಏಳು ದಶಕ ಸೇವೆ ಸಲ್ಲಿಸಿದ ರಾಣಿಯ ಮರಣದ ನಂತರ ಈ ವಾರಾಂತ್ಯದಲ್ಲಿಯೋಜಿತವಾಗಿದ್ದ ಸುವರ್ಣ ಮಹೋತ್ಸವದ ಹಬ್ಬಗಳನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿದ್ದಾರೆ..

ಸಿಂಹಾಸನದ ಮೇಲೆ 50 ವರ್ಷ ಮತ್ತು ಏಳು ತಿಂಗಳುಗಳಲ್ಲಿ, ಆಕೆಯ ಮೂರನೇ ಸೋದರಸಂಬಂಧಿ ರಾಣಿ ಎಲಿಜಬೆತ್ ಅವರ ಮರಣದ ನಂತರ ಯುರೋಪ್‌ನಲ್ಲಿ ಅತಿ ಹೆಚ್ಚುಕಾಲ ಆಳ್ವಿಕೆ ನಡೆಸಿದ ರಾಣಿಯಿವರು. ಆಕೆಯ ಮೊದಲ ಸೋದರ ಸಂಬಂಧಿ, ಸ್ವೀಡನ್‌ನ ಕಾರ್ಲ್ XVI ಗುಸ್ತಾಫ್ ಅವರು 48 ವರ್ಷಗಳ ಕಾಲ ರಾಜರಾಗಿದ್ದರು

ಬೆಲ್ಜಿಯಂ, ನೆದರ್ಲ್ಯಾಂಡ್ಸ್, ಸ್ಪೇನ್ ಮತ್ತು ಸ್ವೀಡನ್ ನಾಲ್ಕು ದೇಶಗಳು ಕಿರೀಟ ರಾಜಕುಮಾರಿಯರನ್ನು ಹೊಂದಿದ್ದರೂ ಮಾರ್ಗರೆಥೆ ಯುರೋಪಿನ ಏಕೈಕ ಆಳ್ವಿಕೆಯ ರಾಣಿ. ಮಾರ್ಗರೆಥೆ II ತನ್ನ ತಂದೆ ಫ್ರೆಡ್ರಿಕ್ IX ರ ಮರಣದ ನಂತರ ಜನವರಿ 1972ರಲ್ಲಿ 31ನೇ ವಯಸ್ಸಿನಲ್ಲಿ ಸಿಂಹಾಸನಕ್ಕೆ ಬಂದರು, ಡೆನ್ಮಾರ್ಕ್‌ನಲ್ಲಿ ರಾಣಿಯ ಸ್ಥಾನವನ್ನು ಅಲಂಕರಿಸಿದ ಮೊದಲ ಮಹಿಳೆ ಎಂಬ ಖ್ಯಾತಿಯೂ ಇವರದ್ದಾಗಿದೆ


1375–1412 ರವರೆಗೆ ಡೆನ್ಮಾರ್ಕ್ ಅನ್ನು ಆಳಿದ ಮಾರ್ಗರೆಥೆ ಐ ಅನ್ನು ಗುರುತಿಸಲು ಇವರು ತನ್ನ ಆಳ್ವಿಕೆಯ ಹೆಸರನ್ನು ಮಾರ್ಗರೆಥೆ ಖಖ ಎಂದು ಕರೆದುಕೊಂಡರು. ಆದರೆ ಔಪಚಾರಿಕವಾಗಿ ಶೀರ್ಷಿಕೆಯನ್ನು ಹೊಂದಿರಲಿಲ್ಲ.

ಆಕೆಯ ಪ್ರವೇಶದ ಸಮಯದಲ್ಲಿ, ಕೇವಲ 45 ಪ್ರತಿಶತದಷ್ಟು ಮಂದಿ ಡೇನ್ಸ್ ರಾಜಪ್ರಭುತ್ವದ ಪರವಾಗಿದ್ದರು, ಹೆಚ್ಚಿನವರು ಆಧುನಿಕ ಪ್ರಜಾಪ್ರಭುತ್ವದಲ್ಲಿ ಇದಕ್ಕೆ ಸ್ಥಾನವಿಲ್ಲ ಎಂದು ನಂಬಿದ್ದರು.

ತನ್ನ ಆಳ್ವಿಕೆಯಲ್ಲಿ,, ಮಾರ್ಗರೆಥೆ ಹಗರಣದಿಂದ ದೂರವಿರಲು ಪ್ರಯತ್ನಿಸಿದರು. ಆಡಳಿತ ಸಂಸ್ಥೆಯನ್ನು ಆಧುನೀಕರಿಸಲು ಸಹಾಯ ಮಾಡಿದರು –ತನ್ನ ಇಬ್ಬರು ಪುತ್ರರು ಸಾಮಾನ್ಯರನ್ನು ಮದುವೆಯಾಗಲು ಅವಕಾಶ ಮಾಡಿಕೊಟ್ಟರು.

ಇಂದು, ಡ್ಯಾನಿಶ್ ರಾಜಪ್ರಭುತ್ವವು ವಿಶ್ವದಲ್ಲೇ ಅತ್ಯಂತ ಜನಪ್ರಿಯವಾಗಿದೆ, 80 ಪ್ರತಿಶತ ಡೇನ್ಸ್‌ನ ಬೆಂಬಲವನ್ನು ಪಡೆದಿದೆ ಎಂದು ಅಂತರರಾಷ್ಟ್ರೀಯ ಮಾಧ್ಯಮ ವರದಿಗಳು ತಿಳಿಸಿವೆ.

# ಅಪರೂಪದ ಪ್ರಸಂಗ: ಅವಳಿ ಮಕ್ಕಳನ್ನು ಹೆತ್ತ ಮಹಿಳೆ, ಅಪ್ಪಂದಿರು ಮಾತ್ರ ಬೇರೆ ಬೇರೆ



**ಬ್ರೆಸಿಲಿಯಾ: ಸೆ.10:** ಕೆಲವೊಂದು ಘಟನೆಗಳು ವಿಜ್ಞಾನಲೋಕವನ್ನು ಅಚ್ಚರಿಗೀಡುಮಾಡುತ್ತವೆ. ಆಧುನಿಕ ಜಗತ್ತಿನಲ್ಲಿ, ತಂತ್ರಜ್ಞಾನ ಇಷ್ಟು ಮುಂದುವರಿದಿರುವಾಗಲೂ ನಿಸರ್ಗದ ಕೆಲವು ವೈಶಿಷ್ಟ್ಯಗಳಿಗೆ ಕಾರಣ ಪತ್ತೆ ಮಾಡುವುದು ಸುಲಭವಾಗುವುದಿಲ್ಲ. ಆದರೆ ಬ್ರೆಜಿಲ್‌ನಲ್ಲಿನ ಈ ಪ್ರಕರಣ ಮತ್ತಷ್ಟು ವಿಸ್ಮಯ ಮೂಡಿಸಿದೆ.

19 ವರ್ಷದ ಬ್ರೆಜಿಲ್ ಮಹಿಳೆಯೊಬ್ಬಳು ಅವಳಿ ಮಕ್ಕಳಿಗೆ ಜನ್ಮನೀಡಿದ್ದಾಳೆ. ವಿಶೇಷವೆಂದರೆ ಈ ಎರಡೂ ಮಕ್ಕಳ ತಂದೆ ಬೇರೆ ಬೇರೆ! ಇದು ಅಪರೂಪದಲ್ಲಿಯೇ ಅತಿ ಅಪರೂಪದ ವಿದ್ಯಮಾನ ಎನ್ನುತ್ತಾರೆ ವೈದ್ಯರು. ಹಾಗೆಂದು ಇದು ನಡೆಯುವುದಕ್ಕೆ ಸಾಧ್ಯವೇ ಇಲ್ಲವೆಂದಲ್ಲ.

ಅವಳಿ ಮಕ್ಕಳಿಗೆ ಜನ್ಮ ಕೊಟ್ಟ ಮಹಿಳೆ ಕೂಡ ಇದರಿಂದ ಆಘಾತಕ್ಕೆ ಒಳಗಾಗಿದ್ದಾಳೆ. ಇಂತಹ ಸನ್ನಿವೇಶ ಸಾಧ್ಯವೇ ಎನ್ನುವುದು ತನಗೆ ಗೊತ್ತೇ ಇರಲಿಲ್ಲ ಎಂದಿದ್ದಾಳೆ. ಒಂದೇ ದಿನ ಇಬ್ಬರು ವ್ಯಕ್ತಿಗಳ ಜತೆ ಆಕೆ ಲೈಂಗಿಕ ಕ್ರಿಯೆ ನಡೆಸಿದ್ದು, ಈ ವಿರಳ ವಿದ್ಯಮಾನಕ್ಕೆ ಕಾರಣ. 9 ತಿಂಗಳ ಬಳಿಕ ಆಕೆ ಅವಳಿ ಮಕ್ಕಳನ್ನು ಹೆತ್ತಿದ್ದಾಳೆ. ಒಂದು ವರ್ಷದವರೆಗೂ ಆಕೆಗೆ ಆ ಮಕ್ಕಳ ತಂದೆ ಯಾರು ಎನ್ನುವ ಬಗ್ಗೆ ಯೋಚನೆ ಶುರುವಾಗಿ ಮಕ್ಕಳ ಮೊದಲ ಜನ್ಮದಿನದ ವೇಳೆ. ಅದನ್ನು ಖಚಿತಪಡಿಸಿಕೊಳ್ಳಲು ಆಕೆ ಪಿತೃತ್ವ ಪರೀಕ್ಷೆ ನಡೆಸಲು ನಿರ್ಧರಿಸಿದ್ದಳು. ಆ ಮಕ್ಕಳ ತಂದೆ ಈತನೇ ಎಂದು ಆಕೆ ಬಲವಾಗಿ ನಂಬಿದ್ದ ವ್ಯಕ್ತಿಯ ಡಿಎನ್‌ಎ ಸಂಗ್ರಹಿಸಿದ್ದಳು. ಆದರೆ ಒಂದು ಮಗುವಿನ ಡಿಎನ್‌ಎ ಮಾತ್ರ ಹೊಂದಿಕೆಯಾಗಿತ್ತು.

"ಅದೇ ದಿನ ನಾನು ಮತ್ತೊಬ್ಬ ವ್ಯಕ್ತಿ ಜತೆಗೂ ಲೈಂಗಿಕ ಕ್ರಿಯೆ ನಡೆಸಿದ್ದು ನನಗೆ ನೆನಪಾಯಿತು. ಆತನಿಗೆ ಕರೆ ಮಾಡಿ ಪರೀಕ್ಷೆ ನಡೆಸಲು ಹೇಳಿದೆ. ಅದರಲ್ಲಿ ಪಾಸಿಟಿವ್ ಕಂಡುಬಂತು. ಫಲಿತಾಂಶ ಕಂಡು ನನಗೆ ಅಚ್ಚರಿಯಾಯ್ತು. ಈ ರೀತಿ ನಡೆಯುತ್ತದೆ ಎನ್ನುವುದು ನನಗೆ ಗೊತ್ತಿರಲಿಲ್ಲ. ಏಕೆಂದರೆ ಎರಡೂ ಮಕ್ಕಳು ಒಂದೇ ಥರ ಇವೆ" ಎಂದು ಮಹಿಳೆ ಸ್ಥಳೀಯ ಮಾಧ್ಯಮಕ್ಕೆ ತಿಳಿಸಿದ್ದಾಳೆ.

ಗೋಯಿಯಾಸ್‌ನ ಮೈನೆರಿಯೋಸ್ ಮೂಲದ ಮಹಿಳೆಯ ಹೆರಿಗೆ ಸುಸೂತ್ರವಾಗಿ ನಡೆದಿತ್ತು ಮತ್ತು ಎರಡೂ ಮಕ್ಕಳು ಆರೋಗ್ಯಯುತವಾಗಿ ಜನಿಸಿದ್ದವು ಎಂದು ವೈದ್ಯರು ತಿಳಿಸಿದ್ದಾರೆ. ಮಹಿಳೆಯ ಹೆಸರನ್ನು ಬಹಿರಂಗಪಡಿಸಿಲ್ಲ.

ಇಂತಹ ಅಪರೂಪದ ಘಟನೆ ಹತ್ತು ಲಕ್ಷದಲ್ಲಿ ಒಂದು ಎಂದು ಹೇಳಲಾಗಿದೆ. ಇದು ಬಹಳ ವಿರಳವಾದರೂ ಅಸಾಧ್ಯವಾಗಿದ್ದೇನೂ ಅಲ್ಲ. ಇದನ್ನು ಹೀಟೆರೋಪೇರೆಂಟಲ್ ಸೂಪರ್ ಫೆಕಂಡೇಷನ್ ಎಂದು ಕರೆಯಲಾಗುತ್ತದೆ.

"ಒಂದೇ ತಾಯಿಯ ಎರಡು ಅಂಡಾಣುಗಳು ವಿಭಿನ್ನ ಪುರುಷರ ವೀರ್ಯಾಣುಗಳ ಸೇರಿದಾಗ ಇದು ಸಾಧ್ಯ. ಮಕ್ಕಳು ತಾಯಿಯ ಅನುವಂಶೀಯ ಮೂಲವನ್ನು ಹೊಂದಿರುತ್ತವೆ, ಆದರೆ ಎರಡು ವಿಭಿನ್ನ ಹೊಕ್ಕಳು ಬಳ್ಳಿಗಳಲ್ಲಿ ಬೆಳೆಯುತ್ತವೆ" ಎಂದು ಮಹಿಳೆಯ ವೈದ್ಯ ಡಾ. ಟ್ಯುಲಿಯೋ ಜಾರ್ಜ್ ಫ್ರಾಂಕೋ ತಿಳಿಸಿದ್ದಾರೆ.

ವರದಿಗಳ ಪ್ರಕಾರ ಜಗತ್ತಿನಲ್ಲಿ ಕೇವಲ 20 ಹೀಟೆರೋಪೇರೆಂಟಲ್ ಸೂಪರ್‌ಫೆಕಂಡೇಷನ್ ಪ್ರಕರಣಗಳು ದಾಖಲಾಗಿವೆ. ಈ ಮಕ್ಕಳಿಗೆ ಈಗ 16 ತಿಂಗಳು. ಇಬ್ಬರು ತಂದೆಯರಲ್ಲಿ ಒಬ್ಬರು ಅವುಗಳನ್ನು ನೋಡಿಕೊಳ್ಳುತ್ತಿದ್ದಾರೆ. ಜೈವಿಕ ತಂದೆಯರು ಬೇರೆ ಬೇರೆಯಾದರೂ ದಾಖಲೆಗಳಲ್ಲಿ ಒಬ್ಬರ ಹೆಸರನ್ನು ಮಾತ್ರ ದಾಖಲಿಸಲಾಗುತ್ತದೆ.

# ಉಕ್ರೇನ್ : ವಾರದಲ್ಲಿ 1,000 ಚ.ಕಿ.ಮೀ ರಷ್ಯಾ ಸೇನೆ ಹಿಂದಕ್ಕೆ

**ಕೈವ್, ಸೆ 10:** ಕಳೆದ ವಾರದಲ್ಲಿ ರಷ್ಯಾದಿಂದ ತನ್ನ ದಕ್ಷಿಣ ಮತ್ತು ಪೂರ್ವದಲ್ಲಿ 1,000 ಚದರ ಕಿಲೋಮೀಟರ್‌ಗಿಂತಲೂ ಹೆಚ್ಚು ಪ್ರದೇಶವನ್ನು ಹಿಂಪಡೆದಿರುವುದಾಗಿ ಉಕ್ರೇನ್ ಹೇಳಿದೆ.

ಖಾರ್ಕಿವ್ ಪ್ರದೇಶದಲ್ಲಿ 30 ಕ್ಕೂ ಹೆಚ್ಚು ವಸಾಹತುಗಳನ್ನು ವಿಮೋಚನೆಗೊಳಿಸಲಾಗಿದೆ ಎಂದು ಅಧ್ಯಕ್ಷ ವೊಲೊಡಿಮಿರ್ ಝೆಲೆನ್ಸ್ಕಿ ಹೇಳಿದ್ದಾರೆ.

ಉಕ್ರೇನಿಯನ್ ಪಡೆಗಳು ಮಹತ್ವದ ವಿಜಯ ಗಳಿಸಿದೆ ಎಂದು ಖಾರ್ಕಿವ್ ಪ್ರದೇಶದಲ್ಲಿ ರಷ್ಯಾದ ಉನ್ನತ ಉದ್ಯೋಗದ ಅಧಿಕಾರಿ ಒಪ್ಪಿಕೊಂಡರು. ಉಕ್ರೇನಿಯನ್ನರು ರಷ್ಯಾದ ರಕ್ಷಣಾ ರೇಖೆಯನ್ನು ಭೇದಿಸಿದ್ದಾರೆ ಎಂದು ವಿಟಾಲಿ ಗಾಂಚೇವ್ ರಷ್ಯಾದ ಟಿವಿಗೆ ತಿಳಿಸಿದ್ದಾರೆ ಎಂದು ಬಿಬಿಸಿ ವರದಿ ತಿಳಿಸಿದೆ.

ರಷ್ಯಾದ ಹಿಡಿತದಲ್ಲಿರುವ ಖಾರ್ಕಿವ್‌ನ ಪ್ರಮುಖ ನಗರ ಕೇಂದ್ರಗಳಲ್ಲಿ ಒಂದಾದ ಕುಪಿಯಾನ್ಸ್ಕ ಮತ್ತು ಇತರ ಎರಡು ಪಟ್ಟಣಗಳಿಂದ ನಾಗರಿಕರನ್ನು ಸ್ಥಳಾಂತರಿಸಲಾಗುತ್ತಿದೆ ಎಂದು ಅವರು ಹೇಳಿದರು.

ಇನ್‌ಸ್ಟಿಟ್ಯೂಟ್ ಫಾರ್ ದಿ ಸ್ಟಡಿ ಆಫ್ ವಾರ್ ಥಿಂಕ್ ಟ್ಯಾಂಕ್‌ನ ವಿಶ್ಲೇಷಣೆಯ ಪ್ರಕಾರ,

> ■ ಉಕ್ರೇನಿಯನ್ ಪಡೆಗಳು ಮಹತ್ವದ ವಿಜಯ ಗಳಿಸಿದೆ ಎಂದು ಖಾರ್ಕಿವ್ ಪ್ರದೇಶ ದಲ್ಲಿ ರಷ್ಯಾದ ಉನ್ನತ ಉದ್ಯೋಗದ ಅಧಿಕಾರಿ ಒಪ್ಪಿಕೊಂಡರು. ಉಕ್ರೇನಿಯನ್ನರು ರಷ್ಯಾದ ರಕ್ಷಣಾ ರೇಖೆಯನ್ನು ಭೇದಿಸಿದ್ದಾರೆ ಎಂದು ವಿಟಾಲಿ ಗಾಂಚೇವ್ ರಷ್ಯಾದ ಟಿವಿಗೆ ತಿಳಿಸಿದ್ದಾರೆ ಎಂದು ಬಿಬಿಸಿ ವರದಿ ತಿಳಿಸಿದೆ.

ಕೈವ್‌ನ ಪಡೆಗಳು ಈಗ ಕುಪಿಯಾನ್ಸ್ಕ್‌ನಿಂದ ಕೇವಲ 15 ಕಿಮೀ ದೂರದಲ್ಲಿವೆ, ಮಾಸ್ಕೋ ತನ್ನ ಸೈನಿಕರನ್ನು ಯುದ್ಧಭೂಮಿಯಲ್ಲಿ ಪೂರೈಸಲು ಬಳಸುತ್ತಿರುವ ಅತ್ಯಗತ್ಯ ರೈಲ್ವೆ ಜಂಕ್ಷನ್‌ಗೆ ನೆಲೆಯಾಗಿದೆ ಎಂದು ಬಿಬಿಸಿ ಹೇಳಿದೆ.

ದೈತ್ಯ Mi-26 ಸಾರಿಗೆ ಹೆಲಿಕಾಪ್ಟರ್‌ಗಳನ್ನು ಬಳಸಿ, ಪ್ರತಿಯೊಂದೂ 80 ಸೈನಿಕರನ್ನು ಹೊತ್ತೊಯ್ಯುವ ಸಾಮರ್ಥ್ಯವನ್ನು ಹೊಂದಿರುವ ರಷ್ಯಾ ರಸ್ತೆ ಮತ್ತು ವಾಯುಮಾರ್ಗದ ಮೂಲಕ ಈ ಪ್ರದೇಶಕ್ಕೆ ಬಲವರ್ಧನೆಗಳನ್ನು ಕಳುಹಿಸುತ್ತಿದೆ ಎಂದು ನಂಬಲಾಗಿದೆ.



ಪ್ರತ್ಯೇಕ ಫೇಸ್‌ಬುಕ್ ಪೋಸ್ಟ್‌ನಲ್ಲಿ ಉಕ್ರೇನ್ ಸೇನೆಯು ಮೂರು ದಿನಗಳಲ್ಲಿ ಪಡೆಗಳು 50 ಕಿ.ಮೀ ಮುಂದುವರೆದಿದೆ ಎಂದು ಹೇಳಿದೆ. ಪರಿಶೀಲಿಸಿದರೆ, ಮಾರ್ಚ್‌ನಲ್ಲಿ ರಾಜಧಾನಿ ಕೈವ್‌ನ ಸುತ್ತಲಿನ ಸ್ಥಾನಗಳಿಂದ ರಷ್ಯಾದ ಪಡೆಗಳು ಕ್ಷಿಪ್ರವಾಗಿ ಹಿಮ್ಮೆಟ್ಟಿದಾಗಿನಿಂದ ಮುಂಚೂಣಿಯ ವೇಗದ ಚಲನೆಯನ್ನು ಅದು ಗುರುತಿಸುತ್ತದೆ ಎಂದು ಬಿಬಿಸಿ ಹೇಳಿದೆ.

ಖಾರ್ಕಿವ್‌ನ ಆಗ್ನೇಯ ದಿಕ್ಕಿನ ಆಕ್ರಮಣವು ಉಕ್ರೇನ್‌ನ ಪಡೆಗಳನ್ನು ಡೊನೆಟ್ಸ್ಕ್‌ನ ಪೂರ್ವ ಪ್ರದೇಶಕ್ಕೆ ಹತ್ತಿರ ತರುತ್ತದೆ, ಆರು ತಿಂಗಳ ಹಿಂದೆ ಯುದ್ಧವು ಪ್ರಾರಂಭವಾದಾಗಿನಿಂದ ರಷ್ಯಾ ಗಣನೀಯ ಮಿಲಿಟರಿ ನಿಯಂತ್ರಣವನ್ನು ಉಳಿಸಿಕೊಂಡಿದೆ.

ಅಲ್ಲಿ ಉಕ್ರೇನಿಯನ್ ಸೈನಿಕರನ್ನು ತೋರಿಸುವ ವೀಡಿಯೊ ಕಾಣಿಸಿಕೊಂಡರೂ ಉಕ್ರೇನಿಯನ್ ಪಡೆಗಳು ಬಲಾಕ್ಲಿಯಾ ಪಟ್ಟಣವನ್ನು ಪುನಃ ವಶಪಡಿಸಿಕೊಂಡಿರುವುದನ್ನು ಗಾಂಚೇವ್ ನಿರಾಕರಿಸಿದರು.

ಬಿಬಿಸಿ ವರದಿಯು ನಗರದ ಮೇಲೆ ಯಾರ ನಿಯಂತ್ರಣವನ್ನು ಹೊಂದಿದೆ ಎಂಬುದನ್ನು ಖಚಿತಪಡಿಸಲು ಸಾಧ್ಯವಾಗಲಿಲ್ಲ, ಆದರೆ ಪರಿಶೀಲಿಸಲಾದ ಸಾಮಾಜಿಕ ಮಾಧ್ಯಮ ಪೋಸ್ಟ್‌ಗಳು ಗುರುವಾರ ನಗರದ ಮಧ್ಯಭಾಗದಲ್ಲಿರುವ ಆಡಳಿತ ಕಟ್ಟಡಗಳಲ್ಲಿ ಉಕ್ರೇನಿಯನ್ ಧ್ವಜಗಳು ಹಾರುತ್ತಿರುವುದನ್ನು ತೋರಿಸುತ್ತವೆ.

ಉಕ್ರೇನ್ ದೇಶದ ಕೆಲವು ಭಾಗಗಳಲ್ಲಿ ತನ್ನ ಸೈನ್ಯವನ್ನು ಮುನ್ನಡೆಸಿದೆ ಎಂದು ಹೇಳಿಕೊಂಡರೆ, ಇತರ ಪ್ರದೇಶಗಳಲ್ಲಿ ರಷ್ಯಾದ ವೈಮಾನಿಕ ದಾಳಿಯನ್ನು ನವೀಕರಿಸಿದ ವರದಿಗಳಿವೆ.


ಶುಕ್ರವಾರ ಉಕ್ರೇನ್‌ನ ಈಶಾನ್ಯ ಸುಮಿ ಪ್ರದೇಶದ ಗವರ್ನರ್ ಡಿಮಿಟ್ರೋ ಝ್ವಿಟ್ಸ್ಕಿ ರಷ್ಯಾದ ವೈಮಾನಿಕ ದಾಳಿಯು ಆಸ್ಪತ್ರೆಯನ್ನು ನಾಶಗೊಳಿಸಿದೆ ಎಂದು ಹೇಳಿದರು, ಅನೇಕರು ಗಾಯಗೊಂಡಿದ್ದಾರೆ. ಹಕ್ಕನ್ನು ಪರಿಶೀಲಿಸಲು ಸಾಧ್ಯವಾಗಿಲ್ಲ ಎಂದು ಹೇಳಲಾಗಿದೆ.



ಪ್ಯಾರಿಸ್‌ನಲ್ಲಿ ನಡೆದ ಫ್ರೆಂಚ್‌ಲಿಗ್‌ನ ಮಹಿಳಾ ಫುಟ್‌ಬಾಲ್ ಪಂದ್ಯದಲ್ಲಿ ಫ್ರಾನ್ಸ್‌ನ ಸೇಂಟ್– ಜರ್ಮನಿಯ ಸೊಯಾಕ್ಸ್ ಚಾರೆಂಟೆ ಸೆಣಸಾಡಿದರು.

# ವಿರಾಟ್ ಕೊಹ್ಲಿ ನನಗಿಂತ ಕೌಶಲ್ಯಪೂರ್ಣ ಆಟಗಾರ: ಗಂಗೂಲಿ





**ನವದೆಹಲಿ: ಸೆಪ್ಟೆಂಬರ್ 10** ಭಾರತದ ಕ್ರಿಕೆಟಿಗ ವಿರಾಟ್ ಕೊಹ್ಲಿ ನನಗಿಂತ ಬಹಳ ಕೌಶಲ್ಯಪೂರ್ಣ ಆಟಗಾರ ಎಂದು ಬಿಸಿಸಿಐ ಅಧ್ಯಕ್ಷ ಮತ್ತು ಭಾರತದ ಮಾಜಿ ನಾಯಕ ಸೌರವ್ ಗಂಗೂಲಿ ಸ್ಟಾರ್ ಬ್ಯಾಟರ್ ವಿರಾಟ್ ಕೊಹ್ಲಿಯನ್ನು ಹೊಗಳಿದ್ದಾರೆ.

ಏಷ್ಯಾಕಪ್‌ನಲ್ಲಿ ಬ್ಯಾಟಿಂಗ್ ಮಾಡಿದ ಕೊಹ್ಲಿ, ಅಫ್ಘಾನಿಸ್ತಾನ ವಿರುದ್ಧದ ಪಂದ್ಯಾವಳಿಯ ಭಾರತ ಅಂತಿಮ ಪಂದ್ಯದಲ್ಲಿ ಶತಕ ಸಿಡಿಸಿದ್ದರು. ಗುರುವಾರ ನಡೆದ ತಮ್ಮ ಅಂತಿಮ ಸೂಪರ್ ಫೋರ್ಸ್ ಪಂದ್ಯದಲ್ಲಿ ಭಾರತ 101 ರನ್‌ಗಳ ಜಯವನ್ನು ದಾಖಲಿಸಿದ್ದರಿಂದ ಭಾರತದ ತಾರೆ ವಿರಾಟ್, 61 ಎಸೆತಗಳಲ್ಲಿ 122 ರನ್ ಗಳಿಸಿದರು. ಇದು 2019ರ ನಂತರ ಕೊಹ್ಲಿ ಅವರ ಮೊದಲ ಅಂತಾರಾಷ್ಟ್ರೀಯ ಶತಕವಾಗಿದೆ.

ಆಟಗಾರನಾಗಿ ಹೋಲಿಕೆಯು ಕೌಶಲ್ಯದ ದೃಷ್ಟಿಯಿಂದ ಇರಬೇಕು. ವಿರಾಟ್ ನನಗಿಂತ ಹೆಚ್ಚು ಕೌಶಲ್ಯಶಾಲಿ ಎಂದು ನಾನು ಭಾವಿಸುತ್ತೇನೆ. ನಾವು ವಿವಿಧ ತಲೆಮಾರುಗಳಲ್ಲಿ ಸಾಕಷ್ಟು ಕ್ರಿಕೆಟ್ ಆಡಿದ್ದೇವೆ. ನನ್ನ ಪೀಳಿಗೆಯಲ್ಲಿ ನಾನು ಆಡಿದ್ದೇನೆ ಮತ್ತು ಅವನು ಆಟವಾಡುವುದನ್ನು ಮುಂದುವರಿಸುತ್ತಾನೆ, ಬಹುಶಃ ನನಗಿಂತ ಹೆಚ್ಚು ಪಂದ್ಯಾವಳಿಗಳನ್ನು ಆಡುತ್ತಾನೆ. ಪ್ರಸ್ತುತ, ನಾನು ಅವರಿಗಿಂತ ಹೆಚ್ಚು ಆಡಿದ್ದೇನೆ. ಆದರೆ ಅವರು ಅದೆಲ್ಲವನ್ನೂ ಮೀರುತ್ತಾರೆ. ಅವರು ಪ್ರಚಂಡ ಎಂದು ಗಂಗೂಲಿ ಹೇಳಿದ್ದಾರೆ.

ಸೌರವ್ ಗಂಗೂಲಿ ಕೊಹ್ಲಿಗೆ ಬೆಂಬಲ ನೀಡುತ್ತಿರುವುದು ಇದೇ ಮೊದಲಲ್ಲ. ಏಷ್ಯಾ ಕಪ್‌ಗೆ ಮುಂಚಿತವಾಗಿ, ಇಂಡಿಯಾ ಟುಡೆಗೆ ನೀಡಿದ ಸಂದರ್ಶನದಲ್ಲಿ, ಅವರು ಅಭ್ಯಾಸ ಮಾಡಲಿ, ಪಂದ್ಯಗಳನ್ನು ಆಡಲಿ. ಅವರು ದೊಡ್ಡ ಆಟಗಾರ ಮತ್ತು ಸಾಕಷ್ಟು ರನ್ ಗಳಿಸಿದ್ದಾರೆ. ಅವರು ಪುನರಾಗಮನ ಮಾಡುತ್ತಾರೆ ಎಂಬ ಭರವಸೆ ನನಗಿದೆ. ಕೇವಲ ಶತಕ ಗಳಿಸಲು ಸಾಧ್ಯವಾಗುತ್ತಿಲ್ಲ ಮತ್ತು ಅವರು ಏಷ್ಯಾಕಪ್‌ನಲ್ಲಿ ತಮ್ಮ ನಿಲುವನ್ನು ಕಂಡುಕೊಳ್ಳುತ್ತಾರೆ ಎಂದು ನಾನು ನಂಬುತ್ತೇನೆ ಎಂದು ಗಂಗೂಲಿ ಹೇಳಿದರು.

## ಮಹಿಳಾ ಫುಟ್ಬಾಲ್ ವಿಶ್ವಕಪ್ ಲಾಂಛನ ಬಿಡುಗಡೆ

**ಭುವನೇಶ್ವರ(ಒಡಿಶಾ):** ಭಾರತದ ಆತಿಥ್ಯದಲ್ಲಿ ಫಿಫಾ 17 ವರ್ಷದೊಳಗಿನವರ ಮಹಿಳಾ ಫುಟ್ಬಾಲ್ ವಿಶ್ವಕಪ್ ನಾಳೆಯಿಂದ ಆರಂಭವಾಗಲಿದೆ. ಒಡಿಶಾ, ಗೋವಾ, ಮಹಾರಾಷ್ಟ್ರದಲ್ಲಿ ಪಂದ್ಯಾವಳಿಗಳು ನಡೆಯಲಿವೆ. ಒಡಿಶಾ ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರು ಹೋಸ್ಟ್ ಸಿಟಿ ಲೋಗೋವನ್ನು ಶನಿವಾರ ಬಿಡುಗಡೆ ಮಾಡಿದರು.

ಭಾರತದಲ್ಲಿ ನಡೆಯಲಿರುವ ಮೊದಲ ಫಿಫಾ ಮಹಿಳಾ ಫುಟ್ಬಾಲ್ ವಿಶ್ವಕಪ್ ಇದಾಗಿದೆ. ಅಕ್ಟೋಬರ್ 11 ರಿಂದ 30 ರವರೆಗೆ ಆಯೋಜಿಸಲಾಗಿದೆ. ಭಾರತ ತಂಡ ಎ ಗುಂಪಿನಲ್ಲಿ ಸ್ಥಾನ ಪಡೆದಿದ್ದು, ಅಮೆರಿಕಾ, ಮೊರಾಕೊ ಮತ್ತು ಬ್ರೆಜಿಲ್ ಜೊತೆಗೆ ಸೆಣಸಾಡಲಿದೆ. ಗುಂಪು ಹಂತದ ಪಂದ್ಯಗಳನ್ನು ಒಡಿಶಾದ ಭುವನೇಶ್ವರ ಕಳಿಂಗ ಕ್ರೀಡಾಂಗಣದಲ್ಲಿ ಆಡಲಿದೆ. ಪಂದ್ಯಗಳ ಟಿಕೆಟ್‌ಗಳನ್ನು fifa.com/tickets ನಿಂದ ಖರೀದಿಸಬಹುದು.



ಅಲ್ಜೀರಿಯಾದಲ್ಲಿ ನಡೆದ ಆಫ್ರಿಕಾ ಸೀನಿಯರ್ ಚಾಂಪಿಯನ್‌ಶಿಪ್‌ನಲ್ಲಿ ಮಹಿಳಾ ಸಿಂಗಲ್ಸ್ ಫೈನಲ್ ಪಂದ್ಯವನ್ನು ಗೆದ್ದ ನಂತರ ದಿನಾ ಮೆಶ್ರೆಫ್ ಫೋಟೋಗಳಿಗೆ ಪೋಸ್ ನೀಡಿದರು.



ದೋಹಾದ ಲುಸೇಲ್ ಸ್ಟೇಡಿಯಂನಲ್ಲಿ ನಡೆದ ಲುಸೈಲ್ ಸೂಪರ್ ಕಪ್ ಫುಟ್‌ಬಾಲ್ ಪಂದ್ಯದಲ್ಲಿ ಸೌದಿ ಅರೇಬಿಯಾದ ಅಲ್–ಹಿಲಾಲ್ ಮತ್ತು ಈಜಿಪ್ಟ್‌ನ ಜಮಾಲೆಕ್ ಅವರನ್ನು ಮಣಿಸಿ ಸಂಭ್ರಮಿಸಿದರು.